ಹೇಳಿದ್ದಾರೆ. ಕಾನೂನಿನ ಪರಿಧಿಯಲ್ಲಿ ಏನು ಮಾಡಬೇಕು, ಆ ರೀತಿ ಇದನ್ನು ಸರಿಪಡಿಸುವುದಕ್ಕೆ ನಾವು ಪ್ರಯತ್ನ ಮಾಡುತ್ತೇನೆ.

ಶಾಸನ ರಚನಾ ಕಾರ್ಯಕಲಾಪಗಳು

ಕನ್ನಡ ವಿಶ್ವವಿದ್ಯಾನಿಲಯ ವಿಧೇಯಕ 1991

ಪರ್ಯಾಲೋಚನಾ ಪ್ರಸ್ತಾವ

ಶ್ರೀ ಎಂ. ವೀರಪ್ಪ ಮೊಯಿಲಿ (ಶಿಕ್ಷಣ ಸಚಿವರು) : ಸನ್ಮಾನ್ಯ ಅಧ್ಯಕ್ಷರೇ 1991ನೇ ಸಾಲಿನ ಕನ್ನಡ ವಿಶ್ವವಿದ್ಯಾನಿಲಯ ವಿಧೇಯಕವನ್ನು ಪರ್ಯಾಲೋಚಿಸಬೇಕೆಂದು ಕೋರುತ್ತೇನೆ.

ಪ್ರಸ್ತಾವವನ್ನು ಮಂಡಿಸಲಾಯಿತು.

ಶ್ರೀ ಎಂ. ವೀರಪ್ಪ ಮೊಯಿಲಿ (ಶಿಕ್ಷಣ ಮತ್ತು ಸಂಸದೀಯ ವ್ಯವಹಾರಗಳ ಸಚಿವರು): ಸನ್ಮಾನ್ಯ ಉಪಾಧ್ಯಕ್ಷಣೆಯವರೇ, ಕನ್ನಡ ವಿಶ್ವವಿದ್ಯಾನಿಲಯವನ್ನು ಮಾಡಬೇಕೆಂದು ಹೇಳಿ ಈಗಾಲೇ ಸಾಕಷ್ಟು ಪ್ರಚಾರ ಆಗಿದೆ, ಪ್ರತ್ರಿಕೆಗಳಲ್ಲೂ ಕೂಡ ಬಂದಿದೆ. ಅದು ತಮಗೆ ಗೊತ್ತಿದೆ. ಇವರ ಪ್ರಾರಂಭ ಎಲ್ಲಿ ಆಯಿತು ಎಂದು ಹೇಳಿದರೆ ನಾವು 1980ನೇ ಇಸವಿಯಲ್ಲಿ ಒಂದು ಸಮಿತಿ ಮಾಡಿದ್ದೆವು. ಎಂ.ವಿ. ಕಾಮತ್ ಮತ್ತು ಇನ್ನಿತರ ಅನೇಕ ತಜ್ಞರು, ಹಂಪಿಯ ಬಗ್ಗೆ ಕನ್ನಡ ಸಂಸ್ಕೃತಿಯ ಬಗ್ಗೆ ಕಲೆಯ ಬಗ್ಗೆ ವಿಶೇಷವಾದ ಆಸಕ್ತಿ ಇರತಕ್ಕಂಥವರನ್ನು ಸೇರಿಸಿ ಈ ವಿಚಾರದಲ್ಲಿ ಒಂದು ಸಮಿತಿಯನ್ನು ಮಾಡಿದಾಗ ಹಂಪಿ ಪುನರುಜ್ಜೀವನ ಅಥವಾ ಹಂಪಿ ರಿಸೆಲೆಕ್ಷನ್ ಪ್ರಾಜೆಕ್ಟ್ ಎಂದು ಮಾಡಿದಾಗ, ಒಂದು ಉನ್ನತವಾದಂಥ ಸಾಂಸ್ಕೃತಿಕ ಕೇಂದ್ರವನ್ನು ಹಂಪಿಯಲ್ಲಿ ಪ್ರಾರಂಭ ಮಾಡಬೇಕೆಂದು ಮಾಡಿ, ಆ ರೀತಿಯಲ್ಲಿ ಇದು ಪ್ರಾರಂಭವಾಯಿತು. ಸನ್ಮಾನ್ಯ ಸಿಂಧ್ಯಾರವರ ಒಂದು ಪಕ್ಷದ ಸರಕಾರ ಇದ್ದಾಗ, ಮಾಜಿ ಕುಲಪತಿಗಳಾದಂಥ ಸನ್ಮಾನ್ಯ ಸದಾಶಿವ ಒಡೆಯರ್ ಅವರ ಅಧ್ಯಕ್ಷತೆಯಲ್ಲಿ ಒಂದು ಸಮಿತಿ ಅಥವಾ ಆಯೋಗ ಆಗಿ ಅವರು ಇದಕ್ಕೆ ಯಾವ ಸ್ವರೂಪ ಇರಬೇಕು ಎಂದು ವಿಚಾರ ಮಾಡಿ, ಆ ಸ್ವರೂಪದ ಬಗ್ಗೆ ಒಂದು ವರದಿಯನ್ನೂ ಕೂಡ ಕೊಟ್ಟರು. ಆ ವರದಿ ಪ್ರಕಟಣೆಯಾಗಿದೆ.

ಅದರ ಬಗ್ಗೆ ಕನ್ನಡದ ಜನತೆ ಸಾಕಷ್ಟು ತಿಳಿದುಕೊಂಡಿದ್ದಾರೆ. ನಾನು ವಿವರವಾಗಿ ಆಮೇಲೆ ಹೇಳುತ್ತೇನೆ. ಇಲ್ಲಿ ಪ್ರಾಸ್ತವಿಕವಾಗಿ ಕೆಲವು ವಿಚಾರಗಳನ್ನು ಮಾತ್ರ ಹೇಳುವುದಕ್ಕೆ ಇಷ್ಟಪಡುತ್ತೇನೆ. ಒಂದು ವಿಚಾರ ಏನು ಬಂತು ಎಂದರೆ, ತಮಿಳುನಾಡಿನಲ್ಲಿ ಒಂದು ತಮಿಳು ವಿಶ್ವವಿದ್ಯಾನಿಲಯವನ್ನು ಮಾಡಿರುತ್ತಾರೆ, ಆಂಧ್ರದಲ್ಲಿ ತೆಲುಗು ವಿಶ್ವವಿದ್ಯಾನಿಲಯವನ್ನು ಮಾಡಿರುತ್ತಾರೆ, ಪ್ರಮುಖವಾದಂಥ ದ್ರಾವಿಡ ಭಾಷೆಗಳಿಗೆ ಅನ್ವಯವಾಗುವಂತೆ ಅಲ್ಲಿನ ಸಂಸ್ಕೃತಿಗೆ ಅನ್ವಯವಾಗುವಂತೆ ಮಾಡಿಕೊಂಡು ಎರಡು ವಿಶ್ವವಿದ್ಯಾನಿಲಯವನ್ನು ಅವರು ಮಾಡಿದರು.

ಅವರು ಮಾಡಿದರು ಎಂದು ನೀವು ಏತಕ್ಕೆ ಮಾಡುತ್ತೀರಿ ಎಂದು ಒಂದು ವಿವಾದ ನಮ್ಮ ಮುಂದೆ ಬಂದಿದೆ. ಪ್ರಶ್ನೆ ಎಂದರೆ ಎಲ್ಲರೂ ಮಾಡಿದ್ದು ಆದಮೇಲೆ ನಾವು ಮಾಡುವುದು. ಎಲ್ಲರಿಗಿಂತ ನಾವೇ ಮೊದಲು ಮಾಡಬೇಕಿತ್ತು ಎಂಬುದು. ನಾನು ಹೇಳುವಹಾಗೆ ಇದ್ದರೆ, ನಮ್ಮ ಭಾಷೆ ನಮ್ಮ ನಾಡು ಎಂದು ಅಭಿಮಾನದಿಂದ ಹೇಳತಕ್ಕದಲ್ಲ ಆದರೆ ನಿಜವಾಗಿ ಹೇಳುವ ಹಾಗೆ ಇದ್ದರೆ ಇವತ್ತು ಕರ್ನಾಟಕದ ಸಂಗೀತ ಎಂದು ನಾವು ಕೇಳುತ್ತೇವೆ. ಕರ್ನಾಟಕ ಸಂಗೀತ ಎಂದರೆ ತ್ಯಾಗರಾಜರದ್ದು ತೆಲುಗರದ್ದು ಎಂದು ಹೇಳುತ್ತೇವೆ ತಮಿಳರದ್ದು ಎಂದು ಹೇಳುತ್ತೇವೆ ಮೊದಲಿನಿಂದಲೂ ಅಲ್ಲಿ ಪ್ರಾಮುಖ್ಯವಾಗಿ ಪ್ರಾಧಾನ್ಯವಾಗಿ ಬೆಳೆದುಕೊಂಡು ಬಂದಿದೆ. ಇದು. ಆದರೆ

ಕರ್ನಾಟಕ ಸಂಗೀತ ಪ್ರಾರಂಭವಾದುದು ಹಂಪಿಯಿಂದ ವಿದ್ಯಾರಣ್ಯರಿಂದ ಪ್ರಾರಂಭವಾದುದು. ಕರ್ನಾಟಕ ಸಂಗೀತ ಎಂದರೆ ದಕ್ಷಿಣ ಭಾರತದ ಸಂಗೀತ.

ಸಂಗೀತ ತೆಗೆದುಕೊಳ್ಳಿ ಅಥವಾ ಕಲೆಯ ಯಾವುದೇ ವಿಭಾಗಗಳನ್ನು ತೆಗೆದುಕೊಳ್ಳಿ, ಯಾವುದರಲ್ಲಿಯೂ ಕೂಡಾ ಬಹುಶಃ ಕರ್ನಾಟಕದಲ್ಲಿದ್ದಷ್ಟು ಸಂಪನ್ನವಾದ ಕಲಾಕ್ಷೇತ್ರ ನಾನು ಹೇಳುವುದು ಇದ್ದರೆ ಇಡೀ ದೇಶದಲ್ಲಿ ಇಲ್ಲ.

ನಾನು ಬೇಕಾದರೆ ಸಾಕಷ್ಟು ಪುರಾವೆ ಮಾಡಿ ತೋರಿಸುವುದಕ್ಕೆ ಸಿದ್ಧನಿದ್ದೇನೆ. ಚರ್ಚೆ ಆದರೆ ನೋಡೋಣ. ನಾವು ಏನು ಮಾಡುತ್ತೇವೆ ಎಂದರೆ ನಮ್ಮದು ಸ್ವಲ್ಪ ಸಂಕುಚಿತ ಮನೋಭಾವ. ನಾವು ನಮ್ಮ ಸೀಮೆಯನ್ನು ದಾಟಿ ಹೋಗುವುದಕ್ಕೆ ಮನಸ್ಸಿಲ್ಲ. ನಮ್ಮ ಜಿಲ್ಲೆ ದಾಟಿ ಹೋಗುವುದಕ್ಕೆ ಮನಸ್ಸಿಲ್ಲ.

ನಮ್ಮ ಕಲೆ ಯಾವ ರೀತಿ ಎಂದರೆ ಒಂದು ದ್ವೀಪದ ಹಾಗೆ ಆಗಿದೆ ಎಂದರೆ, ಕರ್ನಾಟಕ ರಾಜ್ಯದ ಒಂದು ಜಿಲ್ಲೆಯನ್ನು ಬಿಟ್ಟು ಮತ್ತೊಂದು ಜಿಲ್ಲೆಗೆ ಈ ಕಲಾಸೌರಭ ಹೋಗುವುದನ್ನು ನಾವು ತಡೆಗಟ್ಟುವುದಕ್ಕೆ ಪ್ರಯತ್ನ ಮಾಡುತ್ತಿದ್ದೇವೆ. ರಾಜ್ಯದ ಸೀಮೆಯ ಮಾತು ಬಿಟ್ಟು ಬಿಡಿ. ಇದರಿಂದಾಗಿ ಕಲೆಯ ವ್ಯಕ್ತಿತ್ವದಲ್ಲಿ, ಕಲೆಯ ಅಭಿವ್ಯಕ್ತಿಯಲ್ಲಿ ನಾವು ಕುಬ್ಜರಾಗುತ್ತಿದ್ದೇವೆಯೇ ಹೊರತು ಬೆಳೆಯತಕ್ಕ ಪ್ರಮೇಯ ಬರುವುದಿಲ್ಲ. ಒಂದು ಸಣ್ಣವಿಚಾರ ಹೇಳಿಬಿಡುತ್ತೇವೆ. ಪ್ರಾಸಂಗಿಕವಾಗಿ ಅಲ್ಲದಿದ್ದರೂ ಕೂಡಾ ನಾನು ವಿಚಾರ ಮಾಡಿದೆ. ತಮಿಳುನಾಡಿನಲ್ಲಿ ಕಾವೇರಿ ಟ್ರಿಬ್ಯೂನಲ್‌ನವರು ಸಂಚಾರ ಮಾಡುತ್ತಿದ್ದಾರೆ. ಅಲ್ಲಿ ಹತ್ತು ಲಕ್ಷ ಮಂದಿ ಬಂದು ಅವರನ್ನು ಸ್ವಾಗತ ಮಾಡಿದರು. ಇಲ್ಲಿ ನಾನು ಕೆಲವು ಮಕ್ಕಳನ್ನು ಹೊರಗೆ ತಂದರೆ, ಅಥವಾ ಶಾಲೆಯಿಂದ ಮಕ್ಕಳು ತಮ್ಮಿಂದ ತಾವೇ ಒಂದು ಸ್ವಾಗತ ಮಾಡಿದರೂ ಕೂಡಾ ಇದು ಬಹಳ ಲಕ್ಸುರಿಯಾಯಿತು ಎಂದು ಹೇಳುತ್ತೇವೆ, ಅವರು ಒಂದು ಸಾವಿರ ಪಟ್ಟು ಜಾಸ್ತಿ ಮಾಡಿರುತ್ತಾರೆ. ಇದರಿಂದ ನಮ್ಮಿಂದ ನಾವೇನೆ ಚಿಕ್ಕವರಾಗುತ್ತಿದ್ದೇವೆ. ಕರ್ನಾಟಕದಲ್ಲಿ, ಇದು ನಾನು ಹೇಳುತ್ತೇನೆ ಸ್ವಲ್ಪ ಹೆಚ್ಚು ಕಡಿಮೆ ಮಾಡಿದರೆ ನಾವು ವೈಭವ ಮಾಡಿದೆವು ಇದು ಮಾಡಿದೆವು ಎಂದು ತಿಳಿಯುವುದು ನಮಗೆ ದೊಡ್ಡವರಾಗಲಿಕ್ಕೆ ಮನಸ್ಸು ಇಲ್ಲ, ಇದು ನಮ್ಮ ದೌರ್ಬಲ್ಯ. ಇದರಲ್ಲಿ ಕೂಡ ನಾವು ಏನಾದರೂ ಕನ್ನಡ ವಿಶ್ವವಿದ್ಯಾನಿಲಯ ಮಾಡಬೇಕೆಂದು ಹೊರಟರೆ ಅವರು ಮಾಡಿದರು ನೀವು ಮಾಡುತ್ತೀರಿ. ಅನುಕರಣೆ ಮಾಡುತ್ತಿದ್ದೀರಿ, ಏತಕ್ಕೆ ಮಾಡುತ್ತಿದ್ದೀರಿ? ಏನು ಅಗತ್ಯ ಇದೆ. ಈ ರೀತಿಯಲ್ಲಿ ಆಗಿ ಬಹುಶಃ ನಮಗೆ ಮೇಲಕ್ಕೆ ಬರಲಿಕ್ಕೆ ಯಾವುದೋ ಒಂದು ಶಾಪ ಇರಬೇಕು. ಎಂದು ನನಗನಿಸುತ್ತದೆ. ಏಕೆಂದರೆ ನಾವು ಮುಂದೆ ಬರಲಿಕ್ಕೆ ತಯಾರು ಇಲ್ಲ, ನಮ್ಮ ಕನ್ನಡ ಕಲೆ ಅಲ್ಲಿಯೇ ಇರಬೇಕು.

ಅದು ಕೊನೆಗೆ ಸಣ್ಣ ಸಣ್ಣದಾಗಿ ಅಳಿದು ಹೋಗಬೇಕು. ಈ ಪರಿಸ್ಥಿತಿ ಇವತ್ತು ನಮ್ಮಲ್ಲಿ ಆಗುತ್ತಿದೆ. ಇವತ್ತು ತಮಗೆ ಗೊತ್ತಿದೆ. ತಮಿಳುನಾಡಿನವರು ಸೀಮೆ ಧಾಟಿ ಹೋಗಿದ್ದಾರೆ. ತೆಲುಗುನವರು ಅವರ ಸೀಮೆ ಧಾಟಿ ಅವರ ಸಂಸ್ಕೃತಿ ಮೇಲೆ ಹೋಗಿದ್ದಾರೆ. ಇವತ್ತು ಜಗತ್ತಿನಲ್ಲೇ ಕೇಳುತ್ತಾರೆ ಕತಕ್ಕಳಿ ಏನು ಎಂದು ಹೇಳಿದರೆ ಎಲ್ಲಿ ಗೊತ್ತಿದೆ, ಯಕ್ಷಗಾನ ಗೊತ್ತಿಲ್ಲ.

ಕತಕ್ಕಳಿ ನಮ್ಮ ಯಕ್ಷಗಾನ ಎದುರಿಗೆ ಏನೂ ಅಲ್ಲ. ಆ ಸೌಂದರ್ಯ ಆ ಕಲೆ ನಾವು ಇಲ್ಲಿ ಯಾವುದನ್ನೂ ಮಾರಲಿಕ್ಕೆ ಹೋಗುತ್ತಿಲ್ಲ. ಆದರೆ ನಮ್ಮ ಸಿರಿವಂತಿಕೆ ನಮ್ಮ ವ್ಯಕ್ತಿತ್ವ ನಾವು ತಿಳಿದುಕೊಳ್ಳದೆ ಅನೇಕ ಬಾರಿ ಏನೋ ಮಾತನಾಡಲಿಕ್ಕೆ ಹೋಗುತ್ತೇವೆ. ಇವತ್ತು ನಾವು ಏನು ಯೂನಿವರ್ಸಿಟಿ ಮಾಡುತ್ತಿದ್ದೇವೆ. ಅದು ವಿವರವಾಗಿ ನೀವೆಲ್ಲಾ ಹೇಳಿದ ಮೇಲೆ ಜಾಸ್ತಿ ಮಾತನಾಡುತ್ತೇನೆ.

ಈಗಲೇ ಮಾತನಾಡುವುದಕ್ಕೆ ಹೊರಟರೆ ಬಹಳ ಜಾಸ್ತಿ ಮಾತನಾಡಬೇಕು ಅನ್ನಿಸುತ್ತದೆ ಆದ್ದರಿಂದ ನಾನು ಮಾತನಾಡಲಿಕ್ಕೆ ಹೋಗುವುದಿಲ್ಲ ಸ್ವಲ್ಪ ಸಂಯಮ ಉಪಯೋಗ ಮಾಡಿಕೊಳ್ಳುತ್ತೇನೆ. ಆದರೆ ಪ್ರಶ್ನೆ ಏನೆಂದರೆ ಈಗ ನಾವು ಈ ವಿಶ್ವವಿದ್ಯಾನಿಲಯವನ್ನು ಬೇರೆ ವಿಶ್ವವಿದ್ಯಾನಿಲಯಗಳ ರೀತಿಯಲ್ಲಿ ರೂಪಿಸಿದರೆ ಆ ರೀತಿ ಇಲ್ಲ, ಕೆಲವರು ಕೇಳಬಹುದು ಕೆಲವರು ಏಕಪ್ಪಾ ಕನ್ನಡ ಅಧ್ಯಯನ ವಿಭಾಗ ಪ್ರತ್ಯೇಕವಾಗಿ ಪ್ರತಿ ವಿಶ್ವವಿದ್ಯಾನಿಲಯದಲ್ಲಿ ಕೂಡ ಇದೆ, ಇದೇಕೆ ಮಾಡುತ್ತೀರಿ? ಅವರಿಗೆ ಜಾಸ್ತಿ ಹಣ ಕೊಟ್ಟರೆ ಅವರೇ ಈ ಕೆಲಸ ಮಾಡಲಿ ಎಂದು ತಮಗೆ ನಾನು ಒಂದು ಸಣ್ಣ ಪ್ರಶ್ನೆ ಹಾಕುತ್ತೇನೆ. ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಸೈನ್ಸ್ ಇದೆ.

ಇದು ಜಗತ್ತಿನಲ್ಲೇ ಅತ್ಯಂತ ಶ್ರೇಷ್ಟವಾದಂತಹ ಒಂದು ವೈಜ್ಞಾನಿಕ ಸಂಸ್ಥೆ. ಈ ವಿಜ್ಞಾನಗಳನ್ನು ಬೇರೆ ವಿಶ್ವವಿದ್ಯಾನಿಲಯಗಳಲ್ಲಿ ಕಲಿಸಬಹುದಲ್ಲವೇ ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಸೈನ್ಸ್ ಏತಕ್ಕೆ ಬೇಕು? ಎಂದು ಹೇಳಿ ಪ್ರಾರಂಭಮಾಡುವಾಗ ಎಲ್ಲರೂ ಆಲೋಚನೆ ಮಾಡುತ್ತಿದ್ದರೆ ಇವತ್ತು ಅಂತಹ ಬೃಹತ್ ಆಕಾರದ ಭವ್ಯವಾದ ಇಡೀ ಜಗತ್ತಿಗೆ ವಿಜ್ಞಾನದಲ್ಲಿ ಒಂದು ನಾಯಕತ್ವವನ್ನು ಕೊಡತಕ್ಕಂಥ ಸಂಸ್ಥೆ ನಮ್ಮ ಬೆಂಗಳೂರಿನಲ್ಲಿ ಅಥವಾ ನಮ್ಮ ರಾಷ್ಟ್ರದಲ್ಲಿಯೇ ಬರುತ್ತಾ ಇರಲಿಲ್ಲ.

ಯಾವ ರೀತಿಯಲ್ಲಿ ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಸೈನ್ಸ್ ಎಕ್ಸಲೆನ್ಸ್ ಸೈನ್ಸ್‌ಗೆ ಪ್ರಾಮುಖ್ಯವೋ ಅದೇ ರೀತಿಯಲ್ಲಿ ನಾವು ಏನು ಯೂನಿವರ್ಸಿಟಿ ಇವತ್ತು ಮಾಡುತ್ತೇವೆ, ಸಾಹಿತ್ಯ ಸಂಸ್ಕೃತಿ ಕಲೆಯ ಒಂದು ಬೆಳವಣಿಗೆಗೆ ಇದು ಅದ್ಭುತವಾದಂತಹ ಒಂದು ಕೇಂದ್ರವಾಗುತ್ತದೆ. ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಸೈನ್ಸ್ ಇದೂ ಕೂಡ ಒಂದು ರೀತಿಯಲ್ಲಿ ಇದೆ.

ಯೂನಿಟರಿ ಟೈಪ್ ವಿಶ್ವವಿದ್ಯಾನಿಲಯ ಇವತ್ತು ಮಾಡುತ್ತಿದ್ದೇವೆ. ಸಾಹಿತ್ಯ ಸಂಸ್ಕೃತಿಗೆ ಇದು ಜಗತ್ತಿನಲ್ಲೆ ಅತ್ಯಂತ ಉತ್ಕೃಷ್ಟವಾದಂತಹ ಒಂದು ಕೇಂದ್ರವನ್ನಾಗಿ ಮಾಡತಕ್ಕಂಥ ಆಸೆ ನಮ್ಮದು. ಆ ಸ್ವರೂಪದಿಂದ ಇದನ್ನು ಮಾಡಿದ್ದೇವೆ. ಮತ್ತೆ ಕೊನೆಗೆ ಅದಕ್ಕೆ ತಕ್ಕ ನಾಯಕತ್ವವನ್ನು ಕೊಡತಕ್ಕಂಥ ಉಪಕುಲಪತಿಗಳನ್ನು ಹೊಂದಿಕೊಂಡಿರುತ್ತದೆ. ಅದನ್ನು ಯಾವ ರೀತಿಯಲ್ಲಿ ಮಾಡಬೇಕೋ ನಾವೆಲ್ಲಾ ಕುಳಿತುಕೊಂಡು ಮಾಡೋಣ ಇದೊಂದು ಸ್ವರೂಪ.

ಇಂತಹ ಒಂದು ಸಂಸ್ಥೆ ಇವತ್ತು ಕನ್ನಡದ ಒಂದು ಅಜ್ಞತ್ವ ಮೇಲೆ ಬರಲಿಕ್ಕೆ, ವಿಶಾಲವಾದಂತಹ, ಒಂದು ಶ್ರೇಷ್ಟವಾದಂತಹ ವ್ಯಕ್ತಿತ್ವವನ್ನು ಪಡೆಯಲಿಕ್ಕೆ ಇದು ಬಹಳ ಅವಶ್ಯಕ ಎಂದು, ಒಂದು ಉದ್ದೇಶದಿಂದ ನಾವು ಇದನ್ನು ಮಂಡನೆ ಮಾಡಿದ್ದೇವೆ. ಸಭೆ ಇದನ್ನು ವಿಶ್ಲೇಷಣೆ ಮಾಡಬೇಕು, ವಿಶ್ಲೇಷಣೆ ಮಾಡಿ ಅದಕ್ಕೆ ಮಂಜೂರಾತಿಯನ್ನು ಕೊಡಬೇಕೆಂದು ಹೇಳಿ ತಮ್ಮ ಮುಖೇನ ನಾನು ತಮ್ಮನ್ನು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ಆಮೇಲೆ ನಾವು ಒಂದು ಸಣ್ಣ ತಿದ್ದುಪಡಿಯನ್ನು ಮಾಡಿದ್ದೇವೆ. ಚಾನ್ಸಲರ್ ಇಸ್ ದಿ ಚೀಫ್ ಮಿನಿಸ್ಟರ್. ಏಕೆಂದರೆ ರಾಜ್ಯಪಾಲರನ್ನು ಮಾಡಿದರೆ ಆಗುವುದಿಲ್ಲ.

ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ): ಮಾನ್ಯ ಉಪಾಧ್ಯಕ್ಷರೇ ಈ ದಿನ ಕನ್ನಡದ ವಿಶ್ವವಿದ್ಯಾನಿಲಯ ವಿಧೇಯಕವನ್ನು ತರುವ ಮೂಲಕ ಈ ಸಭೆಯಲ್ಲಿ ಕನ್ನಡದ ಕಂಪು ಕಂಡಿದೆ, ಅದಕ್ಕೆ ತಕ್ಕ ಭೂಮಿಕೆಯನ್ನು ಈ ಸರ್ಕಾರ ಕೊಟ್ಟಿದೆ. ಅದಕ್ಕೆ ನಾನು ಬಹಳ ಸಂತೋಷದಿಂದ ಅಭಿಮಾನದಿಂದ ಈ ವಿಧೇಯಕವನ್ನು ಸ್ವಾಗತ ಮಾಡುತ್ತೇನೆ.

ಇದು ನಿಜವಾಗಲೂ ಮೆಚ್ಚತಕ್ಕಾಂಥದ್ದು. ಕನ್ನಡದ ಬೆಳವಣಿಗೆಯಲ್ಲಿ ಒಂದು ಹೊಸ ಮೈಲಿಗಲ್ಲನ್ನೇ ಸರ್ಕಾರ ಸ್ಥಾಪಿಸಿದೆ. ಒಂದು ಇತಿಹಾಸವನ್ನೇ ಸೃಷ್ಟಿ ಮಾಡಿದೆ.

ಅತ್ಯಂತ ಪ್ರಮುಖವಾದ ಈ ಒಂದು ಮಸೂದೆ ತರುವ ಬಗ್ಗೆ ಸಚಿವರಾದ ಮಾನ್ಯ ಮೊಯಿಲಿಯವರು ತಮ್ಮ ಕನ್ನಡದ ಬಗ್ಗೆ ಧೀಮಂತ ಪ್ರದರ್ಶನವನ್ನು ಮಾಡಿಕೊಂಡಿದ್ದಾರೆ. ನಾನು ಅವರನ್ನು ಈ ನಾಡಿನ ಸಮಸ್ತ ಕನ್ನಡಿಗರ ಪರವಾಗಿ ಅಭಿನಂದಿಸುತ್ತೇನೆ. ಕನ್ನಡದ ವಿಶ್ವವಿದ್ಯಾನಿಲಯದ ಬಗ್ಗೆ ಒಂದು ಚಿಂತನೆ, ವಾದ ವಿವಾದಗಳು ರಾಜ್ಯದ ಮೂಲೆ ಮೂಲೆಗಳಲ್ಲಿ ನಡೆಯುತ್ತಿವೆ. ಇನ್ನು ಮುಂದೆ ಈ ವಾದ ವಿವಾದಗಳಿಗೆ, ಅಂತಿಮವಾಗಿ ಒಂದು ಸ್ವರೂಪವನ್ನು ಕೊಡಲಾಗಿದೆ.

ತಮಿಳುನಾಡಿನಲ್ಲಿ ತಮಿಳು ಭಾಷೆ ಬಗ್ಗೆ ವಿಶ್ವವಿದ್ಯಾನಿಲಯ ಮಾಡಿರಬಹುದು, ಆಂಧ್ರದಲ್ಲಿ ತೆಲುಗು ಭಾಷೆ ಬಗ್ಗೆ ವಿಶ್ವವಿದ್ಯಾನಿಲಯ ಮಾಡಿರಬಹುದು. ಅವೆಲ್ಲಾ ವಿಶ್ವವಿದ್ಯಾನಿಲಯಗಳನ್ನು ಮೀರಿ ನಿಲ್ಲತಕ್ಕಂಥ ಒಂದು ಶಕ್ತಿ ಈ ವಿಶ್ವವಿದ್ಯಾನಿಲಯಕ್ಕೆ ಬರುತ್ತದೆಂದು ನಾನು ಅಂದುಕೊಂಡಿದ್ದೇನೆ.

ಇವರು ಹಾಕಿಕೊಂಡಿರತಕ್ಕ ಮಾರ್ಗ, ಈ ವಿಧೇಯಕದಲ್ಲಿ ಹೇಳಿರತಕ್ಕಂಥ ಅನೇಕ ವಿಚಾರಗಳನ್ನು ನೋಡಿದಾಗ ಬಹುಶಃ ಈ ವಿಶ್ವವಿದ್ಯಾನಿಲಯವು ಹಿಮಾಲಯ ಪರ್ವತದ ಮಟ್ಟಕ್ಕೆ ಏರುತ್ತದೆಂದು ನಾನು ತಿಳಿದುಕೊಂಡಿದ್ದೇನೆ. ಬೇರೆಯವರು ಇದರ ಬಗ್ಗೆ ವಿಚಾರ ಮಾಡಿದ ಮೇಲೆ ನೀವು ಮಾಡಿದ್ದೀರೆಂದು ಕೆಲವರು ಹೇಳಬಹುದು. ಬೇರೆಯವರು ಯೋಚನೆ ಮಾಡಿದ್ದನ್ನು ನೀವು ಮಾಡಬಾರದೆಂದು ಎಲ್ಲೂ ಇಲ್ಲ. ತಮಿಳುನಾಡು ಮತ್ತು ಆಂಧ್ರ ಪ್ರದೇಶದಲ್ಲಿ ಮಾಡಿರುವುದನ್ನು ನೋಡಿ ನಾವು ಮಾಡಿದೆವು ಎನ್ನತಕ್ಕಂಥ ಪ್ರಶ್ನೆ ಇದಲ್ಲ.

ಈ ವಿಶ್ವವಿದ್ಯಾನಿಲಯದ ಕನಸು ಬಹಳ ದಿವಸಗಳ ಒಂದು ಪರಿಶ್ರಮ, ಬಹಳ ದಿವಸಗಳ ಒಂದು ಚಿಂತನೆ ಇದರಲ್ಲಿ ಅಡಗಿದೆ. ಮಾನ್ಯ ಕವಿ ಕುವೆಂಪುರವರು ಏನು ಹೇಳಿದ್ದಾರೆ? "ಎಲ್ಲಾದರು ಇರು, ಎಂತಾದರೂ ಇರು ಎಂದೆಂದಿಗೂ ನೀ ಕನ್ನಡದವನಾಗಿರು, ನೀ ಮೆಟ್ಟುವ ನೆಲವೇ ಕರ್ನಾಟಕ, ನೀ ಕುಡಿಯುವ ನೀರು ಕಾವೇರಿ, ನೀ ಏರುವ ಮಲೆ ಸಹ್ಯಾದ್ರಿ". ಈ ರೀತಿ ಬರೆದು ಕನ್ನಡದ ಬಗ್ಗೆ ಅಭಿಮಾನ ತರತಕ್ಕಂಥ ಇಂಥ ಅನೇಕ ಕನ್ನಡ ಸಾಹಿತ್ಯವನ್ನು ಕವಿತ್ವದೊಳಗೆ ಬರೆದು ಈ ನಾಡಿಗೆ ಹೊಸ ಬೆಳಕನ್ನು ಚೆಲ್ಲಿದ್ದಾರೆ. ಕನ್ನಡ ಸಾಹಿತ್ಯದಲ್ಲಿ ಜಿ.ಪಿ. ರಾಜರತ್ನಂ, ಡಾ. ಶಿವರಾಮ ಕಾರಂತ, ದ.ರಾ. ಬೇಂದ್ರೆ, ಡಾ. ಗೋಪಾಲ ಕೃಷ್ಣ ಅಡಿಗರು, ಒಬ್ಬರೇ? ಇಬ್ಬರೇ? ಪುಂಖಾನು ಪುಂಖವಾಗಿ ಕನ್ನಡ ಸಾಹಿತಿಗಳು ಅಪಾರವಾಗಿ ಕನ್ನಡದ ಬೆಳವಣಿಗೆಗೆ ಸೇವೆ ಸಲ್ಲಿಸಿದ್ದಾರೆ.

ಮಾನ್ಯ ಮಾಸ್ತಿ ವೆಂಕಟೇಶ ಅಯ್ಯಂಗಾರರು ಕೋಲಾರ ಜಿಲ್ಲೆಯವರೇ ಆಗಿದ್ದರು. ಇವತ್ತು ನೀವು ಮಾಡಿರತಕ್ಕಂಥ ಈ ವಿಶ್ವವಿದ್ಯಾನಿಲಯ ಒಂದು ಶ್ರೇಷ್ಠವಾದಂಥ ವಿಶ್ವವಿದ್ಯಾನಿಲಯವಾಗುತ್ತದೆ. ನಾಡಿನ ಒಳಗೆ, ನಾಡಿನ ಹೊರಗೆ ಹಾಗೂ ವಿದೇಶಗಳಲ್ಲಿರುವ ಪ್ರತಿ ಕನ್ನಡಿಗನ ಭೌತಿಕ ಹಾಗೂ ಸೃಜನಶೀಲ ಅವಶ್ಯಕತೆಗಳನ್ನು ತುಂಬಿಕೊಡುವುದಕ್ಕೆ ಈ ವಿಶ್ವವಿದ್ಯಾನಿಲಯದಿಂದ ಸಾಧ್ಯವಾಗುತ್ತದೆ. ಭಾಷೆ ಮತ್ತು ಸಂಸ್ಕೃತಿಗೂ ಒಂದು ನಾಣ್ಯದ ಎರಡು ಮುಖಗಳಿದ್ದಂತೆ. ಭಾಷೆ ಮತ್ತು ಸಂಸ್ಕೃತಿ ಇವೆರಡೂ ಇದರಲ್ಲಿ ಅಡಕವಾಗಿವೆ. ಒಂದು ಕಡೆ ಭಾಷೆ, ಮತ್ತೊಂದು ಕಡೆ ಕನ್ನಡದ ಸಂಸ್ಕೃತಿ ಇವೆರಡೂ ಅಡಕವಾಗಿರುವುದು ಅಮೂಲ್ಯವಾದುದು. ಆದುದರಿಂದ, ಈ ವಿಶ್ವವಿದ್ಯಾನಿಲಯಕ್ಕೆ ಕನ್ನಡ ಸಾರ್ವಭೌಮತ್ವ ಬರುತ್ತದೆ. ಕನ್ನಡವನ್ನು ಶ್ರೇಷ್ಠ ಮಟ್ಟಕ್ಕೆ ತೆಗೆದುಕೊಂಡು ಹೋಗಬೇಕು.

ಕನ್ನಡ ಶ್ರೇಷ್ಠ ಮಟ್ಟವನ್ನು ಮುಟ್ಟುತ್ತದೆ. ಈ ವಿಶ್ವವಿದ್ಯಾನಿಲಯದ ಸ್ಥಾಪನೆಯಿಂದ ಬೇರೆ ವಿಶ್ವವಿದ್ಯಾನಿಲಯಗಳಲ್ಲಿ ಕನ್ನಡ ಅಧ್ಯಯನ ಬೆಳವಣಿಗೆ ತೊಂದರೆ ಆಗಬಹುದು. ಅದರ ಬೆಳವಣಿಗೆ ಕುಂಠಿತ ಆಗಬಹುದು ಎನ್ನುವ ಚಿಂತನೆ ಇರಬಹುದು. ಈ ಬಗ್ಗೆ ಮಾನ್ಯ ಸಚಿವರ ಗಮನಕ್ಕೆ ಕಳಕಳಿಯಿಂದ ಪ್ರಾರ್ಥಿಸುತ್ತೇನೆ. ಏನೆಂದರೆ ಬೇರೆ ಬೇರೆ ವಿಶ್ವವಿದ್ಯಾನಿಲಯದಲ್ಲಿರತಕ್ಕ ಕನ್ನಡ ಅಧ್ಯಯನ ವಿಭಾಗಗಳಿಗೆ ಯಾವುದೇ ಒಂದು

ಸ್ವರೂಪ ಬದಲಾವಣೆ ಆಗಲಿ ಅವರಿಗೆ ಕೊಡತಕ್ಕ ಶಕ್ತಿಯಲ್ಲಿ ಯಾವುದೇ ಸ್ವರೂಪದ ಬದಲಾವಣೆ ಆಗಬಾರದು. ಇದು ಒಂದು ಸರ್ಕಾರದ ನೀತಿ ಆಗಬೇಕು. ಕನ್ನಡ ಮತ್ತು ಕರ್ನಾಟಕದ ಸಂಸ್ಕೃತಿಯ ಮಹಾ ವಿಶ್ವವಿದ್ಯಾನಿಲಯ ಇದಾಗಬೇಕು. ಇದರಲ್ಲಿ ಬೇರೆ ಭಾಷೆ ಒಂದೇ ಅಲ್ಲ, ನಮ್ಮ ಸಂಸ್ಕೃತಿಗೆ ಎಷ್ಟು ತಳಹದಿಯನ್ನು ಕೊಡಬೇಕು, ಸಂಸ್ಕೃತಿಯನ್ನು ಬೆಳೆಸುವುದಕ್ಕೆ ಎಷ್ಟು ಶಕ್ತಿಯನ್ನು ಕೊಡಬೇಕು. ಯಾವ ಯಾವ ಪ್ರಕಾರಗಳಲ್ಲಿ ನಮ್ಮ ಭಾಷೆಯ ಬೆಳವಣಿಗೆ. ಇದು ಕೇವಲ ಯಾವುದೇ ಒಂದು ವಿಶ್ವವಿದ್ಯಾಲಯ ಅಲ್ಲ. ಇದಕ್ಕೆ ಒಂದು ಶಕ್ತಿಯ ಕಣ ಇರಬೇಕು. ಮಂತ್ರದ ಕಣ ಇರಬೇಕು.

ಇಂತಹ ಒಂದು ಹತ್ತಿರ ಶಕ್ತಿ ಇದರಲ್ಲಿ ಅಡಕ ಆಗಬೇಕು. ಈ ಮಸೂದೆ ತಂದಿರುವುದಕ್ಕೆ ನಾನು ಬಹಳ ಸಂತೋಷಪಡುತ್ತೇನೆ. ನಿಮ್ಮ ಒಂದು ಭಾವನೆಗಳು, ನಿಮ್ಮ ಒಂದು ನೀತಿಗಳು ಇದರಮೇಲೆ ನಿರ್ಧಾರ ಆಗಬೇಕಾಗುತ್ತದೆ.

ಈ ವಿಶ್ವವಿದ್ಯಾನಿಲಯ ತರತಕ್ಕ ನಿಮ್ಮ ಹಿನ್ನೆಲೆ ನಿಜಕ್ಕೂ ಬಹಳ ಮೆಚ್ಚತಕ್ಕದ್ದು. ಸ್ಥಳ ಯಾವುದು ಎಂದರೆ ಅತ್ಯಂತ ವೈಭವ ಆದ ಈ ನಾಡನ್ನು ಆಳಿದಂತಹ, ಈ ಸಾಮ್ರಾಜ್ಯವನ್ನು ಆಳಿದಂತಹ ಕರ್ನಾಟಕದ ವೈಭವವನ್ನು ಕಂಡಂತಹ, ಕೃಷ್ಣದೇವರಾಯನ ವಿಜಯನಗರ ಸಾಮ್ರಾಜ್ಯದ ವೈಭವ ಏನಿತ್ತು ಆ ಜಾಗ ಇಂದು ಹಾಳು ಹಂಪೆಯಾಗಿದೆ. ಈಗ ಈ ಹಾಳು ಹಂಪೆಗೆ ಶೋಭೆ ತಂದು ಈ ಹಾಳು ಹಂಪೆಗೆ ಬೇರೆ ಒಂದು ರೂಪವನ್ನು ತರತಕ್ಕಂಥ ಪ್ರಯತ್ನವನ್ನು ನೀವು ಈಗ ಮಾಡುತ್ತಿದ್ದೀರಿ. ಈ ಹಳೆಯ ವೈಭವಕ್ಕೆ ಮತ್ತೊಮ್ಮೆ ಜೀವಕಳೆಯನ್ನು ತುಂಬತಕ್ಕ ಕೆಲಸವನ್ನು ನೀವು ಈಗ ಮಾಡುತ್ತಿದ್ದೀರಿ. ಈ ಸ್ಥಳವನ್ನು ಆಯ್ಕೆ ಮಾಡಿರುವುದು ನಿಜವಾಗಿಯೂ ಮೆಚ್ಚತಕ್ಕದ್ದು. ಹಂಪೆ ಎಷ್ಟು ಮಾಧುರ್ಯ ಸ್ಥಳ, ಇದಕ್ಕೆ ಗಾಂಭೀರ್ಯ ಮತ್ತು ಮಹಿಮೆ ಇದೆ. ಈ ಸರ್ಕಾರದ ನಿರ್ಧಾರವನ್ನು ನಾನು ಮೆಚ್ಚುತ್ತೇನೆ.

ಈ ಬಗ್ಗೆ ವಾದ ವಿವಾದ ಇದೆ. ಅನೇಕ ಜನ ದೊಡ್ಡ ದೊಡ್ಡ ಮಹಾ ಮೇಧಾವಿಗಳು. ಸಾಹಿತಿಗಳು, ತಮ್ಮ ಬೇರೆ ಬೇರೆ ರೀತಿಯ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ. ಅದು ನಮ್ಮ ಮನೆಯ ಜಗಳ. ಆದರೆ ನಮ್ಮ ಮೂಲ ಉದ್ದೇಶ ಏನು ಇದೆ. ಕನ್ನಡ ವಿಶ್ವವಿದ್ಯಾಲಯ ಚಾಲನೆ ಆಗಬೇಕು ಎಂದು ಇದರ ಬಗ್ಗೆ ಬೇರೆ ಮಾತೇ ಇಲ್ಲ, ಮೊಸರಿನ ಕೆನೆ ಎಷ್ಟು ರುಚಿ ಅದೇ ರೀತಿ ನಮ್ಮ ಕನ್ನಡ ಸಾಹಿತ್ಯ. ಈಗ ನಮಗೆ ವಚನ ಸಾಹಿತ್ಯ ಗ್ರಂಥಗಳು ಸಿಕ್ಕಿರುವುದು ಶೇಕಡಾ 5ರಿಂದ 10. ಬೆಣ್ಣೆಯನ್ನು ಮಾಡಿ ತುಪ್ಪವನ್ನು ಮಾಡಿ ಎಷ್ಟು ರುಚಿಯಾಗಿರುತ್ತದೆ. ಅದೇ ರೀತಿ ಈ ಕನ್ನಡದ ಕೆನೆ ರುಚಿ ವಚನ ಸಾಹಿತ್ಯದಲ್ಲಿ ಸಿಗುತ್ತವೆ. ಅದೇ ರೀತಿ ಈ ವಚನ ಸಾಹಿತ್ಯ ಗ್ರಂಥಗಳು ಸಿಕ್ಕಿರುವುದು ಕರ್ನಾಟಕದಲ್ಲಿ. ಈ ಸಾಹಿತ್ಯದ ಸಂಗ್ರಹಣೆಗಳು, ಪ್ರಕಟಣೆ ಹಾಗೂ ಬೃಹತ್ ಯೋಜನೆಗಳು ಇನ್ನೂ ಲಕ್ಷಗಟ್ಟಲೆ ವಚನ ಸಂಗ್ರಹಗಳು ಆಗಬೇಕಾಗಿದೆ. ಈ ಕೆಲಸವನ್ನು ಈ ಕನ್ನಡ ವಿಶ್ವವಿದ್ಯಾನಿಲಯ ಮಾಡಬೇಕು. ಇದರ ಜೊತೆಗೆ ಜಾನಪದ ಗೀತೆಗಳು, ಜಾನಪದ ಕಥೆಗಳು, ಜಾನಪದ ನಾಟಕಗಳು, ಜಾನಪದ ಕಾವ್ಯಗಳು, ಜಾನಪದ ರೂಢಿಗಳು, ಜಾನಪದ ಒಗಟುಗಳು, ಜಾನಪದ ಗಾದೆಗಳನ್ನು ಬೆಳೆಸಲು ಈ ವಿಶ್ವವಿದ್ಯಾನಿಲಯ ಕ್ರಮ ಕೈಗೊಳ್ಳಬೇಕು.

ಇಂಥ ಅನೇಕ ಜಾನಪದ ಸಂಸ್ಕೃತಿಯ ಪ್ರತೀಕವನ್ನು ಸಂಶೋಧನೆ ಮಾಡಿ ಈ ವಿಶ್ವವಿದ್ಯಾನಿಲಯವು ಆ ಕೆಲಸವನ್ನು ಮಾಡಬೇಕಾಗಿದೆ. ಜಾನಪದ ಸಾಹಿತ್ಯದ ಬಗ್ಗೆ, ಆಡುಭಾಷೆ, ಗ್ರಾಮೀಣ ಭಾಷೆ, ಜಾನಪದ, ಇದರ ಬಗ್ಗೆ ನಾವು ಎಷ್ಟು ಸಂಶೋಧನೆಗಳನ್ನು ನಡೆಸಿದ್ದೇವೆ? ಈ ಎಲ್ಲಾ ಸಂಶೋಧನೆಗಳು ಕೂಡ ಈ ವಿಶ್ವವಿದ್ಯಾನಿಲಯದ ಮೂಲಕ ಆಗಬೇಕು. ಇದುವರೆವಿಗೂ ಒಂದು ಜಾನಪದ ನಿಘಂಟು ನಮ್ಮಲ್ಲಿಲ್ಲ. ಈ ನಿಘಂಟು ಅತಿ ಮುಖ್ಯವಾದುದು. ಇದು ನಮಗೆ

ಇವೊತ್ತು ಬೇಕಾಗಿದೆ. ಹಳ್ಳಿಗಾಡಿನ ಜನರ ನಾಲಿಗೆಯಮೇಲೆ, ಶುದ್ಧ ಅಚ್ಚ ಹದಿನಾರಾಣೆ ಕನ್ನಡದ ಪದಗಳು ಇದ್ದರೆ ಅದು ಜಾನಪದ. ಸಾಹಿತ್ಯವನ್ನೊಳಗೊಂಡಂಥ ಗ್ರಾಮೀಣ ಭಾಷೆ. ಆ ಜಾನಪದ ನಿಘಂಟು ಈಗ ಅತ್ಯಂತ ಅವಶ್ಯಕವಾಗಿ . ಆಗಬೇಕಾಗಿದೆ. ಇದನ್ನು ವಿಶ್ವವಿದ್ಯಾನಿಲಯದವರು ಕೈಗೊಳ್ಳಬೇಕಾಗುತ್ತದೆ. ನಮ್ಮಲ್ಲಿ ವ್ಯವಸಾಯ ನಿಘಂಟು ಇಲ್ಲ, ಒಂದು ಕಡೆ ಜಾನಪದವಾದರೆ ಮತ್ತೊಂದು ಕಡೆ ವ್ಯವಸಾಯ. ವ್ಯವಸಾಯಕ್ಕೂ ಒಂದು ನಿಘಂಟು ಆಗಬೇಕು. ವ್ಯವಸಾಯಕ್ಕೆ ಸಂಬಂಧಪಟ್ಟಂಥ ಅನೇಕ ಚಿಂತನೆಗಳು, ಅನೇಕ ವಿಚಾರಗಳು ಇದರಲ್ಲಿ ಬರಬೇಕು. ಕನ್ನಡದ ನೂರಾರು ಕವಲುಗಳಲ್ಲಿ ಇವೊತ್ತು ಪ್ರತಿಯೊಂದು ಕವಲುಗಳಿಗೂ ಇವೊತ್ತು ನಿಘಂಟು ಆಗಬೇಕಾಗಿದೆ. ಕನ್ನಡ ಸಂಪತ್ಭರಿತವಾಗಿ ಬೆಳೆಯಬೇಕಾದರೆ, ಕನ್ನಡ ಶ್ರೀಮಂತವಾಗಬೇಕಾದರೆ, ಸಿರಿವಂತಿಕೆಯಿಂದ ಕೂಡಿರಬೇಕಾದರೆ, ಈ ಎಲ್ಲಾ ನಿಘಂಟುಗಳು ಆದಾಗ ಮಾತ್ರ ಕನ್ನಡದ ಬೆಳವಣಿಗೆ ಸಾಧ್ಯವಾಗುತ್ತದೆ.

ಕೇವಲ ಕನ್ನಡ ಆಡಳಿತ ಭಾಷೆ ಅಂದರೆ ಆಗುವುದಿಲ್ಲ, ಯಾವುದೋ ಒಂದು ಕಡೆಯಲ್ಲಿ ಕನ್ನಡದ ಬಗ್ಗೆ ಮಾತನಾಡಿದರೆ ಆಗುವುದಿಲ್ಲ, ಇವೆಲ್ಲವುಗಳ ಸಂಶೋಧನೆಯಾಗಬೇಕು, ಪದಗಳ ಸಂಗ್ರಹ ಮಾಡಬೇಕು, ಪದಗಳ ಬಗ್ಗೆ ನಾವು ಆಳವಾಗಿ ಅಭ್ಯಾಸ ಮಾಡಬೇಕು, ಭೂಮಿಯನ್ನು ಅಗೆದು ಪಾತಾಳಕ್ಕೆ ಹೋಗಿ ಎಲ್ಲೆಲ್ಲಿ ಹೊಸ ಕನ್ನಡದ ಪದಗಳು ಸೃಷ್ಟಿಯಾಗಿವೆ. ಯಾರ ಹತ್ತಿರ ಯಾವ ಪದಗಳು ಸಿಕ್ಕುತ್ತವೆ, ಇವುಗಳನ್ನು ಕಂಡುಕೊಳ್ಳಬೇಕು, ಮತ್ತು ಸಂಶೋಧನಾ ಕಾರ್ಯ ಎಚ್ಚರಿಕೆಯಿಂದ ನಡೆಯಬೇಕಾಗಿದೆ.

ಇದಕ್ಕಾಗಿ ನಮ್ಮ ಕನ್ನಡ ವಿಶ್ವವಿದ್ಯಾನಿಲಯ ಅಪಾರವಾದಂಥ ಕೆಲಸವನ್ನು ಮಾಡಬೇಕಾಗುತ್ತದೆ. ನಮಗೆ ಕನ್ನಡದ ನಿಘಂಟನ್ನು ಕಿಟೆಲ್ ಬಂದು ಕೊಡಬೇಕಾಯಿತು. ಆ ನಿಘಂಟು ಬಿಟ್ಟನಂತರ ಬೇರೆಯಾದ ನಿಘಂಟು ಕೂಡ ಸರಿಯಾಗಿ ಬರಲಿಲ್ಲ. ಒಂದು ಪರಿಶುದ್ಧವಾದ ಆ ನಿಘಂಟಿನ ಬಗ್ಗೆ ನಾವು ಸಂತೋಷ ಪಡಬೇಕಾಗಿದೆ. ನಾನು ಈ ಮಾತನ್ನು ಅತ್ಯಂತ ಜಾಗರೂಕತೆಯಿಂದ ಹೇಳುತ್ತಿದ್ದೇನೆ.

ಈ ಒಂದು ಕನ್ನಡದ ವಿಶ್ವವಿದ್ಯಾನಿಲಯ ತನ್ನದೇ ಆದಂಥ ವೈಭವತೆಯನ್ನು ತೋರಿಸತಕ್ಕಂಥಾದ್ದಾಗಿರಬೇಕು. ಇದಕ್ಕೆ ಸರಕಾರ ಸಮಗ್ರವಾಗಿ ನಿಲ್ಲಬೇಕು. ಕಲೆ, ಕಲೆ, ದರ್ಶನ, ಶಾಸ್ತ್ರ, ಇಂಥ ಅನೇಕ ಪ್ರಭುತ್ವತೆಯನ್ನು ಪಡೆಯಬೇಕು. ಇದು ಬರೀಕೇವಲ ಕನ್ನಡ ವಿಶ್ವವಿದ್ಯಾನಿಲಯ ಎಂದು ಹೆಸರಿಗೆ ಮಾತ್ರ ಇರಬಾರದು.

ಅದು ಕೇವಲ ಕೆಲವು ಕನ್ನಡ ಪಂಡಿತರಿಗೆ ಕೆಲಸ ಕೊಡುವುದಕ್ಕೆ ಮಾತ್ರ ಆಗಿರಬಾರದು. ಅಥವಾ ಯಾರೋ ಒಬ್ಬರನ್ನು ಉಪಕುಲಪತಿ ಮಾಡುವುದಕ್ಕಾಗಿ ಮಾಡಿದ್ದಾರೆ ಎಂಬ ಭಾವನೆ ಇದರ ಹಿಂದೆ ಬರಬಾರದು. ಅಂಥ ಒಂದು ಭಾವನೆ ಬಂದರೆ ಅದಕ್ಕೆ ಒಳ್ಳೆಯ ನೀತಿ, ಹೆಸರು ಆಗುವುದಿಲ್ಲ, ಆದ್ದರಿಂದ ಒಳ್ಳೆಯ ಕನ್ನಡದ ಅಭಿವೃದ್ಧಿಯ ಕೆಲಸವನ್ನು ಮೊದಲೇ ಬೇಕಾಗುತ್ತದೆ. ಈ ವಿಶ್ವವಿದ್ಯಾನಿಲಯ ತನ್ನ ಮಹತ್ತರವಾದಂಥ ಕೊಡುಗೆಯನ್ನು ಕೊಡುವಂತಾದ್ದಾಗಿರಬೇಕು. ಜೀವಶಾಸ್ತ್ರದ ಬಗ್ಗೆ ನಮಗೆ ಇವೊತ್ತು ಅತಿ ಮುಖ್ಯವಾದಂಥ ನಿಘಂಟು ಬೇಕಾಗಿದೆ.

ಈ ರೀತಿ ಕನ್ನಡದ ಅನೇಕ ಅಮೂಲಾಗ್ರವಾದಂಥ ವಿಚಾರಗಳ ಬಗ್ಗೆ ಇವೊತ್ತು ನಿಘಂಟುಗಳು ಬೇಕೇಬೇಕಾಗಿದೆ. ನಮಗೆ ಈ ಕಾರ್ಯಕ್ಕಾಗಿ ಹಣ ಬೇಕಾದರೆ ರಾಜ್ಯದ ಹಣದ ಜೊತೆಗೆ ಯುನೆಸ್ಕೋದಂಥ ಅನೇಕ ಸಂಸ್ಥೆಗಳ ಮೂಲಕ ಈ ದೊಡ್ಡ ಪ್ರಮಾಣದ ಮಹತ್ತರವಾದಂಥ ವಿಶ್ವವಿದ್ಯಾನಿಲಯಕ್ಕೆ ತಾವುಗಳು ಅನುದಾನವನ್ನು ಪಡೆಯಬಹುದು.

ಸಹಾಯಧನವನ್ನು ಕೂಡ ಪಡೆಯಬಹುದು. ಇದು ಬೇರೆ ಎಲ್ಲಾ ವಿಶ್ವವಿದ್ಯಾನಿಲಯಗಳಿಗಿಂತಲೂ ಇದರದ್ದೇ ಆದಂಥ ಒಂದು ಶಕ್ತಿ, ಒಂದು ವೈಶಾಲ್ಯತೆ, ಕನ್ನಡದ ಮೆರುಗು, ಶ್ರೇಷ್ಠತೆ, ಭಾಷೆಯ ಬೆಳವಣಿಗೆ, ಸಾಹಿತ್ಯದ ಬೆಳವಣಿಗೆ,

ಸಂಗೀತದ ಬೆಳವಣಿಗೆ, ಕಲೆಯ ಬೆಳವಣಿಗೆ, ಜಾನಪದ ಬೆಳವಣಿಗೆ, ಎಲ್ಲಾ ಇಂಥ ಬೆಳವಣಿಗೆಯನ್ನು ಈ ಒಂದು ವಿಶ್ವವಿದ್ಯಾನಿಲಯ ತನ್ನ ಉದರದಲ್ಲಿ ಸೇರಿಸಿ, ಹೊಸ ಬೆಳಕನ್ನು ಚೆಲ್ಲಬೇಕು.

ಇದರ ಜೊತೆಗೆ ಕನ್ನಡದ ಉಪಭಾಷೆಗಳು ಕೊಡವ, ತುಳು, ಈ ಭಾಷೆಗಳೂ ಸಹಾ ಕನ್ನಡದ ಜೊತೆಯಲ್ಲಿ ಸೋದರ ಭಾಷೆಯಾಗಿ ಅಕ್ಕಪಕ್ಕದಲ್ಲಿ ಶ್ರೀಮಂತವಾಗಿ ಬೆಳೆಯುವುದಕ್ಕೆ ಈ ವಿಶ್ವವಿದ್ಯಾನಿಲಯ ಒಂದು ಹೊಸ ಶಕ್ತಿಯನ್ನು ಕೊಡಬೇಕು. ತಾವು ಮಾಡುತ್ತಿದ್ದೀರಿ, ಈ ಸ್ಥಳ ವಿಜಯನಗರದ ವೈಭವವನ್ನು ಸಾರತಕ್ಕಂಥ ಸ್ಥಳ. ಮತ್ತೆ ಅದೇ ವೈಭವವನ್ನು ಮೆಲುಕು ಹಾಕತಕ್ಕಂಥ ಒಂದು ವಿಶ್ವವಿದ್ಯಾನಿಲಯ ಇವತ್ತಿನ ದಿನ ಅಲ್ಲಿ ಆಗಬೇಕಾಗಿದೆ. ಇವತ್ತು ಎಷ್ಟೋ ನಾವು ಗ್ರಂಥಗಳನ್ನು ಮುದ್ರಣ ಮಾಡಿದ್ದೇವೆ.

ಎಷ್ಟು ಪ್ರಾಚೀನ ಕಾವ್ಯಗಳನ್ನು ಮುದ್ರಣ ಮಾಡಿದ್ದೇವೆ, ಎಷ್ಟು ಸಂಶೋಧನೆಯನ್ನು ನಡೆಸಿದ್ದೇವೆ, ಸಂಶೋಧಕರಿಗಾಗಲೀ, ಬರಹಗಾರರಿಗಾಗಲಿ, ಮುದ್ರಣಕಾರರಿಗಾಗಲಿ ನಾವು ಕೊಡತಕ್ಕಂಥ ಗೌರವ ಏನು? ಸಂಭಾವನೆ ಏನು? ಸಹಕಾರ ಏನು? ಪ್ರೋತ್ಸಾಹ ಏನು? ಯಾವುದೂ ಇಲ್ಲ ಒಂದುಕಡೆ.

ಮತ್ತು ಇದಕ್ಕಾಗಿ ಒಂದು ಕೋಟಿ ರೂಪಾಯಿಗಳನ್ನು ಒದಗಿಸುತ್ತೇವೆ ಎಂದು ಹೇಳಿದ್ದಾರೆ. ಅದೆಷ್ಟು ಒದಗಿಸುತ್ತಾರೋ ನನಗಂತೂ ಗೊತ್ತಿಲ್ಲ. ಒಂದು ಕೋಟಿ ರೂಪಾಯಿ ಎಂದು ಹೇಳಿದ್ದೀರಿ. ನಾಲ್ಕು ವರ್ಷದಲ್ಲಿ ನಾಲ್ಕು ಕೋಟಿ ರೂಪಾಯಿ ಇದರ ಬಗ್ಗೆ ನಾನು ಹೇಳುತ್ತೇನೆ.

ಇವತ್ತು ಅನೇಕ ನಿಘಂಟುಗಳ ಬಗ್ಗೆ ಈ ವಿಶ್ವವಿದ್ಯಾನಿಲಯದಲ್ಲಿ ತಾವು ಗಮನವನ್ನು ಹರಿಸಬೇಕು. ಮಾನವ ಇತಿಹಾಸವನ್ನು ಬದಲಾಯಿಸಿದ ಕನಿಷ್ಟ ಸಾವಿರ ಗ್ರಂಥಗಳನ್ನು ಕನ್ನಡಕ್ಕೆ ಅನುವಾದಿಸಿ ಪ್ರಕಟಿಸುವುದು ಬಹಳ ಅತಿ ಮುಖ್ಯವಾದುದು. ಇಡೀ ಸಮಗ್ರವಾದ ಈ ವಿಶ್ವವಿದ್ಯಾನಿಲಯ ಒಂದು ಮಹತ್ತರವಾದಂಥ ವಿಶ್ವವಿದ್ಯಾನಿಲಯವಾಗಬೇಕಾಗಿದೆ. ಕನ್ನಡ ಲೇಖಕ ಜಗತ್ತಿನ ಎಲ್ಲಾ ಭಾಗ ಸೋದರ ಸೋದರಿ ಕವಿಗಳು,

ಕವಯತ್ರಿಯವರು ಎಲ್ಲರಿಗೂ ಒಂದು ಅವರ ಒಳ್ಳೆಯ ಕನಸು ನನಸಾಗತಕ್ಕಂಥ, ಸಂತೋಷ ಪಡತಕ್ಕಂಥ, ಶಕ್ತಿ ಬರತಕ್ಕಂಥ ಒಂದು ಚೈತನ್ಯಪೂರ್ಣವಾದಂಥ ವಿಶ್ವವಿದ್ಯಾನಿಲಯ ಆಗಬೇಕಾಗಿದೆ.

ತಾವು ಈ ವಿಶ್ವವಿದ್ಯಾನಿಲಯಕ್ಕಾಗಿ ಹಾಕತಕ್ಕಂಥ ಅಡಿಪಾಯ ಇದೆಯೆಲ್ಲಾ, ನಾಳೆ ನಾವು ಅಲ್ಲಿ ಬರಬಹುದು, ನೀವು ಇಲ್ಲಿ ಬರಬಹುದು, ಆದರೆ ಈ ವಿಶ್ವವಿದ್ಯಾನಿಲಯ ಶತಶತಮಾನಗಳ ಕಾಲ ಉಳಿಯತಕ್ಕಂಥ ಒಂದು ದೊಡ್ಡ ಮಹತ್ತರವಾದಂಥ ವಿಶ್ವವಿದ್ಯಾನಿಲಯವಾಗುವುದಕ್ಕೆ ತಾವು ಅಡಿಗಲ್ಲನ್ನು ಹಾಕಬೇಕಾಗಿದೆ. ಇಲ್ಲದಿದ್ದರೆ, ಯಾವುದೋ ಒಂದು ಒತ್ತಡಕ್ಕೋ ಅಥವಾ ತಮಿಳುನಾಡಿನಲ್ಲಿ ತಮಿಳು ವಿಶ್ವವಿದ್ಯಾನಿಲಯವನ್ನು ಮಾಡಿದ್ದಾರೆ, ಆಂಧ್ರದಲ್ಲಿ ತೆಲುಗು ವಿಶ್ವವಿದ್ಯಾನಿಲಯವನ್ನು ಮಾಡಿದ್ದಾರೆ, ಅದಕ್ಕೋಸ್ಕರ ನಾವು ಮಾಡಿದ್ದೇವೆ ಎನ್ನತಕ್ಕಂಥ ಒಂದು ಚಿಂತನೆಗೆ ಹೋಗದೆ ಈ ವಿಶ್ವವಿದ್ಯಾನಿಲಯ ಇದು ಕೇವಲ ಕರ್ನಾಟಕವೇ ಅಲ್ಲ, ಕೇವಲ ದೇಶವೇ ಅಲ್ಲ, ಇಡೀ ಪ್ರಪಂಚದ ಎಲ್ಲಾ ಭಾಷೆಯ ಬರಹಗಾರರೂ ಪ್ರಪಂಚದ ಉದ್ದಗಲಕ್ಕೂ ಎಲ್ಲಾ ಭಾಷೆಯ ಬರಹಗಾರರೂ ನಮ್ಮ ವಿಶ್ವವಿದ್ಯಾನಿಲಯವನ್ನು ನೋಡತಕ್ಕಂಥ, ಕೇಳತಕ್ಕಂಥ, ಇಲ್ಲಿ ಬಂದು ಓದಿ ವಿಚಾರವನ್ನು ತಿಳಿದುಕೊಳ್ಳತಕ್ಕಂಥ ಒಂದು ಮಹೋನ್ನತವಾದಂಥ ವಿಶ್ವವಿದ್ಯಾನಿಲಯವಾಗುವುದಕ್ಕೆ ಈ ಒಂದು ಅಡಿಪಾಯವನ್ನು, ಅಡಿಗಲ್ಲನ್ನು ಹಾಕಬೇಕು. ಇವತ್ತು ನಾನು ಸಂತೋಷಪಡುತ್ತೇನೆ, ಕರ್ನಾಟಕ ಸರ್ಕಾರ ಬೇರೆ ಅನೇಕ ವಿಚಾರದಲ್ಲಿ ನಮಗೆ ಜಿಜ್ಞಾಸೆ ಇರಬಹುದು, ಆದರೂ ಸಹಾ

ಮಂತ್ರಿಮಂಡಲದಲ್ಲಿ ಸಚಿವರಿಗೂ ಅನೇಕರಿಗೆ ಕನ್ನಡದ ಬಗ್ಗೆ ಅಭಿಮಾನ, ನಾಡಿನ ಬಗ್ಗೆ ಅಭಿಮಾನ ಬೇಕು. ಆದರಲ್ಲಿ, ತಾವು ತೆಗೆದುಕೊಂಡಿರತಕ್ಕಂಥ ನಿರ್ಧಾರ ಮೆಚ್ಚತಕ್ಕಂಥದ್ದು. ಅದರಲ್ಲಿ ಏನೂ ಹಿಂದುಮುಂದು ಹೇಳತಕ್ಕಂಥದ್ದು ಆ ಮಾತು ಇಲ್ಲ. ಇದನ್ನು ಪ್ರಮುಖವಾಗಿ ಮುಕ್ತಕಂಠದಿಂದ ಮೆಚ್ಚತಕ್ಕಂಥ ನಿರ್ಧಾರ. ಈ ನಿರ್ಧಾರವನ್ನು ಕೈಗೊಂಡಿದ್ದೀರಿ. ಈ ನಿರ್ಧಾರದ ಹಿನ್ನೆಲೆಯಲ್ಲಿ ಈ ಕನಸು ಸಂಪೂರ್ಣವಾಗಿ ನನಸಾಗಬೇಕು. ಕನ್ನಡದ ಕಂಪು ಇಡೀ ಪ್ರಪಂಚದಲ್ಲಿ ಆ ಒಂದು ಪರಂಪರೆ ಮಲ್ಲಿಗೆ, ಸಂಪಿಗೆ, ಜಾಜಿ, ಸೇವಂತಿಗೆ, ಗುಲಾಬಿ ಈ ರೀತಿಯಲ್ಲಿ ಎಷ್ಟೋ ಆನಂದವನ್ನು ಅದು ಕೊಡಬೇಕು. ಎಲ್ಲೆಲ್ಲಿ ನೋಡಿದರೂ ಕನ್ನಡದ ಕಂಪು, ಎಲ್ಲಾದರೂ ಇರು, ಎಂತಾದರೂ ಇರು ಎಂದೆಂದಿಗೂ ನೀ ಕನ್ನಡವಾಗಿರು. ಇಂತಹ ಮಾತು ಕನ್ನಡ ಸಂಸ್ಕೃತಿಯನ್ನು ಕನ್ನಡ ಜನತೆಯನ್ನು ಮೇಲಕ್ಕೆತ್ತಬೇಕು.

ಭಾರಿಸು ಕನ್ನಡ ಡಿಂಡಿಮವಾ, ಓ ಕರ್ನಾಟಕ ಹೃದಯಶಿವ, ಸತ್ತಂತೆ ಹರನು ಬಡಿದೆಚ್ಚರಿಸು, ಕಚ್ಚಾಡುವವರನ್ನು ಕೂಡಿ ಸೋಲಿಸುವಂಥ ಮಾತನ್ನು ರಾಷ್ಟ್ರಕವಿ ಕುವೆಂಪುರವರು ಹೇಳುತ್ತಾರೆ. ಕಟ್ಟುವೆವು ಹೊಸನಾಡು ಒಂದನ್ನು ಕಟ್ಟುವೆವು ಹೊಸನಾಡು ಒಂದನ್ನು ಎಂತೆಂತಹ ಮಾತುಗಳನ್ನು ಇವತ್ತು ಹೇಳಿದ್ದಾರೆ.

ಕವಿಗಳನ್ನು, ಸಾಹಿತಿಗಳನ್ನು, ದಾರ್ಶನಿಕರನ್ನು ಸಂತರನ್ನು ಎಲ್ಲರನ್ನು ಬಯಸಿ ಸಂತೋಷಪಡಿಸಿ ನಕ್ಕುನಲಿಸಿ ಅಭಿವೃದ್ಧಿಗೆ ಪಾತ್ರವಾಗುವಂತಹ ವಿಶ್ವವಿದ್ಯಾನಿಲಯವಾಗಬೇಕು. ಉಪಭಾಷೆಯ ಅಧ್ಯಯನಕ್ಕೆ ತುಳು ಮತ್ತು ಕೊಡವ ಇದು ನಮ್ಮ ಸಹೋದರ ಭಾಷೆಗಳು. ಭಾಷೆಗಳಿಗೆ ಇವತ್ತು ಇತಿ ಇಲ್ಲ.

ಅದರ ಬಗ್ಗೆ ಚಿಂತೆ ಮಾಡಲು ವಿಶ್ವವಿದ್ಯಾನಿಲಯದ ಮೂಲಕ ಅವರನ್ನು ಆ ಕಡೆ ಕಳುಹಿಸುವ ಹಾಗಿಲ್ಲ. ಇದು ಎಲ್ಲರೂ ಒಪ್ಪತಕ್ಕ ಮಾತು. ಕನ್ನಡದ ಭಾಷೆಯ ಬೆಳವಣಿಗೆಯ ಜೊತೆಯಲ್ಲಿ ಈ ಸೋದರ ಭಾಷೆಗಳು ಸಹ ಅಷ್ಟೆ. ನವ ಚೈತನ್ಯ ಪೂರ್ಣವಾಗಿ ಬೆಳೆಯಬೇಕಾಗಿದೆ. ಅದಕ್ಕೂ ತಾವು ಒಂದು ಮಹತ್ತರವಾದಂತಹ ಯೋಜನೆಯನ್ನು ಹಾಕಿಕೊಳ್ಳಬೇಕಾಗಿದೆ. ಈ ವಿಶ್ವವಿದ್ಯಾನಿಲಯ ಈ ನಾಡಿನ ಒಂದು ಸಂಸ್ಕೃತಿಯ ಭಾಷೆಯ ಬೆಳವಣಿಗೆಯ ಒಂದು ಸುಂದರ ವಿಶ್ವವಿದ್ಯಾನಿಲಯ ಆಗಲಿ ಎಂದು ಹೇಳಿ ಈ ಸಂದರ್ಭದಲ್ಲಿ ತಾವು ತಂದಿರತಕ್ಕಂತಹ ಈ ಮಸೂದೆಗೆ ನನ್ನ ಒಪ್ಪಿಗೆಯನ್ನು ಸಂತೋಷವನ್ನು ಅಭಿಮಾನವನ್ನು ಸೂಚಿಸುತ್ತಾ, ಆದಷ್ಟುಬೇಗ ಆ ಮನೆಯಲ್ಲೂ ಇದಕ್ಕೆ ಒಪ್ಪಿಗೆಯನ್ನು ಪಡೆದು ಇದು ಅತ್ಯಂತ ಪ್ರಾಮಾಣಿಕವಾಗಿ ಕಾರ್ಯಾರಂಭ ಆಗಬೇಕಾಗಿದೆ. ಈಗ ಅನೇಕ ಕವಿ ಶೈಲುಗಳು ಮಾಡಬೇಕಾಗಿದೆ. ಈಗ ರಾಷ್ಟ್ರಕವಿ ಕುವೆಂಪುರವರ ಬಗ್ಗೆ ಮಾಡುತ್ತಿದ್ದೀರಿ, ಎಲ್ಲಾ ಕವಿಗಳು ಸಾಹಿತಿಗಳ, ಮನೆಗೂ ಹೋಗಿದ್ದೆ. ಅದನ್ನು ತಾವು ನೋಡಬೇಕಾಗುತ್ತದೆ. ಇಂತಹ ಕವಿ ಶೈಲಿಗಳ ಬಗ್ಗೆ ತಾವು ಚಿಂತನೆ ಮಾಡಬೇಕು. ಈ ವಿಶ್ವವಿದ್ಯಾನಿಲಯ ಕೇವಲ ಯಾವುದೋ ಒಂದು ನಾಲ್ಕು ಜನ ಕನ್ನಡ ಪಂಡಿತರಿಗೆ ಅಥವಾ ಕನ್ನಡ ಸಾಹಿತಿಗಳಿಗೆ ಕುಳಿತು ಎದ್ದುಹೋಗುವಂತಹ ನೆಲವಾಗದೆ ಇಡೀ ಕನ್ನಡದ ಕಾಲವನ್ನು, ಕನ್ನಡದ ನೆಲವನ್ನು ಕನ್ನಡದ ಸಂಸ್ಕೃತಿಯನ್ನು ಕನ್ನಡದ ಭಾಷೆಯನ್ನು ಚೈತನ್ಯ ಪೂರ್ವವಾಗಿ ತರತಕ್ಕಂಥಹ ವಿಶ್ವವಿದ್ಯಾನಿಲಯ ಆಗಬೇಕೆಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

+ ಶ್ರೀ ಮಲ್ಲಾರಿಗೌಡ ಎಸ್. ಪಾಟೀಲ್ (ಸಂಕೇಶ್ವರ): ಮಾನ್ಯ ಸಭಾಧ್ಯಕ್ಷಿಣಿಯವರೆ, ನಿಜವಾಗಿಯು ಈ ಕನ್ನಡ ವಿಶ್ವವಿದ್ಯಾನಿಲಯ ಹೊಸ ರೂಪವನ್ನು ನಮ್ಮ ರಾಜ್ಯದಲ್ಲಿ ತಾಳುತ್ತಿರುವುದು ಸಂತೋಷದ ಸಂಗತಿಯಾಗಿದೆ. ಮುಖ್ಯವಾಗಿ ಇವತ್ತಿನ ವಿದ್ಯಾಮಂತ್ರಿಗಳು ಹಲವಾರು ಸಲ ಹಂಪೆಯ ಕ್ಷೇತ್ರಕ್ಕೆ ಹಾಗೂ ವಿಜಯನಗರ ಸಾಮ್ರಾಜ್ಯದ ಆವರಣದಲ್ಲಿ ಹಲವಾರು ತಾಸುಗಳನ್ನು ಕಳೆದಿರುವುದು ನನಗೆ ಗೊತ್ತಿದೆ. ಅವರಿಗೆ ವಿಶೇಷವಾದಂತಹ ಇದೊಂದು ಸಂದರ್ಭ ಬಂದಿದೆ ಎಂದು ನಾನು ಭಾವನೆಯನ್ನು ಇಟ್ಟುಕೊಂಡಿದ್ದೇನೆ.

ಸುಮಾರು ಹತ್ತಾರುಸಲ ಪರಿಸರದಲ್ಲಿ ತನ್ನದೆ ಆದಂತಹ ವಿಶೇಷವಾದಂತಹ ಅಧ್ಯಯನವನ್ನು ಕೂಡ ಅವರು ನಡೆಸಿದ್ದಾರೆ.

ಇವೊತ್ತು ಕರ್ನಾಟಕ ರಾಜ್ಯದ ಶಿಕ್ಷಣ ಮಂತ್ರಿಗಳಾಗಿ ಕನ್ನಡ ನಾಡಿನ ಕನ್ನಡ ಅಭಿಮಾನಿಗಳ ಹಿನ್ನೆಲೆಯನ್ನು ಅರಿತು ಕನ್ನಡ ವಿಶ್ವವಿದ್ಯಾನಿಲಯದ ರೂಪವನ್ನು ಕೊಡುತ್ತಿರುವುದು ಈ ಸದನಕ್ಕೆ ಹಾಗೂ ಕನ್ನಡ ಜನರಿಗೆ ಅಭಿಮಾನ ಸಲ್ಲಿಸುತ್ತದೆ. ವಿಜಯನಗರ ಇತಿಹಾಸವನ್ನು ನಾವು ನೋಡಿದಾಗ, ಹಲವಾರು ವರ್ಷಗಳ ಹಿಂದೆ ಒಂದು ವಿಶೇಷವಾದಂಥ ಸಂದರ್ಭ ಅಲ್ಲಿ ನಡೆಯಿತು.

ಹಕ್ಕಬುಕ್ಕರು ವಿಜಯನಗರ ಸಾಮ್ರಾಜ್ಯವನ್ನು ಸ್ಥಾಪನೆ ಮಾಡುವುದಕ್ಕಿಂತ ಮೊದಲು ಒಂದು ದಿನ ಅವರು ಕುದುರೆಮೇಲೆ ಸವಾರಿ ಮಾಡಿಕೊಂಡು ಬರುತ್ತಿದ್ದಾಗ ಹಾದಿಯಲ್ಲಿ ಒಂದು ನಾಯಿ ಒಂದು ಮೊಲವನ್ನು ಹಿಡಿಯಲಿಕ್ಕೆ ಹೋದಾಗ ಆ ಮೊಲವೇ ನಾಯಿಯನ್ನು ಎಳೆದುಕೊಂಡು ಹೋದಂಥ ಸಂದರ್ಭ ಅಲ್ಲಿ ನಡೆಯಿತು.

ಆಗ ಹಕ್ಕಬುಕ್ಕರು ಇದೊಂದು ವಿಶೇಷವಾದಂಥ ಸ್ಥಳ, ಇದೇ ಒಂದು ಸಾಮ್ರಾಜ್ಯವನ್ನು ಸ್ಥಾಪನೆ ಮಾಡಲಿಕ್ಕೆ ಯೋಗ್ಯವಾದ ಸ್ಥಳವೆಂಬ ಭಾವನೆ ಇಟ್ಟುಕೊಂಡು ಆಗಿನ ಕಾಲದ "ಗಂಡುಮೆಟ್ಟಿದ" ನಾಡಾಗಿ ಜಗತ್ತಿನಲ್ಲೇ ಒಂದು ವಿಶೇಷವಾದಂಥ ಪ್ರತಿಷ್ಠೆಯನ್ನು ಉಳಿಸಿಕೊಂಡು ನಾಡಿನಾದ್ಯಂತ ಕೀರ್ತಿಯನ್ನು ಬೀರಿದಂಥ ಈ ನಾಡಿನಲ್ಲಿ ಕನ್ನಡ ವಿಶ್ವವಿದ್ಯಾನಿಲಯ ಸ್ಥಾಪನೆಯಾಗುತ್ತಿರುವುದು ನಿಜವಾಗಿಯೂ ಸಂತೋಷದ ಸಂಗತಿ. ಈ ಒಂದು ಹಿನ್ನೆಲೆಯಲ್ಲಿ ಶ್ರೀಮಾನ್ ಮೊಯಿಲಿಯವರು ಶಿಕ್ಷಣ ಮಂತ್ರಿಗಳಾಗಿ ನಿಜವಾಗಿ ಅವರು ಕನ್ನಡ ಭಾಷೆಯ ಬಗ್ಗೆ ತನ್ನದೇ ಆದಂಥ ಕಳಕಳಿ ಹೊಂದಿದ್ದಾರೆ. ಶ್ರೀಮಾನ್ ನಾಗರಾಜ್‌ರವರು ಹೇಳಿದ ಪ್ರಕಾರ ಅದನ್ನು ಯಾರೂ ಕೂಡಾ ಅಲ್ಲಗಳೆಯಲಿಕ್ಕೆ ಸಾಧ್ಯವಿಲ್ಲ. ಕನ್ನಡ ಭಾಷೆಯಲ್ಲಿ ಕನ್ನಡನಾಡಿನಲ್ಲಿ ಹಲವಾರು ಜನಪದ ಸಾಹಿತಿಗಳಿರಬಹುದು, ಹಲವಾರು ನಮ್ಮ ಕರ್ನಾಟಕ ಸಂಗೀತದ ವ್ಯಾಪ್ತಿಗೆ ಬರತಕ್ಕಂಥ ಕಾರ್ಯಕ್ರಮ ಇರಬಹುದು, ಈ ಎಲ್ಲವನ್ನೂ ದೃಢೀಕರಣ ಮಾಡಿ ವಿಶ್ವವಿದ್ಯಾನಿಲಯದಲ್ಲಿ ಒಂದು ವಿಶೇಷವಾದಂಥ ಪೀಠಗಳನ್ನು ಸ್ಥಾಪನೆ ಮಾಡದೆಹೋದರೆ ವಿಶೇಷವಾದ ಅಧ್ಯಯನವನ್ನು ಮಾಡದೇಹೋದರೆ, ಎಲ್ಲವನ್ನೂ ಕೂಡಾ ನಾವು ಕೈಬಿಡಬೇಕಾದಂಥ ಸಂದರ್ಭ ಬರಬಹುದು. ಇದೇ ಸಂದರ್ಭದಲ್ಲಿ ಒಂದು ಮಾತನ್ನು ಹೇಳುತ್ತೇನೆ. ವಿಜಯನಗರ ಸಾಮ್ರಾಜ್ಯದ ಹಿನ್ನೆಲೆಯಲ್ಲಿ ಕರ್ನಾಟಕದ ಇತಿಹಾಸ ಬೇರೆಯೇ ಆಗಿದೆ.

ಹಿಂದಿನ ಹಲವಾರು ವರ್ಷಗಳನ್ನು ನಾವು ನೋಡಿದಾಗ, ಈ ನಾಡಿನಲ್ಲಿ ಆಧ್ಯಾತ್ಮಿಕ ಹಿನ್ನೆಲೆ ಇಟ್ಟುಕೊಂಡು ಕೆಲವೊಂದು ಜನ ವಚನ ಸಾಹಿತ್ಯದಲ್ಲಾಗಲಿ ಅಥವಾ ತನ್ನದೇ ಆದಂಥ ಗದ್ಯಭಾಗವನ್ನು ಪರಿಶೀಲನೆ ಮಾಡಿದಂಥ ಅಥವಾ ದಾಸರ ಸಾಹಿತ್ಯ ಪರಿಶೀಲನೆ ಮಾಡಿದಾಗ ನಾವು ಇಲ್ಲಿ ಎಲ್ಲಿಯೋ ಒಂದು ರೀತಿಯಲ್ಲಿ ತಪ್ಪುತ್ತಿದ್ದೇವೆಂಬ ಭಾವನೆಯನ್ನು ನಾನು ವ್ಯಕ್ತ ಮಾಡಿದರೆ ತಪ್ಪಾಗಲಿಕ್ಕಿಲ್ಲ. ನಾನು ಈ ಸದನದಲ್ಲಿ ಒಂದು ಮಾತನ್ನು ಒಪ್ಪಿಕೊಳ್ಳಬೇಕಾಗಿದೆ. ನಾಗರಾಜ್‌ರವರಿಗೆ ಆಶ್ಚರ್ಯವಾಗಬಹುದು. ನಾನು ಕಲಿತದ್ದು ಸಂಪೂರ್ಣವಾಗಿ ಮರಾಠಿ ಭಾಷೆಯಲ್ಲಿ. ಆದರೆ, ಕನ್ನಡ ಭಾಷೆಯನ್ನು ಸುಮಾರು 1961ನೇ ಇಸವಿಯಲ್ಲಿ 7 ತಿಂಗಳಕಾಲ ನಾನು ನನ್ನ ಆರೋಗ್ಯ ಸರಿ ಇಲ್ಲದಿದ್ದಾಗ, ಕನ್ನಡ ಭಾಷೆಯನ್ನು ಕಲಿಯುವ ಅವಕಾಶ ಸಿಕ್ಕಿತು. ಅಂಥಹ ಒಂದು ಸಂದರ್ಭ ನಡೆದ ನಂತರ, ಇವೊತ್ತು ಕನ್ನಡ ಸಾಹಿತ್ಯವನ್ನು ಓದುವಂಥ ಪ್ರಸಂಗ ಬಂದಾಗ ಇಷ್ಟೊಂದು ಆಳವಾದಂಥ ಸಾಹಿತ್ಯ ಬೇರೆ ಭಾಷೆಯಲ್ಲಿದೆಯೇ ಎನ್ನತಕ್ಕಂಥ ಭಾವನೆ ನನಗೆ ಬಂತು. ಇಲ್ಲಿ ನನ್ನ ಮಾತಿನಲ್ಲಿ ಏನಾದರೂ ತಪ್ಪಾಗಿ ಚ್ಯುತಿಬರಬಹುದೆ ಎಂಬ ವಿಶೇಷ ಹಿನ್ನೆಲೆ ಇಟ್ಟುಕೊಂಡು ಮಾತನಾಡುತ್ತಿದ್ದೇನೆ. ಇದು ಬೇರೆ ಭಾಷೆಯ ವಿಷಯವಾಗಲಿಕ್ಕೆ ಸಾಧ್ಯವಿಲ್ಲ. ನನಗನ್ನಿಸುತ್ತದೆ, ಆಧ್ಯಾತ್ಮಕ ಜೊತೆಗೆ ಈ ಒಂದು ನಾಡು ಸಾಮರಸ್ಯದಿಂದ

ನಡೆದುಕೊಂಡಿದೆ. ಇಲ್ಲಿರತಕ್ಕ ಜಾತಿಯನ್ನು ಸಂಪೂರ್ಣವಾಗಿ ನಾಶಮಾಡಲಿಕ್ಕೆ, ಕನ್ನಡ ಭಾಷೆಯಲ್ಲಿರತಕ್ಕ ಆಧ್ಯಾತ್ಮ ಹಾಗೂ ಇಲ್ಲಿರತಕ್ಕ ಕೆಲವೊಂದು ಪದ್ಯಗಳು, ಅದೇ ತರಹ ಕೆಲವೊಂದು ಜನಪದ ಸಾಹಿತ್ಯಗಳನ್ನು ನಾವು ನೋಡುತ್ತಿದ್ದೇವೆ. ಒಂದು ಕಡೆ ನಾವು ಅಲ್ಲಲ್ಲಿಗೆ ಹೋದಾಗ ನಮ್ಮ ಕಡೆ ಏನು ಜಾತ್ರೆ ಮಾಡುತ್ತಾರೆ, ಅದು ನನಗೆ ಗೊತ್ತಿಲ್ಲ. ಲಕ್ಷ್ಮಿದೇವಿ ಜಾತ್ರೆ, ದುರ್ಗಾದೇವಿ ಜಾತ್ರೆ ಮಾಡುತ್ತಾರೆ.

ದುರ್ಗಾದೇವಿ ಜಾತ್ರೆ ಮಾಡಿದಾಗ ಪ್ರತಿಯೊಂದು ಸಮಾಜದಲ್ಲಿರತಕ್ಕ ಮಹಾನುಭಾವರನ್ನು ಲೆಕ್ಕ ಇಡುತ್ತಾರೆ. ಯಾರು ಇವೊತ್ತು ಪರಿಶಿಷ್ಟ ಜನಾಂಗದವರು ಇದ್ದಾರೆ, ಅವರನ್ನು ಕೂಡ ನಾನು ಕೇಳುತ್ತಿದ್ದೇನೆ. ಮೇಲಿನ ಮಟ್ಟದಲ್ಲಿ ಊರಿನಲ್ಲಿರತಕ್ಕ ಊರಿನ ಗೌಡರನ್ನು ಕೂಡ ನಾನು ಕೇಳುತ್ತಿದ್ದೇನೆ.

ಆ ದೃಷ್ಟಿಯಿಂದ ಕನ್ನಡ ಸಾಹಿತ್ಯದಲ್ಲಿ ಹಲವಾರು ಜಾತಿ, ಮತ, ಗೋತ್ರ ಇದ್ದರೂ ಬೇರೆ ಬೇರೆ ಭಾಷೆಯಲ್ಲಿ ನಾವು ಮಾತನಾಡತಕ್ಕಂಥ ಸಂದರ್ಭ ಬಂದರೂ ಕೂಡ ಕನ್ನಡ ಭಾಷೆಯನ್ನು ಉಳಿಸಲಿಕ್ಕೆ ಬಹಳಷ್ಟು ಪ್ರಯತ್ನ ಮೊದಲ ಕಾಲದಿಂದಲೂ ನಡೆಯುತ್ತಾ ಬಂದಿದೆ. ನಿನ್ನೆಯ ದಿನ ಸನ್ಮಾನ್ಯ ಶಿಕ್ಷಣ ಮಂತ್ರಿಗಳ ಹತ್ತಿರ ಹೋದಾಗ ಅವರ ಟೇಬಲ್‌ಮೇಲೆ ಒಂದು ಪೇಪರ್ ಇತ್ತು. ನಾನು ಒಂದು ವಿಷಯ ತೋರಿಸಿ ಹೇಳಿದೆ. ಇಂದು ನಮ್ಮ ನಾಡಿನಲ್ಲಿ ಕೆಲವು ಗೌರವಯುತವಾದ ಸಮಾಜ ಇದೆ. ಆ ಸಮಾಜದ ಜೊತೆ ಕನ್ನಡ ಸಂಸ್ಕೃತಿಯನ್ನು ಉಳಿಸಲಿಕ್ಕೆ ಸಾಕಷ್ಟು ಪ್ರಯತ್ನ ಮಾಡಿ. ಅಂಥಹ ಸಮಾಜವನ್ನು ಇಂದು ಗುರ್ತಿಸಬೇಕಾಗಿದೆ. ಆ ಸಮಾಜದವರು ದಿನನಿತ್ಯದ ಜೀವನ ಕೂಡ ನಡೆಸಲಿಕ್ಕೆ ಸಾಧ್ಯವಾಗುತ್ತಿಲ್ಲ. ಅವರಿಗೆ ಬಡ್ತಿ ಕೂಡಾ ಸಿಗುತ್ತಿಲ್ಲ. ಪ್ರತಿ ಹಳ್ಳಿ ಹಳ್ಳಿಗೂ, ಓಣಿ ಓಣಿಗೂ ಹೋಗಿ ಕನ್ನಡ ಭಾಷೆ ಮತ್ತು ಸಂಸ್ಕೃತಿಯ ಬಗ್ಗೆ ಒಂದು ರೂಪವನ್ನು ಜನರಲ್ಲಿ ತುಂಬಿಸತಕ್ಕ ಕೆಲಸವನ್ನು ಆ ಜನಾಂಗ ಮಾಡುತ್ತಿದೆ.

ಅದೇ ದೃಷ್ಟಿಯಿಂದ ಶ್ರೀಮಾನ್ ಸದಾಶಿವ ಒಡೆಯರ್‌ರವರು ಕನ್ನಡ ನಾಡಿನ ಸಂಸ್ಕೃತಿ ಹಿನ್ನೆಲೆಯಲ್ಲಿ ಒಂದು ವಿಶ್ವವಿದ್ಯಾನಿಲಯ ಸ್ಥಾಪನೆ ಮಾಡಲಿಕ್ಕೆ ತನ್ನದೇ ಆದಂಥ ಒಂದು ವರದಿಯನ್ನು ಕೊಟ್ಟಿದ್ದಾರೆ. ಉತ್ತರ ಕರ್ನಾಟಕದಲ್ಲಿ ಈ ಒಂದು ವಿಶ್ವವಿದ್ಯಾನಿಲಯ ಸ್ಥಾಪನೆಯಾಗುತ್ತಿರುವುದು ನಿಜವಾಗಿಯೂ ಸಂತೋಷದ ಸಂಗತಿ. ಅದರ ಜೊತೆಗೆ ಏನು 'ಅಗ್ನಿ' ಕ್ಷೇತ್ರ ಇದೆ. ಅದರ ಒಂದು ವೈಭವ ಇವೊತ್ತು ಬೆಳೆಯುತ್ತಿದೆ. ಈ ಸಂದರ್ಭದಲ್ಲಿ ಮತ್ತೊಂದು ಮಾತನ್ನು ಹೇಳುತ್ತಿದ್ದೇನೆ. ಆ ಕ್ಷೇತ್ರ ಜೊತೆ ಜೊತೆಯಾಗಿ, ಸಂಗಮವಾಗಿ ಈ ನಾಡು ಬೆಳೆಯಲಿಕ್ಕೆ ಒಂದು ವಿಶೇಷವಾದಂಥ ಕಾರ್ಯಕ್ರಮ ಮಾಡಿದೆ. ಅದೇನೆಂದರೆ, ವಿಜಯನಗರ ಉಕ್ಕಿನ ಕಾರ್ಖಾನೆ ಹಾಗೂ ಕನ್ನಡ ವಿಶ್ವವಿದ್ಯಾನಿಲಯ ಒಂದೇ ಸಂದರ್ಭದಲ್ಲಿ, ಒಂದೇ ಸಮಯದಲ್ಲಿ ಬರುತ್ತಿದೆ. ಇದು ಸಂತೋಷದ ಸಂಗತಿ. ಒಂದು ಕಡೆ ಕನ್ನಡ ವಿಶ್ವವಿದ್ಯಾನಿಲಯ ಸ್ಥಾಪನೆ ಆಗಬೇಕೇ ಅಥವಾ ಬೇಡವೇ ಎಂಬ ಬಗ್ಗೆ ಅಭಿಪ್ರಾಯಗಳನ್ನು ದಿನನಿತ್ಯ ನಾವು ಪೇಪರ್‌ಗಳಲ್ಲಿ ಓದುತ್ತಿದ್ದೇವೆ. ನನಗನಿಸುತ್ತದೆ. ಕಳೆದ 4-5 ದಿನಗಳಿಗಳಿಂದ ಈ ಪೇಪರ್‌ನಲ್ಲಿ ಯಾರನ್ನು ನಾವು ಬಹಳ ಬುದ್ಧಿವಂತರೆಂದು ಹೇಳಿಕೊಳ್ಳುತ್ತಿದ್ದೇವೆ. ಅವರು ಇದರ ಬಗ್ಗೆ ವಿರೋಧವಾದಂಥ ಒಂದು ಪ್ರತಿಪಾದನೆ ಮಾಡತಕ್ಕಂಥ ಸಂದರ್ಭ ನಾವು ನೋಡುತ್ತಿದ್ದೇವೆ. ಕನ್ನಡ ನಾಡಿನಲ್ಲಿ ಯಾರೇ ಇರಬಹುದು. ಕನ್ನಡ ನಾಡಿನ ಬಗ್ಗೆ ಅಭಿಮಾನ ಇಟ್ಟುಕೊಳ್ಳಬೇಕಾಗಿದ್ದ ಅಂಥಹ ಜನ ಇವೊತ್ತಿನ ದಿವಸ ಕನ್ನಡ ವಿಶ್ವವಿದ್ಯಾನಿಲಯ ಏಕೆ ಆಗಬೇಕು? ಏತಕ್ಕೋಸ್ಕರ ಆಗಬೇಕು?

ಯಾವುದಕ್ಕೋಸ್ಕರ ಅದನ್ನು ಮಾಡಬೇಕು, ಯಾರು ಮಾಡುತ್ತಾರೆ, ಯಾರಿಗೆ ಹೆಸರು ಬರುತ್ತದೆ ಎನ್ನತಕ್ಕಂತಹ ಪ್ರಶ್ನೆಗಳನ್ನು ಹಾಕುತ್ತಿದ್ದಾರೆ. ನಮ್ಮ ಶಿಕ್ಷಣ

ಮಂತ್ರಿಯವರು ತಮ್ಮದೇ ಆದ ಒಂದು ಪ್ರಯತ್ನ ಮಾಡಿ ಕನ್ನಡನಾಡಿಗೆ ಇದನ್ನು ಕೊಟ್ಟಿದ್ದಾರೆ. ಅದನ್ನು ಬಹಳವಾಗಿ ಮೆಚ್ಚಿ ಹೆಚ್ಚಿನ ಅಭಿಮಾನದಿಂದ ನಾನು ಇದನ್ನು ಹೇಳುತ್ತೇನೆ. ತಾವು ಹೆಚ್ಚಿನ ಆಸಕ್ತಿವಹಿಸಿ ಒಂದು ವಿಶ್ವವಿದ್ಯಾನಿಲಯವನ್ನು ಆದಷ್ಟು ಶೀಘ್ರವಾಗಿ ಕಾರ್ಯರೂಪಕ್ಕೆ ತರಬೇಕು. ಇಂದು ವಿಧೇಯಕವನ್ನು ಪಾಸ್ ಮಾಡಿದ್ದೇವೆ.

ನಮ್ಮ ಜವಾಬ್ದಾರಿ ಮುಗಿಯಿತು ಎಂದು ಇರುವುದಲ್ಲಾ, ವಿಧೇಯಕವನ್ನು ಪಾಸ್ ಮಾಡಿಕೊಂಡು ಹೋದರು ಎಂದು ಬೇರೆಯವರಿಂದ ಅದರ ಮೇಲೆ ಟೀಕೆ ಟಿಪ್ಪಣಿಗಳು ಬರುತ್ತವೆ. ಅದು ಅಲ್ಲಿ ಆಗಬೇಕು, ಇಲ್ಲಿ ಆಗಬೇಕು, ಅಂತಹ ಸ್ಥಳದಲ್ಲಿ ಸ್ಥಾಪನೆಯಾಗಬೇಕು ಎಂಬುದಾಗಿ ವಿಚಾರ ಬರುತ್ತದೆ, ಅದರ ಬಗ್ಗೆ ಹೋರಾಟ ಮಾಡತಕ್ಕಂತಹ ಕಾರ್ಯಕ್ರಮ ನಡೆಯುತ್ತದೆ ಎಂದು ನಾನು ತಿಳಿದುಕೊಂಡಿದ್ದೇನೆ. ಯಾವುದಕ್ಕೆ ಕನ್ನಡ ನಾಡಿನ ಬಗ್ಗೆ ಅಭಿಮಾನವಿರಬೇಕೆಂದರೆ? ಸಿಂಧ್ಯಾರವರು ಇವತ್ತು ವಿರೋಧಪಕ್ಷದ ನಾಯಕರಾಗಿದ್ದಾರೆ. ಅವರು ಮರಾಠಿ ಸಮಾಜಕ್ಕೆ ಸೇರಿದವರು, ಆದರೂ ಕೂಡ ಅವರು ಕನ್ನಡ ನಾಡಿನ ಬಗ್ಗೆ ಕನ್ನಡ ಜನತೆಯ ಬಗ್ಗೆ ಬಹಳ ಅಭಿಮಾನ ಉಳ್ಳವರಾಗಿದ್ದಾರೆ.

ಶ್ರೀ ಪಿ.ಜಿ.ಆರ್. ಸಿಂಧ್ಯ: ಸ್ವಾಮಿ ಬಹುಶಃ ತಮಗೆ ನಮ್ಮ ಇತಿಹಾಸ ಗೊತ್ತಿಲ್ಲವೆಂದು ಕಾಣುತ್ತದೆ.

ಈ ವಿಧಾನಸಭೆಯಲ್ಲಿ ದಾಖಲೆ ತಪ್ಪಾಗಿ ಹೋಗಬಾರದು. ನಾನು ಮರಾಠಿಯವನಲ್ಲ, ಸಾವಿರಾರು ವರ್ಷಗಳ ಹಿಂದಿನಿಂದಲೂ ಧಾರವಾಡ ಜಿಲ್ಲೆಯ ರಾಣೆಬೆನ್ನೂರು ತಾಲ್ಲೂಕಿಗೆ ಸೇರಿದವರು ನಾವು. ಇನ್ನೂರು ಮುನ್ನೂರು ವರ್ಷಗಳ ಹಿಂದೆ ಕನಕಪುರಕ್ಕೆ ಬಂದು ಸೇರಿಕೊಂಡೆವು. ಧಾರವಾಡ ಕರ್ನಾಟಕದಲ್ಲಿದೆ ತಾನೇ?

ಶ್ರೀ ಮಲ್ಲಾರಿಗೌಡ ಎಸ್. ಪಾಟೀಲ್: ಆ ವಿಷಯದಲ್ಲಿ ತಮಗೆ ಅಬಿಮಾನವಿದೆ ಎಂದು ನಾನು ಮಾತನಾಡುತ್ತಿದ್ದೇನೆ, ತಾವು ಛತ್ರಪತಿ ಶಿವಾಜಿಯ ಬಗ್ಗೆ ಗೌರವ ತಳೆದಿದ್ದೀರಿ, ಅಭಿಮಾನವನ್ನು ಹೊಂದಿದ್ದೀರಿ. ಈ ಅಭಿಮಾನವಿಲ್ಲದಿದ್ದರೆ ನಾಡನ್ನು ಕಟ್ಟುವುದಕ್ಕೆ ಆಗುವುದಿಲ್ಲ, ದೇಶವನ್ನು ಕಟ್ಟುವುದಕ್ಕೆ ಆಗುವುದಿಲ್ಲ.

ಶ್ರೀ ವಾಟಾಳ್ ನಾಗರಾಜ್ : ಶಿವಾಜಿ ಕರ್ನಾಟಕದವರೇ? ಮಹಾರಾಷ್ಟ್ರದವರು ಶಿವಾಜಿ ಎನ್ನುವ ಹೆಸರನ್ನು ಇಟ್ಟುಕೊಂಡಿದ್ದೇ ತಪ್ಪು. ಮಲ್ಲೇಶ್ವರದಲ್ಲಿರುವ ಕಾದಮುರುಗೇಶ್ವರ ದೇವಸ್ಥಾನವನ್ನು ಶಿವಾಜಿಯ ವಂಶಸ್ಥರೆ ಕಟ್ಟಿಸಿದ್ದುದು, ಅದು ಅಲ್ಲಿಯ ಶಾಸನದಲ್ಲಿದೆ. ತಾವು ಅದನ್ನು ನೋಡಬೇಕು. ಶಿವಾಜಿ ಕರ್ನಾಟಕದವರೆ, ಆದರೆ ಮಹಾರಾಷ್ಟ್ರದವರು ಅದನ್ನು ತೆಗೆದುಕೊಂಡು ಹೋದರೆ ನಾವು ಏನು ಮಾಡುವುದಕ್ಕಾಗುತ್ತದೆ?

ಶ್ರೀ ಮಲ್ಲಾರಿಗೌಡ ಎಸ್. ಪಾಟೀಲ್: ಏನು ಹುಟ್ಟಬೇಕಾದರೂ ಕರ್ನಾಟಕದಲ್ಲಿ ಹುಟ್ಟಬೇಕು. ಕರ್ನಾಟಕವಲ್ಲದೆ ಬೇರೆ ಯಾವ ದೇಶದಲ್ಲೂ ಹುಟ್ಟಬಾರದು ಎಂದಲ್ಲ. ಇದು ಈಗ ಕಾಶ್ಮೀರದವರೆಗೂ, ಕನ್ಯಾಕುಮಾರಿಯವರೆಗೂ ಬೆಳೆದು ಹೋಗಿದೆ, ದುರ್ದೈವದಿಂದ ಶಿಕ್ಷಣದಲ್ಲಿ ಮಾತ್ರ ನಮ್ಮ ಗಾತ್ರವನ್ನು ಸೀಮಿತ ಮಾಡಿಕೊಂಡಿದ್ದೇವೆ. ತಾಲ್ಲೂಕಿನಲ್ಲಿ, ನಮ್ಮ ಆವರಣದಲ್ಲಿ ನಮ್ಮ ಸಂಸ್ಕೃತಿ ಬೆಳೆಯತಕ್ಕ ಪಾರಂಪರ್ಯವನ್ನು ನಾವು ವಿರೋಧಿಸುತ್ತಿದ್ದೇವೆ. ಇದು ಬಹಳ ದುಃಖದ ಸಂಗತಿಯಾಗಿದೆ. ಒಂದೊಂದು ವೇಳೆ ಬೇರೆ ಭಾಷೆಯನ್ನು ತಿಳಿದುಕೊಳ್ಳುವುದಕ್ಕೆ ಅವಕಾಶರಿದ್ದರೂ ಕೂಡ ಭಾಷೆ ಬಗ್ಗೆ ನಮ್ಮಲ್ಲಿ ಅನುಕಂಪವಿರುವುದಿಲ್ಲ, ನಮ್ಮ ಭಾಷೆಯ ಬಗ್ಗೆ ಬೇರೆಯವರಿಗೆ ತಿಳಿದುಕೊಳ್ಳುವುದಕ್ಕೆ ಅನುಕಂಪವಿರುವುದಲ್ಲ, ನಮ್ಮ ಸಂಸ್ಕೃತಿಯ ಬಗ್ಗೆ ಇಲ್ಲಿ ಒಂದು ವಿಷಯವನ್ನು ಪ್ರಸ್ತಾಪಮಾಡುತ್ತೇವೆ.

ನಾವು ಸದನದ ಸಮಿತಿಯ ಪರವಾಗಿ ಒಂದು ಸಹ ಜಮ್‌ಷೆಡ್‌ಪುರಕ್ಕೆ ಹೋಗಿದ್ದೆವು. ಬಹಳ ದುರ್ದೈವದಿಂದ ಈ ಮಾತನ್ನು ಹೇಳುತ್ತಿದ್ದೇನೆ, ಅಲ್ಲಿರತಕ್ಕ

ಕನ್ನಡ ಸಂಘದವರು ಒಳ್ಳೆಯ ಔತಣವನ್ನು ಏರ್ಪಡಿಸಿ ನಮ್ಮನ್ನು ಸ್ವಾಗತ ಮಾಡಲು ಯೋಚನೆ ಮಾಡಿದರು.

ಆದರೆ ಆ ದಿವಸ ಸದನದ ಸಮಿತಿಗೆ ಅವಕಾಶವಿಲ್ಲದಂತಹ ಸಂದರ್ಭ ಬಂದರೆ, ಅಲ್ಲಿರತಕ್ಕವರು ನಮ್ಮ ಬಗ್ಗೆ ಯಾವುದಕ್ಕೆ ಅಷ್ಟೊಂದು ಅಭಿಮಾನವನ್ನು ಸ್ವಾಗತವನ್ನು ವ್ಯಕ್ತಮಾಡಬೇಕು? ಆ ರೀತಿಯ ಪ್ರಸಂಗಗಳು ನಡೆಯಬಾರದು? ಆದರೂ ಕನ್ನಡನಾಡಿನ ಬಗ್ಗೆ, ಕನ್ನಡ ಜನರ ಬಗ್ಗೆ ಕನ್ನಡ ಭಾಷೆಯ ಬಗ್ಗೆ ಇರತಕ್ಕಂತಹ ಅಭಿಮಾನವನ್ನು ನಾವು ಸದಾಕಾಲ ಇಟ್ಟುಕೊಳ್ಳಬೇಕು. ಅದೇರೀತಿ ಬೇರೆ ಭಾಷೆಯ ಬಗ್ಗೆ ಒಂದು ಆತಂಕ ಅಥವಾ ದ್ವೇಶದ ಭಾವನೆಯನ್ನು ಮಾಡುವುದು ಬೇಡ.

ಇವತ್ತು ಏನು ಶಿಕ್ಷಣ ಸಚಿವರು ಸದನದ ಸದಸ್ಯರನ್ನು ನಾಮಕರಣ ಮಾಡಿದ್ದೀರಿ, ಅದರ ಗಾತ್ರವನ್ನು ಹೆಚ್ಚಿಸಬೇಕೆಂಬ ಅಭಿಪ್ರಾಯವನ್ನು ನಾನು ವ್ಯಕ್ತಮಾಡುತ್ತೇನೆ. ಇಲ್ಲದಿದ್ದರೆ ಆ ಸಮಿತಿಯಲ್ಲಿ ತಪ್ಪುಗಳಾಗುತ್ತವೆ, ಶಾಸನ ಸಭೆಯ ಸದಸ್ಯರು ಹೆಚ್ಚಿನ ಸಂಖ್ಯೆಯಲ್ಲಿ ಆ ಸಮಿತಿಯಲ್ಲಿದ್ದರೆ ಆ ರೀತಿಯ ತಪ್ಪುಗಳಾಗುವುದಿಲ್ಲ. ಅಧಿಕಾರಿಗಳಿರುವುದರಿಂದ ಹತ್ತಾರು ನಾಮಿನೇಷನ್‌ಗಳು ನಡೆಯುತ್ತದೆ, ಕೆಲವು ಸಲ ಬೇರೆ ಭಾಷೆಯವರು ಬಂದಿರುತ್ತಾರೆ. ಅವರಿಗೆ ಅಷ್ಟೊಂದು ಆಸಕ್ತಿ ಇರುವುದಿಲ್ಲ. ಆದರೆ ಕನ್ನಡನಾಡಿನ ಮೂಲಭೂತ ಆಧಾರ ಸ್ತಂಭವಾಗಿರತಕ್ಕ ಸದನದ ಸದಸ್ಯರಿಗೆ ಹೆಚ್ಚು ಅವಕಾಶ ಕೊಡಬೇಕು.

ಈ ವಿಶ್ವವಿದ್ಯಾನಿಲಯಕ್ಕೆ ತಾವು ಮೂಲಭೂತವಾಗಿ ಕನ್ನಡ ವಿಶ್ವವಿದ್ಯಾನಿಲಯವೆಂದು ಹೆಸರನ್ನು ನಮೂದಿಸಿದ್ದೀರಿ. ನನಗದು ಅನ್ನಿಸುತ್ತದೆಂದರೆ, ವಿಜಯನಗರ ಸಾಮ್ರಾಜ್ಯದ ಮೂಲ ಸಂಸ್ಥಾಪಕರ ಹೆಸರನ್ನು ಇದರ ಜೊತೆಗೆ ಸೇರಿಸಿದರೆ ಬಹಳ ಒಳ್ಳೆಯದಾಗುತ್ತದೆ.

ಒಳ್ಳೆಯ ಪರಂಪರೆಯನ್ನು, ಭಾವನೆಯನ್ನು ಇಟ್ಟುಕೊಂಡು ಈ ಸಂದರ್ಭದಲ್ಲಿ ವರದಿಮಾಡಿದ ಮಾನ್ಯ ಅಧ್ಯಕ್ಷರಲ್ಲಿ ವಿನಂತಿಸುತ್ತಾರೆ? ಈ ಸದನದ ಎಲ್ಲಾ ಸದಸ್ಯರ ಪರವಾಗಿ ಒಂದು ಬಹಳ ಒಳ್ಳೆಯ ವಿಷಯವನ್ನು ತಾವು ತಂದಿದ್ದೀರಿ? ಈ ಎರಡು ಮಾತುಗಳನ್ನಾಡಲು ಅವಕಾಶ ಮಾಡಿಕೊಟ್ಟಿದ್ದಕ್ಕಾಗಿ, ಮತ್ತು ತಾವು ತಂದ ವಿಧೇಯಕಕ್ಕೆ ಬೆಂಬಲವನ್ನು ಕೊಡುತ್ತಾ ನನ್ನ ಮಾತುಗಳನ್ನು ಮುಗಿಸುತ್ತೇನೆ.

+ ಪ್ರೊ. ಎಂ.ಡಿ. ನಂಜುಂಡಸ್ವಾಮಿ: ಸನ್ಮಾನ್ಯ ಅಧ್ಯಕ್ಷಿಣಿಯವರೆ, ಸನ್ಮಾನ್ಯ ಶಿಕ್ಷಣ ಮಂತ್ರಿಗಳು ಮಂಡಿಸಿರುವಂಥ ಕನ್ನಡ ವಿಶ್ವವಿದ್ಯಾನಿಲಯ ವಿಧೇಯಕವನ್ನು ಸ್ವಾಗತಮಾಡುತ್ತಿದ್ದೇವೆ. ಕನ್ನಡ ಸಂಸ್ಕೃತಿ ಪ್ರಾಚೀನ ಸಂಸ್ಕೃತಿ ಬಗ್ಗೆ ನಾವು ಈಗ ಮಾತನಾಡುತ್ತಿದ್ದೇನೆ. ವಿಶ್ವವಿದ್ಯಾನಿಲಯದ ಉದ್ದೇಶಗಳು ಎನ್ನುವುದರಲ್ಲಿ 18 ಉದ್ದೇಶಗಳನ್ನು ಪಟ್ಟಿಮಾಡಿದ್ದಾರೆ. ಒಂದು ಮುಖ್ಯವಾದಂಥ ಕೆಲಸ ಇಲ್ಲಿ ಬಿಟ್ಟುಹೋಗಿದೆ ಎಂದು ನನಗೆ ಅನ್ನಿಸುತ್ತದೆ. ಸನ್ಮಾನ್ಯ ವಾಟಾಳ್ ನಾಗರಾಜ್‌ರವರು ಮಾತನಾಡುತ್ತಾ ನಮಗೆ ಒಂದು ನಿಘಂಟು ಕೊಡಬೇಕಾದರೆ ಒಬ್ಬ ಜರ್ಮನಿಯ ಕಿಟೆಲ್ ಬರಬೇಕಾಯ್ತು. ಮತ್ತೆ ಒಬ್ಬ ಜೇಗ್ಲರೆ ಬರಬೇಕಾಯಿತು. ದಯವಿಟ್ಟು ಇದಕ್ಕೆ ಮತ್ತೆ ಯಾರೂ ಕಾರಣವಲ್ಲ ನಾವೇ. ಕನ್ನಡ ನಿಘಂಟಿನ ಒಂದು ಕೆಲಸ ಕರ್ನಾಟಕದಲ್ಲಿ 1954ನೇ ಇಸವಿಯಲ್ಲಿ ಪ್ರಾರಂಭವಾಯಿತು. ಅದಕ್ಕೆ 15 ಲಕ್ಷ ರೂಪಾಯಿಗಳನ್ನು ಮಂಜೂರು ಮಾಡಿದ್ದರು. 10 ವರ್ಷದಲ್ಲಿ ನಿಘಂಟು ಸಂಪೂರ್ಣವಾಗಿ ಪ್ರಕಟಣೆಯಾಗಬೇಕು ಎನ್ನುವಂತಹ ಒಂದು ಕಾರ್ಯಕ್ರಮವನ್ನು ಆಗಿನ ಸರ್ಕಾರ ಹಾಕಿತ್ತು. 1965ರಲ್ಲಿ ಈ ಕೆಲಸ ಮುಗಿಯಬೇಕಾಗಿತ್ತು. ಆದರೆ ಇವತ್ತು 1991ನೇ ಇಸವಿಯಲ್ಲಿ ಇದ್ದೇವೆ. ಇನ್ನೂ ಆ ಕೆಲಸ ಮುಗಿದಿಲ್ಲ. 15 ಲಕ್ಷ ರೂಪಾಯಿಗಳನ್ನು ಪ್ರಾಜೆಕ್ಟ್ ಯೋಜನೆಗೆ ಇವತ್ತಿನವರೆಗೆ ಆಗಿರುವ ಖರ್ಚು 1 ಕೋಟಿ 15 ಲಕ್ಷ ರೂಪಾಯಿ. ಇನ್ನು ಮುಗಿಯಬೇಕಾದರೆ 5-6 ವರ್ಷ ಬೇಕು. ಕೆಲಸ ಯಾವ ರೀತಿ ನಡೆಯುತ್ತಿದೆ. ಅದೇ ಗತಿಯಲ್ಲಿ ಮುಂದುವರಿದರೆ, ಮತ್ತೆ

ಐದು ವರ್ಷ ಬೇಕಾಗುತ್ತದೆ. ಒಂದೂವರೆ ಕೋಟಿ ರೂಪಾಯಿ ಹಣ ಬೇಕಾಗಬಹುದು. ಈ ಕನ್ನಡ ನಿಘಂಟಿನ ಕರ್ಮಕಾಂಡದ ಬಗ್ಗೆ ಬೇರೆ ದಿವಸ ವಿವರವಾಗಿ ಮಾತನಾಡುತ್ತೇನೆ.

ಆದರೆ ಅದನ್ನು ಏಕೆ ಹೇಳುತ್ತೇನೆ. ನಾವೇ ಕಾರಣರು ಅದಕ್ಕೆ. ಆ ಕಾರಣ ಇಲ್ಲಿ ಕೈಗಾರಿಕೆಗಳು ಮತ್ತು ಕೃಷಿಗೆ ಸಂಬಂಧಪಟ್ಟ ವಿಶಿಷ್ಟ ಪದಗಳನ್ನು ಸಂಗ್ರಹಿಸುವುದು, ಪ್ರಕಟಿಸುವುದು, 7ನೇ ಉದ್ದೇಶಗಳನ್ನೊಂದೂ ಹಾಗಿಲ್ಲ. ಅದಕ್ಕೆ ನಾವು ವೈಜ್ಞಾನಿಕವಾಗಿ ಮಾಡಬೇಕಾಗಿರುವ ಕೆಲಸ ವೃತ್ತಿ ಪದಕೋಶ, "ಕರ್ನಾಟಕ ವೃತ್ತಿ ಪದಕೋಶ" ಕನ್ನಡ ನಿಘಂಟಿನ ಕೆಲಸವನ್ನು ಇದಕ್ಕೆ ವಹಿಸಿ ನೋಡಿ. ಅದನ್ನು ತನಿಖೆ ಮಾಡಿ ಯಾವ ರೀತಿ ಕೆಲಸ ಮಾಡುತ್ತಿದ್ದಾರೆ. ನೋಡಿ ಕನ್ನಡ ನಿಘಂಟಿನ ಕೆಲಸವನ್ನು ಇದಕ್ಕೆ ವರ್ಗಾಯಿಸಬೇಕು. ಕನ್ನಡ ವೃತ್ತಿ ಪದಕೋಶ ಬರೀ ಕೃಷಿ ಅಲ್ಲ, ಕೆಲವೇ ಕೈಗಾರಿಕೆಗಳು ಅಲ್ಲ, ಎಲ್ಲಾ ವೃತ್ತಿಗಳ ಪದಕೋಶ ಒಂದಾಗಬೇಕು. ಮತ್ತು ಜನಪದ ಕೋಶವೂ ಒಂದು ಆಗಬೇಕು. ವಾಟಾಳ್ ನಾಗರಾಜ್ ಹೇಳಿದರು, ಜನಪದ ಕೋಶ ಒಂದಾಗಬೇಕು. ಅದರ ಜೊತೆಗೆ ಉಪ ಭಾಷೆಗಳ ಬಗ್ಗೆ ತಾವು ಏನು ಕಾರ್ಯಕ್ರಮ ಹಾಕುತ್ತಿದ್ದೀರಿ, ಉಪಭಾಷೆಗಳ ಪದಕೋಶ "ಡಿಕ್ಷರಿ ಆಫ್ ಕರ್ನಾಟಕ ಡಿಕ್ಲೇಟ್ಸ್"ಉಪ ಭಾಷೆಗಳ ಪದಕೋಶ ಈ ವಿಶ್ವವಿದ್ಯಾನಿಲಯದಲ್ಲಿ ಒಂದು ಉದ್ದಿಶ್ಯವಾಗಿ ತಾವು ಸೇರಿಸಿಕೊಳ್ಳಬೇಕು. ಇದು ಬಹಳ ಮುಖ್ಯವಾದ ಕೆಲಸವೆಂದರೆ ತಾವು ಪದಕೋಶಗಳನ್ನು ಮತ್ತೆ ಇಲ್ಲಿ ಜನಪದ ವಸ್ತು ಸಂಗ್ರಹಾಲಯವೂ ಬರಬಹುದು. ವಸ್ತು ಸಂಗ್ರಹಾಲಯ ಇದರಲ್ಲಿ ಪ್ರಾಚೀನ ವಸ್ತುಗಳನ್ನು ನಾವು ಸಂಗ್ರಹಿಸಬಹುದು. ಆದರೆ ಅದರ ಹೆಸರೇನು ಎನ್ನುವುದು ನಮಗೆ ಗೊತ್ತಿರುವುದಿಲ್ಲ. ಆ ಸ್ಥಿತಿ ಮುಟ್ಟುತ್ತಿದ್ದೇವೆ. ಕೃಷಿಯಲ್ಲಿ ನಾವು ಏನು ಉಪಯೋಗಿಸುತ್ತಿದ್ದೇವೆ, ಆ ಸಲಕರಣೆಗಳ ಹೆಸರುಗಳು ಇನ್ನು ಹದಿನಾರು ವರ್ಷಗಳಲ್ಲಿ ಮರೆತು ಹೋಗುವಂಥ ಪರಿಸ್ಥಿತಿಗೆ ಬರುತ್ತಿದ್ದೇವೆ. ಆ ಕಾರಣ ಬರೀ ವಸ್ತುಗಳನ್ನು ಸಂಗ್ರಹಿಸಿದರೆ ಸಾಲದು. ವೃತ್ತಿಪದ ಕೋಶ, ಉಪಭಾಷಾ ಪದ ಕೋಶ, ಇವು ಬೇಕಾಗುತ್ತದೆ. ಈ ವಿಶ್ವವಿದ್ಯಾನಿಲಯದ ಕೆಲಸ ಇದು ಆಗಬೇಕೆಂದು ಹೇಳಿ, ಒಂದು ತಿದ್ದುಪಡಿಯನ್ನು ತಾವು ಸೇರಿಸಬೇಕು ಎಂದು ಕೇಳಿಕೊಳ್ಳುತ್ತಾ ಈ ಮಸೂದೆಗೆ ಬೆಂಬಲ ವ್ಯಕ್ತಪಡಿಸುತ್ತಿದ್ದೇನೆ, ನಮಸ್ಕಾರ.

ಶ್ರೀ ಪಿ.ಜಿ.ಆರ್. ಸಿಂಧ್ಯ : ಮಾನ್ಯ ಉಪಾಧ್ಯಕ್ಷಿಣಿಯವರೆ, ಇವೊತ್ತು ನಮ್ಮ ರಾಜ್ಯದ ವಿಧಾನಸಭೆ ಇತಿಹಾಸದಲ್ಲಿ ನೆನಪು ಇಡತಕ್ಕಂಥ ದಿನ ಎಂದು ನಾನು ತಿಳಿದಿದ್ದೇನೆ. ನಿಜವಾಗಿಯೂ ನಮ್ಮ ರಾಜ್ಯದ ನಾವು ಪ್ರತಿಯೊಬ್ಬ ಪ್ರಜೆಯೂ ಸಹಿತ ಹೆಮ್ಮೆಪಡುವಂಥ ಕೆಲಸವನ್ನು ಇವೊತ್ತು ನಮ್ಮ ರಾಜ್ಯ ಸರ್ಕಾರದವರು ಮಾಡುತ್ತಿದ್ದಾರೆ. ಈ ಸಂದರ್ಭದಲ್ಲಿ ಮಾನ್ಯ ಮುಖ್ಯಮಂತ್ರಿಗಳಿಗೂ ಮಾನ್ಯ ಮೊಯಿಲಿಯವರಿಗೂ ನಾನು ಅಭಿನಂದನೆಯನ್ನು ಸಲ್ಲಿಸಲಿಚ್ಛಿಸುತ್ತೇನೆ. ಇದನ್ನು ಸ್ವಾಗತ ಮಾಡುತ್ತೇನೆ. ಇನ್ನು ಬರತಕ್ಕಂಥ ದಿನಗಳಲ್ಲಿ ತಾವು ಹೆಮ್ಮೆಯಿಂದ ಹೇಳಿಕೊಳ್ಳಬಹುದು. ನಾನು ಶಿಕ್ಷಣ ಸಚಿವನಿದ್ದಾಗ, ಈ ಮಸೂದೆಯನ್ನು ನಾನು ಮಾಡಿದೆ, ಕನ್ನಡದ ಒಂದು ವಿಶ್ವವಿದ್ಯಾನಿಲಯ ಕರ್ನಾಟಕದಲ್ಲಿ ಪ್ರಾರಂಭಮಾಡಿದಂಥಾದ್ದು ನನ್ನದು ಎನ್ನತಕ್ಕದ್ದು ಸಹಜವಾಗಿ ತಾವು ಹೇಳಿಕೊಳ್ಳುವುದಕ್ಕೆ ಅವಕಾಶ ಇದೆ. ಇದು ಹೆಮ್ಮೆಪಡತಕ್ಕಂಥ ವಿಚಾರ.

ಶ್ರೀ ವಾಟಾಳ್ ನಾಗರಾಜ್: ನಾವು ಸದಸ್ಯರಾಗಿದ್ದಾಗ ಬಂತು ಎಂದು ಹೇಳಿಕೊಳ್ಳಬಹುದು. ಕರ್ನಾಟಕ ನಾಮಕರಣ ಆದಾಗ ನಾನು ಇದ್ದೆ. ಅದು ಆದ ಐದು ದಿವಸಗಳಲ್ಲಿ ನನ್ನ ಮೆಂಬರ್‌ಶಿಪ್ ಹೊರಟುಹೋಯಿತು.

ಉಪಾಧ್ಯಕ್ಷರು: ಈಗ ಏನೂ ಹೋಗುವುದಿಲ್ಲ.

ಶ್ರೀ ಪಿ.ಜಿ.ಆರ್. ಸಿಂಧ್ಯ: ಕನ್ನಡದ ಭಾಷೆಯನ್ನು ಆಡಳಿತ ಭಾಷೆಯನ್ನಾಗಿ ಮಾಡಲಿಕ್ಕೆ ನಮ್ಮ ಸರ್ಕಾರಗಳು ಬಹಳ ಪ್ರಯತ್ನಗಳನ್ನು ಮಾಡಿದೆ. ವಿಶೇಷವಾಗಿ ಕೆಂಗಲ್ ಹನುಮಂತಯ್ಯನವರ ಕಾಲದಲ್ಲಿ ಈ ಒಂದು ಪ್ರಯತ್ನ ಆದರೂ ಸಹಿತ ನನಗೆ ಜ್ಞಾಪಕ ಇರುವ ಹಾಗೆ, ನಾವು ಆಗ ಮಾಧ್ಯಮಿಕ ಶಾಲಾ ವಿದ್ಯಾರ್ಥಿಗಳು ಎಂದು ಕಾಣುತ್ತದೆ. ಈ ರಾಮಾಯಣ, ಮಹಾಭಾರತ ಪುಸ್ತಕಗಳನ್ನು ಸರ್ಕಾರದ ಖರ್ಚಿನಲ್ಲಿ ಮುದ್ರಿಸಿ, ಬಹಳ ಕಡಿಮೆ ಬೆಲೆಯಲ್ಲಿ ಅಂದರೆ 5 ರೂಪಾಯಿಗೆ ಕೆಂಗಲ್ ಹನುಮಂತಯ್ಯನವರ ಕಾಲದಲ್ಲಿ ಮಾಡಿದ್ದರು.

ಅದು ಆದನಂತರ ಕನ್ನಡ ಭಾಷೆಯನ್ನು ಆಡಳಿತ ಭಾಷೆಯನ್ನಾಗಿ ಮಾಡಲಿಕ್ಕೆ ಒಂದು ಹೊಸ ಸ್ಫೂರ್ತಿ ಸಿಕ್ಕಿದ್ದು ಎಂದು ಹೇಳಿದರೆ ಅದು ದೇವರಾಜ್ ಅರಸ್ ಅವರ ಕಾಲದಲ್ಲಿ.

ಮಾನ್ಯ ದೇವರಾಜ್ ಅರಸರಿಗೆ ಎರಡು ಕೀರ್ತಿಗಳು ಹೋಗಬೇಕಾಗುತ್ತದೆ. ಒಂದು ಕರ್ನಾಟಕ ಹೆಸರು ಇರುವಂಥ ಸಂದರ್ಭದಲ್ಲಿ.

ಅವರು ಮುಖ್ಯಮಂತ್ರಿಗಳಾಗಿದ್ದುದು ಅದು ಆದನಂತರ ಕನ್ನಡವನ್ನು ಆಡಳಿತ ಭಾಷೆಯಾನ್ನಾಗಿ ಮಾಡಲಿಕ್ಕೆ ಪ್ರಯತ್ನ ಮಾಡಿದ್ದುದು ಕನ್ನಡವನ್ನು ಆಡಳಿತ ಭಾಷೆಯನ್ನಾಗಿ ಮಾಡತಕ್ಕದ್ದರಲ್ಲಿ ಬಹಳ ಅಡಚಣೆ ಏನೂ ಇಲ್ಲ. ಆದರೆ ನಾನೂ ಸಹಿತ ಐದಾರು ವರ್ಷಗಳ ಕಾಲ ಆಡಳಿತವನ್ನು ಬಹಳ ಹತ್ತಿರದಿಂದ ನೋಡಿದ್ದೇನೆ. ಹೊರಗಿನಿಂದ ಬಂದಿರತಕ್ಕ ಅಧಿಕಾರಿಗಳೇ ಪರವಾಗಿಲ್ಲ ಎಂದು ಹೇಳಬಹುದು. ಈ ಮಾತನ್ನು ಹೇಳಿದರೆ ಕೆಲವು ಅಧಿಕಾರಿಗಳಿಗೆ ಬಹಳ ಬೇಜಾರು ಆಗಬಹುದು ನಮ್ಮ ರಾಜ್ಯಸರ್ಕಾರದ ಮುಖ್ಯ ಕಾರ್ಯದರ್ಶಿಗಳಾಗಿದ್ದಂಥ ಸನ್ಮಾನ್ಯ ಟಿ.ಆರ್. ಸತೀಶ್‌ಚಂದ್ರ ಅವರು ಒಂದು ಮಾತನ್ನು ಹೇಳಿದ್ದಾರೆ. ಅವರು ನಿವೃತ್ತಿ ಆದಮೇಲೆ ಈ ಕರ್ನಾಟಕದ ಐ.ಎ.ಎಸ್. ಐ.ಪಿ.ಎಸ್. ಪೈಕಿ ವಿತರಣೆ ಮಾಡತಕ್ಕ ಸಂದರ್ಭದಲ್ಲಿ ಹೊರ ರಾಜ್ಯಗಳಿಂದ ಬಂದಿರತಕ್ಕಂಥ ಐ.ಎ.ಎಸ್ ಮತ್ತು ಐ.ಪಿ.ಎಸ್. ಅಧಿಕಾರಿಗಳು ಕನ್ನಡದಲ್ಲಿ ಓದಲಿಕ್ಕೆ ಬರೆಯಲಿಕ್ಕೆ ಪ್ರಯತ್ನ ಮಾಡುತ್ತಾರೆ. ಆದರೆ ನಮ್ಮ ಅಧಿಕಾರಿಗಳು ಇದಕ್ಕೆ ಹಿಂಜರಿಯುತ್ತಾರೆ. ಎನ್ನತಕ್ಕ ಮಾತನ್ನು ಒಂದು ಕಡೆ ಹೇಳಿದ್ದಾರೆ.

ಶ್ರೀ ವಾಟಾಳ್ ನಾಗರಾಜ್: ಮಾನ್ಯ ಚಿರಂಜೀವಿ ಸಿಂಗ್ ಅವರು ಕನ್ನಡದವರಿಗೆ ಯಾರಿಗೂ ಕಡಿಮೆ ಇಲ್ಲ.

ಶ್ರೀ ಪಿ.ಜಿ.ಆರ್. ಸಿಂಧ್ಯ ಅವರು ಹೇಳಿದ ಹಾಗೆ ನಮ್ಮಲ್ಲಿ ಇರುವ ಒಂದು ರೀತಿಯ ಅಭಿಮಾನ ಸಾಲದು ಅನೇಕ ಸಂದರ್ಭದಲ್ಲಿ ಈ ರೀತಿ ಏತಕ್ಕೆ ಆಗುತ್ತಿದೆ ಎಂದು ನನಗೆ ಅರ್ಥವಾಗುತ್ತಿಲ್ಲ. ಈ ಸಂದರ್ಭದಲ್ಲಿ ಮತ್ತೊಂದು ವಿಚಾರ ಹೇಳಬೇಕೆಂದರೆ ಮಾನ್ಯ ಎಂ.ಪಿ. ಪ್ರಕಾಶ್ ಅವರನ್ನು ಈ ಸಂದರ್ಭದಲ್ಲಿ ನೆನೆಸಿಕೊಳ್ಳುತ್ತೇನೆ. ಹಿಂದೆ ಅವರು ಈ ಇಲಾಖೆಯ ಮಂತ್ರಿಗಳಾಗಿದ್ದಾಗ ಕನ್ನಡ ವಿಶ್ವವಿದ್ಯಾಲಯ ಪ್ರಾರಂಭ ಮಾಡಬೇಕೆಂದು ಮಾನ್ಯ ಪ್ರಕಾಶ್ ಅವರು ಬಹಳ ಉತ್ಸಾಹವನ್ನು ತೋರಿಸಿದ್ದರು. ನಾನು ಮೊದಲು ಇಂಜಿನಿಯರಿಂಗ್ ವಿಧ್ಯಾರ್ಥಿಯಾಗಿದ್ದಾಗ ನನಗೆ ಒಬ್ಬರು ಮಾಸ್ಟರು ಇದ್ದರು. ಅವರು ಈಗ ನ್ಯೂಯಾರ್ಕಿನಲ್ಲಿ ಸೆಟಲ್ ಆಗಿದ್ದಾರೆ ಎಸ್.ಕೆ. ಹರಿಹರೇಶ್ವರನ್ ಎಂದು ಅವರು ಈಗಲೂ ಅಧ್ಯಾಪಕರಾಗಿ ಕೆಲಸ ಮಾಡುತ್ತಿದ್ದಾರೆ. ಅವರು ಅಮೆರಿಕಾನ್ ಎರಾ ಎಂದು ಹೇಳಿಬಿಟ್ಟು ಒಂದು ಪುಸ್ತಕವನ್ನು ಅಲ್ಲಿ ಪ್ರತಿ 15 ದಿನಗಳಿಗೆ ಒಂದು ಸಾರಿ ಬಿಡುಗಡೆ ಮಾಡುತ್ತಿದ್ದಾರೆ.

ಅವರು ನಮ್ಮ ಮಾಸ್ತರು ನನಗೆ ಬಹಳ ಹೆಮ್ಮೆಯಾಗುತ್ತಿದೆ. ಅವರು ಇಲ್ಲಿಗೆ ಒಂದುಸಾರಿ ಬಂದು ನಮ್ಮನ್ನು ಮಾನ್ಯ ಮುಖ್ಯಮಂತ್ರಿಗಳನ್ನು ಮಾನ್ಯ ಮಂತ್ರಿಗಳನ್ನೆಲ್ಲಾ ಭೇಟಿಮಾಡಿ ಈ ವಿಚಾರವನ್ನು ಪ್ರಸ್ತಾಪ ಮಾಡಿದರು. ಕನ್ನಡದಲ್ಲಿ ಈ ಕೆಲಸ ತಕ್ಷಣ ಆಗಬೇಕು ಎನ್ನತಕ್ಕ ಮಾತನ್ನು ಹೇಳಿದರು. ಇವತ್ತು ಸರ್ಕಾರ ಏನು ಮಾಡಲಿಕ್ಕೆ ಹೊರಟಿದೆ ಅದನ್ನು ನಾನು ಮಾತ್ತೊಮ್ಮೆ ಅಭಿನಂದಿಸುತ್ತೇನೆ. ನನಗೆ ಒಂದು ಜ್ಞಾಪಕ ಬರುತ್ತದೆ. 1978 ಇಸವಿಯಲ್ಲಿ ನಾನು ಕ್ಯೂಬಕ್ಕೆ ಹೋಗಿದ್ದಾಗ ಅಲ್ಲಿಂದ ಒಬ್ಬ ಪೋಸ್ಟ್ ಗ್ರ್ಯಾಜುಯೇಟ್ ವಿದ್ಯಾರ್ಥಿ ನನನ್ನು ಬಂದು ಕೇಳಿದರು ನೀವು ಇಂಡಿಯಾ ದೇಶದಲ್ಲಿ ಯಾವ ರಾಜ್ಯದವರು ಎಂದು ನಾನು ಕರ್ನಾಟಕದವನು ಬೆಂಗಳೂರಿನವನು ಎಂದು ಹೇಳಿದಾ ಓಹೋ ಕುವೆಂಪು, ಕುವೆಂಪು, ಕೆ.ವಿ. ಪುಟ್ಟಪ್ಪ ಎನ್ನತಕ್ಕ ಮಾತನ್ನು ಅವರು ಹೇಳಿ ಶ್ರೀ ರಾಮಾಯಣ ದರ್ಶನಂನ್ನು ನೀವು ಓದಿದ್ದೀರಾ ಎಂದು ಅವರು ನನ್ನನ್ನು ಕೇಳಿದರು ಆಗ ಅದನ್ನು ಕೇಳಿ ನನಗೆ ತಲೆತಗ್ಗಿಸುವಂತಾಯಿತು. ಏಕೆಂದರೆ ನಾನು ಅದನ್ನು ಓದಿರಲಿಲ್ಲ ನಾನು ಪ್ರಾಮಾಣಿಕವಾಗಿ ಈ ಮಾತನ್ನು ಒಪ್ಪಿಕೊಳ್ಳುತ್ತಿದ್ದೇನೆ. ಕ್ಯೂಬಾ ಒಂದು ಸಣ್ಣ ರಾಷ್ಟ್ರ ಸಾವಿರಾರು ಮೈಲಿ ದೂರ ಇರತಕ್ಕದ್ದು ಇದು. ನಮ್ಮ ನಾಡಿನ ಕವಿಯ ಬಗ್ಗೆ ಅವರು ಇಷ್ಟೊಂದು ಹೆಮ್ಮೆ ಪಡುತ್ತಿದ್ದರೂ ನಮ್ಮ ನಾಡಿನಲ್ಲಿ ಇಂಥ ಕವಿ ಇದ್ದಾರೆ ಎನ್ನತಕ್ಕ ಹೆಮ್ಮೆಯೇ ನಮಗೆ ಇಲ್ಲವಲ್ಲಾ ಎಂದು ನಮಗನ್ನಿಸುತ್ತದೆ ನಾನು ಬಹಳ ಹೆಮ್ಮೆ ಪಡತಕ್ಕ ಇನ್ನೊಂದು ವಿಚಾರ ಎಂದರೆ ಇತ್ತೀಚೆಗೆ ನಾನು ಒಮ್ಮೆ ಕಾಶ್ಮೀರದ ಶ್ರೀನಗರಕ್ಕೆ ಹೋಗಿದ್ದಾಗ ಧಾರವಾಡದ ಐಹೊಳೆ ಎನ್ನುವವರು ಅಲ್ಲಿಯ ಐ.ಎ.ಎಸ್. ಕೇಡಾರ್‌ನಲ್ಲಿ ಬಹಳ ದೊಡ್ಡ ಅಧಿಕಾರಿಯಾಗಿದ್ದರು ಲೋಕಾಯುಕ್ತದ ರೀತಿಯಲ್ಲಿ ಅಲ್ಲಿಯ ಸರ್ಕಾರದಲ್ಲಿ ಅವರು ಕೆಲಸಮಾಡುತ್ತಿದ್ದಾರೆ. ಅಲ್ಲಿ ಸುಮಾರು 15 ಜನ ಸೇರಿಕೊಂಡು ಶ್ರೀನಗರದಲ್ಲಿ ಒಂದು ಕನ್ನಡ ಸಂಘವನ್ನು ಸ್ಥಾಪನೆ ಮಾಡಿಕೊಂಡಿದ್ದಾರೆ ನಾವು ಅಲ್ಲಿಗೆ ಹೋದಕೂಡಲೇ ನಮ್ಮನ್ನು ಬಹಳ ಆತ್ಮೀಯವಾಗಿ ಬರಮಾಡಿಕೊಂಡು ನಮ್ಮ ಸಂಸ್ಕೃತಿಯ ಬಗ್ಗೆ ನಮ್ಮ ಭಾಷೆಯ ಬಗ್ಗೆ ಬಹಳಷ್ಟು ಆಸಕ್ತಿಯನ್ನು ತೋರಿಸಿ ಮಾತನಾಡಿದರು ನಾವೆಲ್ಲರೂ ಒಂದೇ ಎನ್ನತಕ್ಕ ಭಾವನೆ ನಾವು ಅಲ್ಲಿದ್ದಾಗ ಬರುತ್ತದೆ. ಆದರೆ ಇಲ್ಲಿ ಬರುವುದಿಲ್ಲ ಈ ದೃಷ್ಟಿಯಿಂದ ಕನ್ನಡ ಭಾಷೆಯ ಅಭಿವೃದ್ಧಿ ದೃಷ್ಟಿಯಿಂದ ನಮ್ಮ ಸಂಸ್ಕೃತಿಯನ್ನು ಪುನರುಜ್ಜೀವನಗೊಳಿಸುವ ದೃಷ್ಟಿಯಿಂದ ನಮ್ಮ ಆಡುಭಾಷೆಯನ್ನಾಗಿ ಮಾಡುವ ದೃಷ್ಟಿಯಿಂದ ಇವತ್ತು ಸರ್ಕಾರ ಮಾಡಿರತಕ್ಕ ಕೆಲಸ ನಿಜವಾಗಿ ಸ್ವಾಗತಾರ್ಹ ಎನ್ನತಕ್ಕ ಮಾತನ್ನು ಹೇಳಿ ಇದೇ ಸಂದರ್ಭದಲ್ಲಿ ಒಂದೆರಡು ಸಲಹೆಗಳನ್ನು ಮಾನ್ಯ ಮಂತ್ರಿಗಳಿಗೆ ಕೊಡಲಿಕ್ಕೆ ಇಚ್ಛೆ ಪಡುತ್ತೇನೆ. ಏಕೆಂದರೆ ಮಾನ್ಯ ಮೊಯಿಲಿಯವರಿಗೆ ನಾವು ಏನಾದರೂ ಸಲಹೆಗಳನ್ನು ಕೊಟ್ಟರೆ ಅವುಗಳನ್ನು ಪ್ರಾಮಾಣಿಕವಾಗಿ ಕಾರ್ಯಗತಗೊಳಿಸುವುದಕ್ಕೆ ಪ್ರಯತ್ನ ಮಾಡುತ್ತಾರೆಂದು ವಿಶ್ವಾಸ ನನಗಂತೂ ಇದೆ. ಕೆ.ಎಸ್.ಆರ್.ಟಿ.ಸಿ.ಯಲ್ಲಿ ಕನ್ನಡವನ್ನು ಆಡಳಿತಭಾಷೆಯಾಗಿ ಮಾಡುವುದರಲ್ಲಿ ಅಲ್ಲಿಯ ಆಡಳಿತವರ್ಗದವರು ಬಹಳ ದೊಡ್ಡ ಪ್ರಯತ್ನವನ್ನು ಮಾಡಿದ್ದಾರೆ. ಮಾನ್ಯ ಪಾಟೀಲ್ ಪುಟ್ಟಪ್ಪನವರು ಸಮಿತಿಯ ಅಧ್ಯಕ್ಷರಾಗಿದ್ದು ಸಂದರ್ಭದಲ್ಲಿ ನಮ್ಮ ಸರ್ಕಾರದ ಅನೇಕ ಪಬ್ಲಿಕ್ ಸೆಕ್ಟಾರ್ ಅಂಡರ್‌ಟೇಕಿಂಗ್ಸ್‌ನಲ್ಲಿ ಕನ್ನಡವನ್ನು ಆಡಳಿತಭಾಷೆಯನ್ನಾಗಿ ಮಾಡಿದರು ಕೆ.ಎಸ್.ಆರ್.ಟಿ.ಸಿ.ಯಲ್ಲಿ ಎನ್.ಜಿ.ಇ.ಎಫ್.ನಲ್ಲಿ ಎರಡರಲ್ಲೂ ಕೂಡ ಕನ್ನಡವನ್ನು ಬಹಳ ಚೆನ್ನಾಗಿ ಆಡಳಿತ ಭಾಷೆಯಾಗುವಂತೆ ಮಾಡಿದ್ದಾರೆ. ಮಾನ್ಯ ಸಚಿವರು ಬಸ್‌ನಲ್ಲಿ ಪ್ರಯಾಣ ಮಾಡುವುದಿಲ್ಲವೆಂದು ಕಾಣುತ್ತದೆ. ತಾವು ನೋಡಬೇಕು ಕೆಲವು ಬಸ್ಸುಗಳಲ್ಲಿ ನಿರ್ವಾಹಕರು ಎಲ್ಲಾ ಮಾತುಗಳನ್ನೂ ಅಚ್ಚ ಕನ್ನಡದಲ್ಲೇ ಮಾತನಾಡುತ್ತಾರೆ. ಅವರು ಕೇವಲ ಕನ್ನಡದಲ್ಲಿ ಮಾತನಾಡುವುದು ಮಾತ್ರವಲ್ಲ ಬಹಳ ಶಿಸ್ತಿನಿಂದಲೂ ಇರುತ್ತಾರೆ. ಅವರನ್ನು ನೋಡಿದಾಗ ನಾವು ಕನ್ನಡಿಗರು ಎನ್ನುತಕ್ಕ ಒಂದು ಹೆಮ್ಮೆ ಬಂದು ಕೆಲಸದಲ್ಲಿ ಒಂದುರೀತಿಯ ಶಿಸ್ತು ಬರುತ್ತದೆ ಈ ದೃಷ್ಟಿಯಿಂದ ಸರ್ಕಾರದ

ಎಲ್ಲ ಕೆಲಸದಲ್ಲೂ ಕೊನೆಯ ಪಕ್ಷ ವಿಧಾನಸೌಧದಲ್ಲಿ ಮತ್ತು ಇದಕ್ಕೆ ಸಂಬಂಧಪಟ್ಟ ಇಲಾಖೆಗಳಲ್ಲಿ ಕನ್ನಡವನ್ನು ಆಡಳಿತಭಾಷೆಯಗಿ ಇನ್ನೂ ತೀವ್ರವಾಗಿ ಮಾಡಿಲಿಕ್ಕೆ ಪ್ರಯತ್ನ ಮಾಡಬೇಕೆಂದು ಹೇಳುತ್ತೇನೆ.

ಮತ್ತೊಂದು ವಿಚಾರ ಎಂದರೆ ಹಳ್ಳಿಗಾಡಿನ ಪ್ರದೇಶದಲ್ಲಿ ಹಳಗನ್ನಡದಲ್ಲಿ ಬರೆದಿರತಕ್ಕ ಅನೇಕ ಶಾಸನಗಳು ಸರ್ಕಾರದ ಕೈಗೆ ಇನ್ನೂ ಸಿಕ್ಕಿಲ್ಲ. ಬಹಳ ಉಪಯುಕ್ತವಾದ ವಿಚಾರಗಳು ಆದರಲ್ಲಿರುತ್ತವೆಂದು ನಾನು ತಿಳಿದುಕೊಂಡಿದ್ದೇನೆ ಆದುದರಿಂದ ಈ ಕನ್ನಡ ವಿಶ್ವವಿದ್ಯಾನಿಲಯದವರು ಈ ಕನ್ನಡದ ಹಳೇ ಶಾಸನಗಳನ್ನು ಸಂಗ್ರಹ ಮಾಡತಕ್ಕ ಕೆಲಸವನ್ನು ಮಾಡಬೇಕು ಅದರಲ್ಲಿ ಏನು ಬರೆದಿದ್ದಾರೆ ಅದರಿಂದ ನಮಗೆ ಏನಾದರೂ ಉಪಯೋಗವಾಗುತ್ತದೆಯೇ ಎಂಬುದನ್ನು ಸಂಶೋಧನಾತ್ಮಕ ದೃಷ್ಟಿಯಿಂದಲೂ ನೋಡತಕ್ಕ ಕೆಲಸವನ್ನು ಮಾಡಿದರೆ ಇನ್ನೂ ಉತ್ತಮ ಎಂದು ಹೇಳಿ ಈ ವಿಧೇಯಕವನ್ನು ಸ್ವಾಗತ ಮಾಡಿ ಸರ್ಕಾರದವರನ್ನು ಅಭಿನಂದಿಸಿ ನನ್ನ ಎರಡು ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಜಿ.ಎಸ್. ಆಚಾರ್ (ಬೈಂದೂರ್): ಮಾನ್ಯ ಉಪಾಧ್ಯಕ್ಷಿಣಿಯವರೆ ಕನ್ನಡ ವಿಶ್ವವಿದ್ಯಾನಿಲಯಕ್ಕೆ ಸಂಬಂಧಪಟ್ಟ ಈ ವಿಧೇಯಕವನ್ನು ಸ್ವಾಗತಿಸುತ್ತಾ ನಾನು ಒಂದೆರಡು ಮಾತುಗಳನ್ನು ಹೇಳಲಿಕ್ಕೆ ಅಪೇಕ್ಷೆ ಪಡುತ್ತೇನೆ.

ಕನ್ನಡ ವಿಶ್ವವಿದ್ಯಾನಿಲಯದ ಮಸೂದೆ ಬರುತ್ತದೆ ಎನ್ನುವಾಗಲೇ ಪತ್ರಿಕೆಗಳಲ್ಲಿ ಟೀಕೆಗಳು ಬಂದಿದ್ದನ್ನು ನಾವು ಓದಿದ್ದೇವೆ. ಮುಖ್ಯವಾಗಿ ಕನ್ನಡ ಸಾಹಿತಿಗಳು ಕನ್ನಡದಲ್ಲೇ ಕೆಲಸಮಾಡಿದವರೂ ಕೂಡ ಇದನ್ನು ಕುರಿತು ಎರಡು ವಿಚಾರದಲ್ಲಿ ಆಲೋಚನೆ ಮಾಡತಕ್ಕದ್ದು ಅತ್ಯಂತ ದುರ್ದೈವ ಎಂದು ನನಗನ್ನಿಸುತ್ತದೆ. ಯಾವುದಾದರೂ ಒಂದು ಸಂಸ್ಥೆಯನ್ನು ಸ್ಥಾಪನೆ ಮಾಡಿ ಭಾಷೆಗೆ ಸಂಸ್ಕೃತಿಗೆ ಒಳಿತಾಗಿ ಅದು ಯಾವರೀತಿ ಹೋಗುತ್ತದೆನ್ನುವುದನ್ನು ನೋಡಿಕೊಂಡು ಅನಂತರ ಟೀಕೆ ಮಾಡಬಹುದಾಗಿತ್ತು ಆದರೆ ಅದಕ್ಕೆ ಮೊದಲು ಅಂದರೆ ಕೂಸು ಹುಟ್ಟುವುದಕ್ಕೆ ಮೊದಲೇ ಅದರ ಕುತ್ತಿಗೆಯನ್ನು ಹಿಚುಕುವಂಥ ಪ್ರವೃತ್ತಿ ಸಾದ್ಯವಾದುದಲ್ಲ ಏನೇ ಇದ್ದರೂ ಕೂಡ ಕನ್ನಡ ತಾಯಿಯ ಪವಿತ್ರ ದೇಗುಲವನ್ನು ನಿರ್ಮಾಣಮಾಡುವಂತಹ ಈ ವಿಶ್ವವಿದ್ಯಾನಿಲದ ಮಸೂದೆಯನ್ನು ತಂದಂಥ ಮಾನ್ಯ ಶಿಕ್ಷಣ ಸಚಿವರಿಗೆ ಪ್ರಥಮವಾಗಿ ಅಭಿನಂದಿಸುತ್ತೇನೆ. ನಮ್ಮ ಸಾಹಿತಿಗಳು ಅಥವಾ ಕನ್ನಡ ಭಾಷಾಭಿಮಾನಿಗಳು ಬಹಳ ವರ್ಷಗಳಿಂದ ಹೇಳುತ್ತಾರೆ.

"ಕನ್ನಡದವನೇ ಕುಣಿದಾಡುವುದೆನ್ನೆದೆ" ಎಂದರು

"ತನು ಕನ್ನಡ ಮನ ಕನ್ನಡ" ಅಂದರು

ಅಷ್ಟು ಹೇಳಿದವರೂ ಕೂಡ ಕನ್ನಡ ವಿಶ್ವವಿದ್ಯಾಲಯ ಏತಕ್ಕೆ ಎಂದವರು ಇದ್ದಾರೆ.

"ಕನ್ನಡ ಕುಲದೇವಿ ಕಾಪಾಡು ಬಾ ತಾಯೇ"

ಎಂದು ಹಾಡಿದವರು ಇದ್ದಾರೆ ಅಂದರೆ ಕನ್ನಡದ ಕೂಲದೇವಿ ಬಾ ತಾಯಿ ಇವರನ್ನು ಬಂದು ಕಾಪಾಡಬೇಕು ಅದರ ಬದಲು ಕನ್ನಡ ತಾಯಿಯನ್ನು ಕಾಪಾಡುವ ಕಾಲ ಬಂದಿದೆ. ಹಾಗಾದರೆ ಕನ್ನಡ ತಾಯಿಯನ್ನು ಕನ್ನಡ ಸಂಸ್ಕೃತಿಯನ್ನು ಕಾಪಾಡುತಕ್ಕಂಥಹ ವಿಶ್ವಾವಿದ್ಯಾನಿಲಯವನ್ನು ರಚಿಸತಕ್ಕಂಥ ಕನ್ನಡ ತಾಯಿಯ ಪವಿತ್ರ ದೇಗುಲವನ್ನು ನಿರ್ಮಾಣ ಮಾಡತಕ್ಕಂಥ ಮಾಸೂದೆಯನ್ನು ಕನ್ನಡ ನಾಡಿನ ಎಲ್ಲಿ ಜನ ಕನ್ನಡದ ಭಾಷಾಭಿಮಾನಗಳು ಸಾಹಿತ್ಯಾಭಿಮಾನಿಗಳು ಸಂಸ್ಕೃತಾಭಿಮಾನಿಗಳೂ ಮುಕ್ತ ಕಂಠದಿಂದ ಸ್ವಾಗತಿಸಬೇಕು ಕನ್ನಡ ಭಾಷಾ ಸಾಹಿತ್ಯದಲ್ಲಿ ಉನ್ನತ ಮಟ್ಟದ ಸಂಶೋಧನೆ ಇವತ್ತು ಆಗಬೇಕು ಕನ್ನಡ ಹಿರಿಯ ಲೇಖಕರಾದ ಪಂಪ ಮುದ್ದಣ

ರತ್ನಾಕರವರ್ಣಿ ಅಥವಾ ಇತ್ತೀಚಿನ ಲೇಖಕರಾದ ಕುವೆಂಪುರವರಾಗಲಿ ಬೇಂದ್ರೆಯವರಾಗಲಿ ಇವರ ಸಾಹಿತ್ಯ ಕೃತಿಗಳ ಕುರಿತು ಅಮೋಘವಾದ ಚಿಂತನೆ ನಡೆಯಬೇಕು ಅದನ್ನು ಕುರಿತು ಮಹತ್ವದ ಚಿಂತನೆ, ವಿಚಾರಧಾರೆ ನಡೆದುಬರಬೇಕು ಅದನ್ನು ಈ ವಿಶ್ವವಿದ್ಯಾನಿಲಯದಲ್ಲಿ ಮಾಡುವಂಥ ಉದ್ದೇಶವನ್ನು ಇಟ್ಟುಕೊಂಡಿದ್ದಾರೆ. ಅದೇ ರೀತಿಯಲ್ಲಿ ಕನ್ನಡ ಕುರಿತು ಚಿಂತನೆ ಮಾಡತಕ್ಕಂಥ ಹೊರನಾಡಿನ ಜನ ಹೊರಭಾಷೆಯ ಜನರಿಗೂ ಕೂಡ ಇಲ್ಲಿ ಅವಕಾಶವಿರಬೇಕು. ಕನ್ನಡದ ಸಂಸ್ಕೃತಿ ಸಂಗೀತ ರಂಗನಾಟಕಗಳು ಜಾನಪದ ಕಲೆ ವರ್ಣಚಿತ್ರ ಶಿಲ್ಪಶಾಸ್ತ್ರ ಹೀಗೆ ಕನ್ನಡ ಸಂಸ್ಕೃತಿಗೆ ಸಂಬಂಧಪಟ್ಟಂಥ ಯಾವುದೇ ವೈಶಿಷ್ಟಪೂರ್ಣ ವಿಚಾರಗಳಲ್ಲಿ ಹೆಚ್ಚಿನ ವಿಚಾರಗಳನ್ನು ಆಲೋಚನೆ ಮಾಡಲಿಕ್ಕೆ ಇದೆ. ನಮ್ಮಲ್ಲಿ ಕನ್ನಡದಲ್ಲಿ ಪ್ರಖ್ಯಾತರಾದವರು ಅನೇಕ ಮಂದಿ ಇದ್ದಾರೆ ಇತ್ತೀಚಿನ ದಿವಸಗಳಲ್ಲಿ ತೆಗೆದುಕೊಂಡರೆ ನಾಟಕ ರಂಗದಲ್ಲಿ ಹೊಸ ಆಯಾಮ ಕೊಟ್ಟಿರತಕ್ಕಂಥ ದೇಶದಲ್ಲಿ ಪ್ರಸಿದ್ಧರಾಗಿರತಕ್ಕಂಥ ಬಿ.ವಿ. ಕಾರಕಂತರು, ಗಿರೀಶ್ ಕಾರ್ನಾಡರು ಅವರ ಒಂದು ಪ್ರೌಢಿಮೆ ಇವತ್ತು ಈ ದೇಶದಲ್ಲಿ ಮೆಚ್ಚತಕ್ಕಂಥದಾಗಿದೆ. ಅದೇ ರೀತಿಯಲ್ಲಿ ಚಲನಚಿತ್ರ ರಂಗದಲ್ಲಿಯೂ ಸಹ ಕನ್ನಡಕ್ಕೆ ಒಂದು ಹೊಸ ಆಯಾಮ ನೀಡಲಿಕ್ಕೆ ಪ್ರಯತ್ನ ನಡೆದಿದೆ ಅನೇಕ ವರ್ಷಗಳಿಂದ ಚಲನಚಿತ್ರ ಕುರಿತು ವಿಶ್ಲೇಷ ಅಧ್ಯಯನ ಎನ್ನುವುದನ್ನು ಇದರಲ್ಲಿ ಸೇರಿಸಿಲ್ಲ ಅದನ್ನು ಸೇರಿಸಿದರೆ ಒಳಿತೆಂದು ಹೇಳಬಯಸುತ್ತೇನೆ. ಕನ್ನಡದಿಂದ ಕನ್ನಡಕ್ಕೆ ಬೇರೆ ಭಾಷೆಗಳಿಂದ ಎಷ್ಟೋ ಗ್ರಂಥಗಳು ಭಾಷಾಂತರವಾಗಿದೆ. ಕನ್ನಡದಿಂದ ಹೊರ ಭಾಷೆಗೆ ಆಗಿಲ್ಲ ಅದಕ್ಕೆ ವಿಶೇಷ ನೆರವನ್ನು ನೀಡಿ ಭಾಷಾಂತರ ಮಾಡಿ ಕನ್ನಡ ಸಾಹಿತ್ಯವನ್ನು ಹೊರಗಿನ ಜನರಿಗೆ ತಿಳಿಸುವ ಹಾಗೆ ನಾವು ಹೆಚ್ಚಿನ ಕೆಲಸವನ್ನು ಇಲ್ಲಿ ಮಾಡಬೇಕಾಗಿದೆ. ಅದೇ ರೀತಿಯಲ್ಲಿ ವೈದ್ಯಕೀಯ ಕಾನೂನು ಇಂಜಿನಿಯರಿಂಗ್ ಮುಂತಾದ ವಿಶಿಷ್ಟ ಪರಿಜ್ಞಾನಗಳಲ್ಲಿ ಕನ್ನಡ ನುಡಿಗಟ್ಟುಗಳನ್ನು ರಚಿಸುವಂಥ ಕೆಲಸ ಇವತ್ತು ಆಗಬೇಕಾಗಿದೆ. ಕರ್ನಾಟಕದಲ್ಲಿರುವ ಜಾನಪದ ಕಲೆ ಅದರಲ್ಲೂ ಮುಖ್ಯವಾಗಿ ದಕ್ಷಿಣ ಕನ್ನಡ ಉತ್ತರಕನ್ನಡ ಜಿಲ್ಲೆಗಳ ಯಕ್ಷಗಾನ ಕಲೆ ಕುರುತು ವಿಶೇಷವಾದ ಅಧ್ಯಯನವಾಗಬೇಕು. ಇದೆಲ್ಲಾ ಕಾರ್ಯಕ್ರಮಗಳನ್ನು ಹಾಕಿಕೊಂಡು ಇದು ಒಂದು ವಿಶಿಷ್ಟ ವಿಶ್ವವಿದ್ಯಾನಿಲಯವಾಗಲಿ. ನಮ್ಮ ರಾಜ್ಯಕ್ಕೆ ಒಂದು ಹೊಸ ಆಯಾಮ ನೀಡುವಂತದಾಗಲಿ. ಕರ್ನಾಟಕದ ಇದು ಬರೀ ಇನ್ನೊಂದು ವಿಶ್ವಾವಿದ್ಯಾಲಯ ಎನ್ನುವಂಥ ಪರಂಪರೆಯ ವಿಶಿಷ್ಟವಾದಂಥ ವಿಶ್ವವಿದ್ಯಾನಿಲಯವಾಗಲೆಂದು ಹಾರೈಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀಮತಿ ಮೋಟಮ್ಮ (ಮೂಡಿಗೆರೆ): ಸನ್ಮಾನ್ಯ ಸಭಾಧ್ಯಕ್ಷರೇ ಈ ದಿವಸ ನಮ್ಮ ವಿದ್ಯಾಸಚಿವರು ಕನ್ನಡ ವಿಶ್ವವಿದ್ಯಾನಿಲಯದ ಮಸೂದೆಯನ್ನು ಮಂಡಿಸಿದ್ದಾರೆ ಅದನ್ನು ಸ್ವಾಗತಿಸುತ್ತಾ ಕೆಲವಾರು ಮಾತುಗಳನ್ನು ಹೇಳಲಿಕ್ಕೆ ಇಷ್ಟಪಡುತ್ತೇನೆ. ಅದಕ್ಕೂ ಮೊದಲು ಯಾವುದೇ ಒಂದು ಮಸೂದೆಯನ್ನು ಇಲ್ಲಿ ಹೊರಡಿಸಿದಾಗ ಮಾನ್ಯ ವಿರೋದಪಕ್ಷದವರು ನಮ್ಮ ಸ್ನೇಹಿತರು ಅದನ್ನು ವಿರೋಧಿಸುವುದು ಬಹಳವಾಗಿ ಕಾಣೆಸುತ್ತಿತ್ತು ಆದರೆ ಇವತ್ತು ಎಲ್ಲರೂ ಮನಃಪೂರ್ತಿಯಾಗಿ ಇದನ್ನು ಸ್ವಾಗತಿಸಿದ್ದಾರೆ. ಅದರ ಜೊತೆಗೆ ನಾನು ಒಂದೆರಡು ಮಾತುಗಳನ್ನು ಹೇಳಿ ಏನು ಮಾನ್ಯ ಜೆ.ಎಸ್. ಆಚಾರ್‌ರವರು ಹೇಳಿದ್ದಾರೆ ಆ ಕೆಲವು ಮಾತುಗಳನ್ನು ಸಮರ್ಪಿಸುತ್ತೇನೆ. ಏತಕ್ಕೆಂದರೆ ಕನ್ನಡದಲ್ಲಿ ಬಹಳ ಒಳ್ಳೆಯ ಸಾಹಿತ್ಯವಿದೆ. ಅದನ್ನು ಬೇರೆ ಭಾಷೆಗೆ ತರ್ಜುಮೆ ಮಾಡುವುದಕ್ಕೆ ಹೆಚ್ಚಿನ ಪ್ರೋತ್ಸಾಹವನ್ನು ಕೊಡಬೇಕಾಗುತ್ತದೆ ಇಂಗ್ಲೀಷ್ ಸಾಹಿತ್ಯವನ್ನು ಕನ್ನಡಕ್ಕೆ ಭಾಷಾಂತರಿಸಲಿಕ್ಕೆ ಹೆಚ್ಚಿನ ಪ್ರೋತ್ಸಾಹ ಕೊಟ್ಟಿದ್ದಾರೆ. ಆದರೆ ನಮ್ಮ ಕನ್ನಡ ಸಾಹಿತ್ಯದಲ್ಲಿ ಏನಿದೆ ಎನ್ನುವುದು ಬೇರೆಯವರಿಗೆ ತಿಳಿಸಬೇಕಾಗಿದೆ. ನಮ್ಮ ಕನ್ನಡ ಸಾಹಿತ್ಯ ಪುಸ್ತಕಗಳು ಬೇರೆ ಭಾಷಾಂತರವಾಗಬೇಕು ಅಂಥದಕ್ಕೆ ಹೆಚ್ಚಿನ ಪ್ರೋತ್ಸಾಹ ಮತ್ತು ಅದಕ್ಕೆ ಹೆಚ್ಚಿನ ಹಣವನ್ನು ಇದರಲ್ಲಿ ಒದಗಿಸಬೇಕೆಂದು ನಾನು ಕೇಳಿಕೊಳ್ಳುತ್ತೇನೆ. ನಾನು ಕನ್ನಡ ಎಂ.ಎ. ವಿದ್ಯಾರ್ಥಿಯಾಗಿದ್ದೆ, ಎಂ.ಎ. ಪದವಿಗೆ ಸೇರಬೇಕಾದರೆ ಸಾಹಿತ್ಯವನ್ನು

ಕಲಿಯಬೇಕು, ಸಾಹಿತ್ಯವನ್ನು ಓದಿ ಅದರ ಒಂದು ಉದ್ಧಾರ ಮಾಡಬೇಕು ಎಂಬ ದೃಷ್ಟಿಯಿಂದ ಖಂಡಿತ ನಾನು ಸೇರಿದವಳಲ್ಲ ನಾನು ಬೇರೆ ಸಬ್ಜೆಕ್ಟ್‌ಗೆ ಅಪ್ಲೈ ಮಾಡಿದಾಗ ಸೀಟ್ ಅನೌನ್ಸ್ ಆಗುವುದು ಲೇಟಾಗಿ ಕಡೆಗೆ ಕನ್ನಡ ಎಂ.ಎ.ಗೆ ಸೀಟು ಸಿಕ್ಕಿತು. ಆಗ ಸೇರಿಕೊಂಡಾಗ ನನ್ನ ಮುಖ್ಯ ಉದ್ದೇಶ ಇದ್ದಿದ್ದು ಬೇರೆ ಒಂದು ಸಬ್ಜೆಕ್ಟ್‌ನಲ್ಲಿ ಎಂ.ಎ. ಮಾಡಿ ನಾನು ಕೆಲಸಕ್ಕೆ ಹೋಗಬೇಕು ಎಂದು ಆದರೆ ಕನ್ನಡ ಎಂ.ಎ.ಗೆ ಸೇರಿದಾಗ ಸಾಹಿತ್ಯದ ಹಿರಿಮೆ ಪ್ರೌಢಿಮೆಯನ್ನು ನಾನು ಅರ್ಥ ಮಾಡಿಕೊಂಡೆ ನಿಜವಾಗಿಯೂ ಕನ್ನಡ ಎಂ.ಎ. ಮಾಡುವುದು ಒಳ್ಳೆಯದು ಇದರಿಂದ ಸಾರ್ಥಕ ಪಡೆಯುವುದಕ್ಕಾಗುತ್ತದೆ ಎಂದು ಅಂದುಕೊಂಡೆ ನಾನು ಆಗ ಕರ್ನಾಟಕ ರಾಜ್ಯದಲ್ಲಿ ಕನ್ನಡ ಯೂನಿವರ್ಸಿಟಿ ಸ್ಥಾಪನೆ ಮಾಡುತ್ತಾರೆಂದು ಕನ್ನಡಕ್ಕೆ ಇಷ್ಟೊಂದು ಪ್ರೋತ್ಸಾಹ ಸ್ಥಾನಮಾನಗಳನ್ನು ನಮ್ಮ ಸರ್ಕಾರದವರು ಮಾಡಿಕೊಡುತ್ತಾರೆ ಎಂದು ಎಕ್ಸ್‌ಪೆಕ್ಟ್ ಮಾಡಿರಲಿಲ್ಲ ಕನ್ನಡ ಅಧ್ಯಯನ ಸಂಸ್ಥೆಯಲ್ಲಿ ಓದಿದ ಎಲ್ಲಾ ಹಳೆಯ ಮತ್ತು ಹೊಸ ವಿದ್ಯಾರ್ಥಿಗಳ ಪರವಾಗಿ ಈ ಸರ್ಕಾರವನ್ನು ನಾನು ಅಭಿನಂದಿಸುತ್ತೇನೆ. ಜೊತೆಗೆ ಹಳ್ಳಿಗಾಡಿನ ಜನರಿಗೆ ಕನ್ನಡ ಸಾಹಿತ್ಯದ ಮತ್ತು ಅದರಲ್ಲಿ ಅಡಕವಾಗಿರುವ ಕೆಲವೊಂದು ಸತ್ಯ ಸಂಗತಿಗಳು ಮುಖ್ಯ ವಿಷಯಗಳು ಅರ್ಥವಾಗುವ ಹಾಗೆ ತರ್ಜುಮೆ ಮಾಡಿ ಸರಳಭಾಷೆಯಲ್ಲಿ ಬರೆಯುವುದಕ್ಕೆ ಹೆಚ್ಚಿನ ಪ್ರೋತ್ಸಾಹ ಕೊಡಬೇಕಾಗುತ್ತದೆ. ಕನ್ನಡ ಅಧ್ಯಯನ ಸಂಸ್ಥೆ ಬೆಂಗಳೂರು ವಿಶ್ವವಿದ್ಯಾನಿಲಯ ಮತ್ತು ಮೈಸೂರು ವಿಶ್ವವಿದ್ಯಾನಿಲಯದಲ್ಲಿವೆ. ನನ್ನ ಕೆಲವು ಗುರುಗಳು ಇದರಲ್ಲಿ ಕೆಲಸ ಮಾಡುತ್ತಿದ್ದಾರೆ. ಆ ಒಂದು ವಿಭಾಗಕ್ಕೆ ನಾನು ಹೋದಾಗ ನೀವು ಕನ್ನಡ ಅಧ್ಯಯನ ಸಂಸ್ಥೆಗೆ ಅಥವಾ ಕನ್ನಡಕ್ಕೆ ಹೆಚ್ಚು ಕೆಲಸ ಮಾಡಬೇಕಾಗುತ್ತದೆ. ಎಂದು ನನ್ನ ಗುರುಗಳಾದ ಡಾ. ಜಿ.ಎಸ್. ಶಿವರುದ್ರಪ್ಪನವರು ಮತ್ತು ಡಾ. ಚಿದಾನಂದ ಮೂರ್ತಿಯವರು ಹೇಳಿದ್ದಾರೆ ಅವರು ಯಾವಾಗಲೂ ನನಗೆ ಒತ್ತಾಯ ಮಾಡುತ್ತಿದ್ದರು. ಆ ಕೆಲಸ ನನ್ನ ಕೈಯಲ್ಲಿ ಮಾಡಲಿಕ್ಕೆ ಆಗದಿದ್ದರೂ ಸಹ ನಮ್ಮ ಸರ್ಕಾರದವರು ಮಾಡುತ್ತಾ ಇರುವುದರಿಂದ ಇನ್ನೂ ಹೆಚ್ಚಿನ ಸಹಕಾರ ಅವರಿಗೆ ನೀಡಲಿ ಆ ಅಧ್ಯಯನ ಸಂಸ್ಥೆಗಳು ಹೆಚ್ಚು ಬೆಳೆಯಲ್ಲಿ ಅವರಿಗೆ ಪ್ರೋತ್ಸಾಹ ಸಿಗಲಿ ಎಂದು ನನ್ನ ಹಾರೈಕೆ ಮಾನ್ಯ ಸಿಂಧ್ಯ ಅವರು ಹೇಳಿದ ಹಾಗೆ ಕೆಲವೊಂದು ಕನ್ನಡದ ಗಾದೆಗಳು ನಿಘಂಟುಗಳು ಇವೆ. ಅದನ್ನು ನಾವು ಪ್ರಚಾರ ಮಾಡುವುದು ಉತ್ತಮ. ನಮ್ಮ ಭಾಷೆಯಲ್ಲಿ ಕೆಲವು ಕೊಟೇಷನ್‌ಗಳು ಹಾಕಿದ್ದಾರೆ. ನಾನು ಬಸ್ಸಿನಲ್ಲಿ ಮುಂದುಗಡೆ ಸೀಟಿನಲ್ಲಿ ಕುಳಿತಾಗ ಓದುತ್ತಾ ಇರುತ್ತೇನೆ ಹೆತ್ತು ಹೊತ್ತು ಸಾಕಿದ ತಾಯಿ ವಿದ್ಯೆ ಕಲಿಸಿದ ಗುರು ಮತ್ತು ಬುದ್ಧಿ ಕಲಿಸಿದ ತಂದೆ ದೇವರು ಕಾಣಣ್ಣ ಎಂದು ಒಂದು ಕಡೆ ಬೋರ್ಡ್ ಹಾಕಿದ್ದಾರೆ. ಹಾಗೇ ಹತ್ತು ಕಲ್ಲು ಪೂಜಿಸುವುದಕ್ಕಿಂತ ಹೆತ್ತ ತಾಯಿಯನ್ನು ಪೂಜಿಸು ಎಂದು ಹಾಕಿದ್ದಾರೆ ಅದನ್ನು ಓದುತ್ತಾ ಇದ್ದರೆ ನಮ್ಮ ಮನಸ್ಸಿಗೆ ಎಷ್ಟು ಆನಂದವಾಗುತ್ತದೆ ಇಂಥ ವರ್ಡಿಂಗ್ಸ್‌ನ್ನು ಅಥವಾ ಗಾದೆಗಳನ್ನು ಬಸ್ಸುಗಳಲ್ಲಿ ಮತ್ತು ಬಸ್ ಸ್ಟಾಂಡ್‌ನಲ್ಲಿ ಹಾಗೂ ಮುಖ್ಯವಾದ ಸ್ಥಳಗಳಲ್ಲಿ ಪ್ರಚಾರ ಮಾಡಿದರೆ ಒಳ್ಳೆಯದು ಎಂದು ನನಗನ್ನಿಸುತ್ತದೆ. ಅಂಥ ಸಲಹೆಯನ್ನು ಇಲ್ಲಿ ನಾನು ಕೊಡಲಿಕ್ಕೆ ಬಯಸುತ್ತಾ ಕನ್ನಡ ವಿಶ್ವವಿದ್ಯಾನಿಲಯ ಬೆಳೆದು ಇತರ ವಿಶ್ವವಿದ್ಯಾನಿಲಯಗಳಿಗೆ ಸಮಾನವಾಗಿ ನಿಲ್ಲದೆ ಇದಕ್ಕೆ ತನ್ನದೇ ಆದ ಒಂದು ಪರಂಪರೆ ಸಂಸ್ಕೃತಿ ಬೆಳೆದು ಉಳಿಯಲಿ ಎಂದು ಹಾರೈಸಿ ನನಗೆ ಈ ಸಂದರ್ಭದಲ್ಲಿ ಎರಡು ಮಾತುಗಳನ್ನು ಆಡುವುದಕ್ಕೆ. ಅವಕಾಶ ಮಾಡಿಕೊಟ್ಟು ಅಧ್ಯಕ್ಷಿಣಿಯವರಿಗೆ ವಂದಿಸಿ ನನ್ನ ಎರಡು ಮಾತುಗಳನ್ನು ಮುಗಿಸುತ್ತೇನೆ.

+ ಶ್ರೀ ಸಿ. ಬೈರೇಗೌಡ (ವೇಮಗಲ್) : ಮಾನ್ಯ ಉಪಾಧ್ಯಕ್ಷಿಣಿಯವರೆ ಬಹಳ ದಿನಗಳಿಂದ ಕನ್ನಡ ರಾಜ್ಯದಲ್ಲಿ ಕನ್ನಡ ವಿಶ್ವವಿದ್ಯಾನಿಲಯವನ್ನು ಮಾಡಬೇಕು ಎನ್ನತಕ್ಕ ಯೋಜನೆ ಏನಿತ್ತು ಅದು ಇಂದು ಕೈಗೂಡುತ್ತಿದೆ ಅದಕ್ಕೆ ನನ್ನ ಮೆಚ್ಚುಗೆಯನ್ನು

ಮತ್ತು ನನ್ನ ಬೆಂಬಲವನ್ನು ಸೂಚಿಸಿ ಒಂದೆರಡು ಸಲಹೆಗಳನ್ನು ಸರ್ಕಾರಕ್ಕೆ ಕೊಡುವುದಕ್ಕೆ ಇಷ್ಟಪಡುತ್ತೇನೆ. ಕನ್ನಡವನ್ನು ಅತಿ ಉನ್ನತ ಸ್ಥಾನಕ್ಕೆ ಏರಿಸತಕ್ಕ ಪ್ರಯತ್ನ ಇಂದು ನಡೆಯುತ್ತಿದೆ. ಅಂಥ ಸಂದರ್ಭದಲ್ಲಿ ಕರ್ನಾಟಕದ ರಾಜಧಾನಿಯಾದ ಬೆಂಗಳೂರಿನಲ್ಲಿ ಕನ್ನಡದ ಗತಿ ಏನಾಗುತ್ತಿದೆ ಕನ್ನಡ ಬೆಳವಣಿಗೆ ಎಷ್ಟರಮಟ್ಟಿಗೆ ಆಗುತ್ತಿದೆ ಎಂಬುದರ ಬಗ್ಗೆ ನಾವು ಗಮನಹರಿಸಬೇಕಾದುದು ಅತಿ ಅವಶ್ಯಕ. ಇಂದು ಬೆಂಗಳೂರಿನಲ್ಲಿ ನನ್ನ ಅಂದಾಜಿನ ಪ್ರಕಾರ ಭಾಷಾ ಅಲ್ಪಸಂಖ್ಯಾತರು ಯಾರಾದರೂ ಇದ್ದರೆ ಅದು ಕನ್ನಡದವರು ಎಂದು ಹೇಳಬೇಕಾಗುದ್ದದೆ. ಈಗ ಹೊಸದಾಗಿ ಬೆಂಗಳೂರು ನಗರ ಏನು ವಿಸ್ತರಣೆ ಆಗುತ್ತಿದೆ ಅಲ್ಲಿ ಅನೇಕ ಕಡೆ ಕನ್ನಡದ ಗಂಧವೆ ಇಲ್ಲ. ನಾವು ಬೆಂಗಳೂರಿನಲ್ಲಿದ್ದೇವೆಯೋ ಅಥವಾ ಬೇರೆ ರಾಜ್ಯದಲ್ಲಿರತಕ್ಕ ಒಂದು ನಗರದಲ್ಲಿದ್ದೇವೆಯೋ ಎಂಬ ಅನುಮಾನ ನನಗೆ ಬರುತ್ತಿದೆ. ಉದಾಹರಣೆಗೆ ಇಂದಿರಾ ನಗರದಲ್ಲಿರತಕ್ಕ ಪರಿಸ್ಥಿತಿಯನ್ನು ಹೇಳಿದರೆ ಸೂಕ್ತ ಅನ್ನಿಸುತ್ತದೆ ಅಲ್ಲಿ ಕನ್ನಡ ಮೈಕ್ರೋಸ್ಕೋಫಿಕ್ ಮೈನಾರಿಟಿ ಅಲ್ಲಿ ಕನ್ನಡವನ್ನು ಕಲಿಸತಕ್ಕ ಪ್ರಾಥಮಿಕ ಶಾಲೆಗಳು ಇಲ್ಲ. ನನಗೆ ಕನ್ನಡದ ಬಗ್ಗೆ ತುಂಬಾ ಅಭಿಮಾನ, ಪ್ರೀತಿ ಗ್ರಹಚಾರವಶಾತ್ ಕನ್ನಡ ಮಾಧ್ಯಮ ಶಾಲೆಗೆ ಮಕ್ಕಳನ್ನು ಕಳುಹಿಸಬೇಕೆಂದರೆ ಅಲ್ಲಿ ಕನ್ನಡದ ಶಾಲೆಗಳು ಇಲ್ಲ. ಆದರೂ ಕನ್ನಡ ಮಾಧ್ಯಮ ಶಾಲೆಗೆ ಕಳುಹಿಸತಕ್ಕ ಹಠ ಮಾಡಿ ಕನ್ನಡ ಶಾಲೆಗೆ ಮಕ್ಕಳನ್ನು ಕಳುಹಿಸುತ್ತಿದ್ದೇನೆ. ಇಂದಿರಾನಗರದಲ್ಲಿ ಕನ್ನಡದಲ್ಲಿ ಭೋದಿಸತಕ್ಕ ಪ್ರಾಥಮಿಕ ಶಾಲೆಗಳಾಗಲಿ ಅಥವಾ ಪ್ರೌಢಶಾಲೆಗಳಾಗಲಿ ಇಲ್ಲ. ಕನ್ನಡ ಶಾಲೆ ಬೇಕೆಂದರೆ ಪೂರ್ವದಿಂದ ಪಶ್ಚಿಮದವರೆಗೆ ಹೋಗಬೇಕಾಗಿದೆ ನಮ್ಮ ಮಕ್ಕಳು ಸದಾಶಿವನಗರದಲ್ಲಿ ಕನ್ನಡದ ಶಾಲೆಗೆ ಬಂದು ಕಲಿಯುತ್ತಿರುವುದರಿಂದ ಈ ಮಾತನ್ನು ನನ್ನ ಸ್ವಂತ ಅನುಭವದಿಂದ ಹೇಳುತ್ತಿದೇನೆ ವಿಧ್ಯಾಭ್ಯಾಸಕ್ಕೆ ಸಂಬಂಧಪಟ್ಟ ಹಾಗೆ ಬೆಂಗಳೂರು ನಗರದಲ್ಲಿ ಕನ್ನಡದ ಪರಿಸ್ಥಿತಿ ಈ ರೀತಿ ಆಗಿರುವಾಗ ದೊಡ್ಡ ಮಟ್ಟಕ್ಕೆ ಕನ್ನಡವನ್ನು ಏರಿಸತಕ್ಕ ಪ್ರಯತ್ನ ನಡೆಸುತ್ತಿದ್ದೇವೆ ಹೊಸದಾಗಿ ಇನ್ನೊಂದು ಏನಾಗುತ್ತಿದೆ ಎಂದರೆ ಅನೇಕ ಗ್ರಾಮಾಂತರ ಪ್ರದೇಶಗಳಲ್ಲಿ ಕೂಡ ಕನ್ನಡ ಮಾಧ್ಯಮದ ಪ್ರಾಥಮಿಕ ಶಾಲೆಗಳು ಪ್ರಾಥಮಿಕ ಹಂತಕ್ಕಿಂತ ಕೆಳಗಿನ ಶಾಲೆಗಳು ಎಲ್ಲಿ ನೋಡಿದರೆ ಅಲ್ಲಿ ಬರುತ್ತಿವೆ. ಇಂಗ್ಲೀಷ್ ಮಾಧ್ಯಮ ಶಾಲೆಗಳಿಗೆ ಪರವಾನಗಿ ಸಿಕ್ಕಿದರೆ ಅದು ಏನೋ ಒಂದು ದೊಡ್ಡ ಸಾಧನೆ ಆದ ಹಾಗೆ. ನಗರ ಪ್ರದೇಶಗಳಲ್ಲಿ ಅದಕ್ಕೆ ಅಂಥ ಒಂದು ಒತ್ತಡ ಗ್ರಾಮಾಂತರ ಪ್ರದೇಶಗಳಲ್ಲೂ ಇವತ್ತು ಅಂಥ ಒಂದು ಒತ್ತಡ ಬರುತ್ತಿದೆ. ಇದನ್ನು ಸರಿ ಮಾಡದೆ ಕನ್ನಡ ವಿಶ್ವವಿದ್ಯಾನಿಲಯ ಮಾಡುತ್ತೇವೆಂದು ಹೇಳತಕ್ಕವರು ನಾವು. ಕನ್ನಡಕ್ಕೆ ಉದ್ದಾಮವಾದ ಸ್ಥಾನವನ್ನು ದೊರಕಿಸಿಕೊಡಬೇಕೆಂದು ಹೇಳುತ್ತಿರುವವರು ನಾವು. ಕನ್ನಡದ ಪ್ರಥಮ ಹೆಜ್ಜೆಯಲ್ಲಿ ಪ್ರಥಮ ಮೆಟ್ಟಲಲ್ಲಿ ಏನಾಗುತ್ತಿದೆ ಎಂದು ಗಮನ ಹರಿಸಬೇಕಾದುದು ಸೂಕ್ತ. ಇಲ್ಲಿ ನನ್ನ ಒಂದು ಅನುಭವದ ಮಾತನ್ನು ಹೇಳುವುದಕ್ಕೆ ಇಷ್ಟಪಡುತ್ತೇನೆ. ಎರಡು ಮೂರು ವರ್ಷಗಳ ಹಿಂದೆ ದಕ್ಷಿಣ ದೇಶಕ್ಕೆ ಹೋಗಿದ್ದೆ. ಅಲ್ಲಿ ಆಕಸ್ಮಿಕವಾಗಿ ಒಬ್ಬರು ಬಿ.ಇ. ಪದವೀಧರರು ಸಿಕ್ಕಿದರು. ದಾರಿತಪ್ಪಿ ತಡಕಾಡುತ್ತಿರುವ ಸಂದರ್ಭದಲ್ಲಿ ಅವರು ಸಿಕ್ಕಿದರು. ಅವರಿಗೆ ಇಂಗ್ಲೀಷ್ ಬರುತ್ತಿರಲಿಲ್ಲ ನಾವು ಇಂಗ್ಲೀಷಿನಲ್ಲಿ ಹೇಳಿದ್ದನ್ನು ಸ್ವಲ್ಪಮಟ್ಟಿಗೆ ಅರ್ಥ ಮಾಡಿಕೊಳ್ಳುತ್ತಿದ್ದರು ಆಗ ನಾವು ಕೇಳಿದೆವು ನೀವು ಏನು ಓದಿದ್ದೀರಿ ಎಂದು ಬಿ.ಇ.(ಎಲೆಕ್ಟ್ರಾನಿಕ್ಸ್) ಎಂದರು. ಎಲ್ಲಿ ವ್ಯಾಸಂಗ ಮಾಡಿದಿರಿ ಎಂಬುದಕ್ಕೆ ಅವರು ಕೊರಿಯಾ, ಜಪಾನ್ ದೇಶಗಳಲ್ಲಿ ಅಧ್ಯಯನ ಮಾಡಿದ್ದೇನೆಂದರು.

(ಶ್ರೀಮತಿ ಮೋಟಮ್ಮನವರು ಪೀಠವನ್ನಲಂಕರಿಸಿದರು)

ಅವರಿಗೆ ಇಂಗ್ಲಿಷ್ ಒಂದು ಅಕ್ಷರ ಬರುತ್ತಿರಲಿಲ್ಲ ಯಾವ ರೀತಿ ಕಲಿಯುತ್ತೀರೆಂದು ಕೇಳಿದಕ್ಕೆ ಅವರು ನಮ್ಮ ಭಾಷೆಯಲ್ಲೇ ಎಲ್ಲವನ್ನು ಕಲಿಯುತ್ತೇವೆ ಎನ್ನುವ ಮಾತನ್ನು

ಹೇಳಿದರು. ಅದೇ ರೀತಿ ಅದಕ್ಕಿಂತ ಹತ್ತು ವರ್ಷಗಳ ಹಿಂದೆ ಜಪಾನ್ ದೇಶಕ್ಕೆ ಹೋಗತಕ್ಕ ಅವಕಾಶ ಒದಗಿಬಂದಿತು. ಅಲ್ಲಿ ಇನ್ನೂ ಅದ್ವಾನ ಎಂಥವರಿಗೂ ಇಂಗ್ಲೀಷ್ ಜ್ಞಾನ ಇಲ್ಲ ಇಂಗ್ಲೀಷ್ ಬರುವುದೂ ಇಲ್ಲ ಆದರೆ ತಂತ್ರ ಜ್ಞಾನದಲ್ಲಿ ಜಪಾನ್ ನಾಗಲೋಟದಲ್ಲಿ ಮುಂದೆ ಹೋಗುತ್ತಿದೆ. ಅಂತಹ ದೇಶದಲ್ಲೂ ಕೂಡಾ ಇಂಗ್ಲೀಷ್ ಗಂಧ ಇರಲಿಲ್ಲ ಅವರು ಪ್ರತಿಯೊಂದು ಪದಕ್ಕೂ ತಮ್ಮ ದೇಶಭಾಷೆಯಲ್ಲಿ ಪದ ಭಂಡಾರವನ್ನು ಇಟ್ಟುಕೊಂಡಿದ್ದಾರೆ. ಅವರು ಜಪಾನ್ ಭಾಷೆಯಲ್ಲೇ ಎಲ್ಲವನ್ನು ಬರೆಯತಕ್ಕದ್ದನ್ನು ಎಲ್ಲವನ್ನೂ ಅಭ್ಯಾಸ ಮಾಡತಕ್ಕದ್ದನ್ನು ತಮ್ಮ ದಿನನಿತ್ಯದ ಜೀವನದಲ್ಲಿ ಅಳವಡಿಸಿಕೊಂಡಿದ್ದಾರೆ. ಪ್ರಿಂಟೆಡ್ ಸರ್ಕೂಟ್ಸ್ ಎಂದು ಏನು ಹೇಳುತ್ತೇವೋ ಅದಕ್ಕೂ ಅವರ ಭಾಷೆಯಲ್ಲಿ ಜಪಾನ್ ಭಾಷೆಯಲ್ಲಿ ಅಳವಡಿಸಿಕೊಂಡಿರುವುದರಿಂದ ನಾನು ಕಣ್ಣಾರೆ ಕಂಡುಬಂದಿದ್ದೇನೆ ಅಂತಹ ಸ್ಥಿತಿಗೆ ನಮ್ಮ ಕನ್ನಡ ಭಾಷೆಯನ್ನು ತೆಗೆದುಕೊಂಡು ಹೋಗತಕ್ಕದ್ದು ಉನ್ನತ ಮಟ್ಟಕ್ಕೆ ಬೆಳೆಸತಕ್ಕದ್ದು ನಮ್ಮೆಲ್ಲರ ಕರ್ತವ್ಯಕೂಡ ಹೌದು. ಅದಕ್ಕೆ ಹೋಲಿಸಿದಾಗ ನಾನು ಆಗಲೇ ಹೇಳಿದಹಾಗೆ ಪ್ರಥಮ ಹಂತದಲ್ಲೇ ಎಂದರೆ ಮೊದಲ ಹೆಜ್ಜೆಯಲ್ಲೇ ಕನ್ನಡ ನಿರ್ಮಾಣ ಮಾಡತಕ್ಕದ್ದರ ಬಗ್ಗೆ ಕನ್ನಡವನ್ನು ಬಳಸದೇ ಇರುವ ಬಗ್ಗೆ ಕೆಲಸಗಳನ್ನು ಸಾರೋದ್ಧಾರವಾಗಿ ನಡೆಯುತಿವೆ. ಇವತ್ತು ಈ ವಿಶ್ವವಿದ್ಯಾನಿಲಯದ ಬಗ್ಗೆ ಸರ್ಕಾರಕ್ಕೆ ಸೂಚನೆ ಕೊಡತಕ್ಕದ್ದು ಏನೆಂದರೆ ನಮ್ಮ ಯಾರದ್ದೂ ವಿರೋಧ ಇಲ್ಲ, ಅದು ಆಗಬೇಕು ಇದಕ್ಕೆ ಮೊದಲನೆ ಹೆಜ್ಜೆಯಾಗಿ ಕನ್ನಡವನ್ನು ಯಶ್ವಸ್ವಿಯಾಗಿ ಬೆಳೆಸಬೇಕು. ಅದನ್ನು ಬೋಧನೆ ಮಾಡತಕ್ಕ ಅವಶ್ಯಕತೆಗಳು ಅಥವಾ ಬೋಧನೆ ಮಾಡುವುದಕ್ಕೆ ಬೇಕಾಗಿರತಕ್ಕ ವಾತಾವರಣವನ್ನು ಸೃಷ್ಟಿ ಮಾಡತಕ್ಕದ್ದು ಬಹಳ ಅವಶ್ಯಕ ಇದೆ. ಇವತ್ತು ಇನ್ನೊಂದು ಮಾತನ್ನು ಸರ್ಕಾರದ ಗಮನಕ್ಕೆ ತರುತ್ತೇನೆ. ಇವತ್ತು ರಾಜ್ಯದಲ್ಲಿ ಅನೇಕ ಉರ್ದು ಶಾಲೆಗಳು ಇವೆ. ಕನ್ನಡ ಕಡ್ಡಾಯವಾಗಿ ಕಲಿಯಬೇಕೆಂದು ನಮ್ಮ ನೀತಿ. ಆದರೆ ಇವತ್ತು ಎಷ್ಟು ಉರ್ದು ಶಾಲೆಗಳಲ್ಲಿ ಕನ್ನಡ ಬೋಧಿಸತಕ್ಕ ಉಪಾಧ್ಯಾಯರು ಇದ್ದಾರೇ? ಅನೇಕ ಉರ್ದು ಶಾಲೆಗಳಲ್ಲಿ ಕನ್ನಡ ಬೋಧಿಸತಕ್ಕ ಉಪಾಧ್ಯಾಯರಿಲ್ಲ ಮಂತ್ರಿಗಳಾದ ಅಜೀಜ್ ಸೇಟ್‌ರವರು ಪ್ರತಿಸಾರಿ ಕನ್ನಡಕ್ಕೆ ವಿರೋಧಿಯಲ್ಲ ಎಂದು ಹೇಳುತ್ತಿದ್ದಾರೆ. ಅವರು ಮಂತ್ರಿಯಾಗಿ ಕನ್ನಡ ಬೋಧನೆ ಮಾಡತಕ್ಕದ್ದಕ್ಕೆ ಒತ್ತಾಯ ಮಾಡಿದ್ದು ಇದೇ ಸದನದಲ್ಲಿನ ಕಡತದಲ್ಲಿ ಇರುವುದು ನಮಗೆಲ್ಲಾ ಗೊತ್ತಿರತಕ್ಕದ್ದೇ. ಉರ್ದು ಶಾಲೆಗಳಲ್ಲಿ ಮತ್ತು ಕನ್ನಡ ಮಾತೃಭಾಷೆ ಅಲ್ಲದೇ ಇರುವವರು ನಡೆಸತಕ್ಕ ಶಾಲೆಗಳಲ್ಲಿ ಕನ್ನಡವನ್ನು ಕಲಿಸತಕ್ಕದ್ದು ಮತ್ತು ಕನ್ನಡ ಉಪಾಧ್ಯಾಯರನ್ನು ನೇಮಕ ಮಾಡುವುದಕ್ಕೆ ಅತ್ಯಂತ ಮಹತ್ವವನ್ನು ಆದ್ಯತೆಯನ್ನು ಇವತ್ತು ಕೊಡಬೇಕಾಗಿರತಕ್ಕ ಅವಶ್ಯಕತೆ ಇದೆ ಎಂದು ನಾನು ಸೂಚನೆ ಕೊಡುತ್ತೇನೆ. ಇದು ಪ್ರಥಮ ಕೆಲಸ ಎನ್ನತಕ್ಕ ಮಾತನ್ನು ಈ ಸಂಧರ್ಭದಲ್ಲಿ ನಾನು ಹೇಳಬಯಸುತ್ತೇನೆ. ಇವತ್ತು ಪ್ರತಿಯೊಬ್ಬ ತಂದೆತಾಯಿಯರಿಗೆ ಇರತಕ್ಕ ಆಸೆ ಏನು? ತಮ್ಮ ಮಕ್ಕಳನ್ನು ಡಾಕ್ಟರ್ ಮಾಡಬೇಕು ಡಾಕ್ಟರ್ ಆಗಲಿಲ್ಲ ವೆಂದರೆ ಎಂಜಿನಿಯರ್ ಆಗಬೇಕೆಂದು ಆಸೆಪಡುತ್ತೇವೆ. ಎಂಜಿನಿಯರ್ ಎಂದರೆ ಯಾವುದರಲ್ಲಿ ಆಗಬೇಕು? ಕಂಪ್ಯೂಟರ್ ಸೈನ್ಸ್ ಅಥವಾ ಎಲೆಕ್ಟ್ರಾನಿಕ್ಸ್ ಈ ರೀತಿಯಾದ ಆಸೆ ಆಕಾಂಕ್ಷೆಗಳನ್ನು ಇಟ್ಟುಕೊಂಡು ನಾವು ಹೋಗುತ್ತಿದ್ದೇವೆ. ಅವೆಲ್ಲವೂ ಕೂಡ ಇವತ್ತು ಇಂಗ್ಲೀಷ್‌ನಲ್ಲಿ ಇದೆ. ಇವತ್ತು ನಮ್ಮ ಮಕ್ಕಳಿಗೆ ಯುವಕರಿಗೆ ಹೆಚ್ಚಿನ ತಾಂತ್ರಿಕ ವಿದ್ಯಾಭ್ಯಾಸ ಒದಗಿಸುವಾಗ ಹೊಸಹೊಸದಾಗಿ ಬಂದಿರತಕ್ಕ ವೈಜ್ಞಾನಿಕ ಅಂಗಗಳು ಏನಿವೆ ಹೊಸದಾಗಿ ಅವಿಷ್ಕಾರಗಳು ತಾಂತ್ರಿಕತೆಯಲ್ಲಿ ಏನೆಲ್ಲ ಆಗಿದೆ ಅವನ್ನೆಲ್ಲಾ ನಮ್ಮ ವಿದ್ಯಾರ್ಥಿಗಳಿಗೆ ಕನ್ನಡದಲ್ಲಿ ಒದಗಿಸುವ ಪ್ರಯತ್ನ ಆಗಬೇಕು ಇದೆಲ್ಲಾ ಇವತ್ತು ಎಲ್ಲಿದೆ? ಕನ್ನಡ ವಿಶ್ವವಿದ್ಯಾನಿಲಯವನ್ನು ನಾವು ಮಾಡುತ್ತೇವೆ. ಇವತ್ತು ನಾವು ಪ್ರತಿಯೊಂದನ್ನೂ ಕೂಡಾ ಯಾವುದರಲ್ಲಿ ಲೆಕ್ಕ ಹಾಕುತ್ತೇವೆ? ಆದಾಯದ ಜೊತೆ ನಾವು ಲೆಕ್ಕ ಹಾಕುತ್ತೇವೆ. ಇವತ್ತು ನಮ್ಮ ಮಕ್ಕಳನ್ನು ಏತಕ್ಕೆ

ಡಾಕ್ಟರ್ ಮಾಡುತ್ತೇವೆ? ಅವರಿಗೆ ತಕ್ಷಣ ನೌಕರಿ ಸಿಗುತ್ತದೆ ಕೈ ತುಂಬಾ ಸಂಪಾದನೆ ಮಾಡಬಹುದು ಎಂದು. ಇಂಜಿನಿಯರಿಂಗ್ ಮಾಡಬೇಕೆಂದು ಏಕೆ ಹೇಳುತ್ತೇವೆಂದರೆ ಇದೇ ಕಾರಣಕ್ಕೋಸ್ಕರವೇ ತಕ್ಷಣದಿಂದ ತನ್ನ ಮಗ ಆದಾಯ ತರುತ್ತಾನೆ. ಕೈ ತುಂಬಾ ಜೇಬು ತುಂಬಾ ಹಣ ಮಾಡಬಹುದೆಂಬ ಉದ್ದೇಶದಿಂದ ಮಾಡುತ್ತಿದ್ದೇವೆ. ಅದನ್ನು ಕಾರ್ಯಗತ ಮಾಡಬೇಕಾಗಿದ್ದರೆ ಕನ್ನಡಕ್ಕೆ ಹೆಚ್ಚಿನ ಪ್ರಾಶಸ್ತ್ಯ ಸಿಗಬೇಕಾಗಿದ್ದರೆ ಈ ದೃಷ್ಟಿಯಿಂದ ನಾವು ಹೆಚ್ಚಿನ ಗಮನ ಹರಿಸಬೇಕಾದದ್ದು ಅವಶ್ಯಕವಾಗಿದೆ. ನಮ್ಮ ಯುವಕರಿಗೆ ಕನ್ನಡ ಓದುವುದಕ್ಕೆ ಅವಕಾಶವನ್ನು ಕಲ್ಪಿಸತಕ್ಕಂಥಾದ್ದು ಕೂಡ ಅತೀ ಅವಶ್ಯಕವಾಗಿದೆ. ಈ ಎಲ್ಲಾ ಕೆಲಸಗಳನ್ನು ಈ ವಿಶ್ವವಿದ್ಯಾನಿಲಯ ಮಾಡುವುದಕ್ಕೆ ಮುಂದಾಳತ್ವವನ್ನು ವಹಿಸಬೇಕು. ಈ ಜ್ಞಾನದ ಭಂಡಾರದ ಬಾಗಿಲನ್ನು ತೆಗೆಯತಕ್ಕಂತಹ ಒಂದು ಸರ್ವ ಪ್ರಯತ್ನ ಈ ವಿಶ್ವವಿದ್ಯಾನಿಲಯದ ಮೂಲಕ ಆಗಬೇಕು. ಈ ವಿಶ್ವವಿದ್ಯಾನಿಲಯ ಪ್ರಪಂಚದಲ್ಲಿ ಅತ್ಯುನ್ನತ ಜ್ಞಾನದ ಬೆಳಕನ್ನು ಪಸರಿಸತಕ್ಕಂತಹ ಉನ್ನತ ಕೆಲಸವನ್ನು ಮಾಡಲಿ. ಕನ್ನಡ ವಿಶ್ವವಿದ್ಯಾನಿಲಯ ಅಂದರೆ ಪ್ರಪಂಚದಲ್ಲಿ ಅತ್ಯಂತ ಉತ್ತಮವಾದ ವಿಶ್ವವಿದ್ಯಾನಿಲಯವಾಗಲಿ ಎಂದು ಹರಸಿ ಇಷ್ಟನ್ನು ಹೇಳುವುದಕ್ಕೆ ಅವಕಾಶ ಮಾಡಿಕೊಟ್ಟಿದ್ದಕ್ಕಾಗಿ ತಮಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಡಾ. ಎ.ಬಿ. ಮಲಕ ರೆಡ್ಡಿ: ಈಗಾಗಲೇ ಸಾಕಷ್ಟು ಜನ ಮಾನ್ಯ ಸದಸ್ಯರು ಹಂಪೆಯಲ್ಲಿ ಕನ್ನಡ ವಿಶ್ವವಿದ್ಯಾನಿಲಯವನ್ನು ಸ್ಥಾಪಿಸುವ ಈ ವಿಧೇಯಕವನ್ನು ಸ್ವಾಗತ ಮಾಡಿದ್ದಾರೆ. ನಾನೂ ಕೂಡ ಇದನ್ನು ಸ್ವಾಗತ ಮಾಡುತ್ತಾ ನನ್ನದೇ ಆದಂತಹ ಕೆಲವು ಅಭಿಪ್ರಾಯಗಳನ್ನು ಇಲ್ಲಿ ವ್ಯಕ್ತ ಮಾಡಲಿಚ್ಛಿಸುತ್ತೇನೆ. ಕನ್ನಡ ವಿಶ್ವವಿದ್ಯಾನಿಲಯ ಎಂಬ ಶಬ್ಧವೇ ಅಸಂಗತ ಮತ್ತು ಅಸಂಬದ್ಧ ಇದೆಯೋ ಏನೋ ಎಂದು ಅನಿಸುತ್ತದೆ. ಕನ್ನಡ ವಿಶ್ವವಿದ್ಯಾನಿಲಯವೆಂಬ ಶಬ್ದವನ್ನು ಏನು ಬಳಸಿದ್ದಾರೆ ಏದು ಏಕೋ ನನಗೆ ಅಷ್ಟು ಸೂಕ್ತವೆಂದು ಕಾಣಿಸುತ್ತಿಲ್ಲ. ವಿಶ್ವವಿದ್ಯಾನಿಲಯವೆಂಬ ಶಬ್ದಕ್ಕೆ ಎಷ್ಟು ಮೋಹ ಹುಟ್ಟಿದೆ ಎಂಬ ಬಗ್ಗೆ ನಾವು ವಿಚಾರ ಮಾಡಬೇಕಾಗುತ್ತದೆ. ಯಾವುದೇ ಒಂದು ಸಂಸ್ಥೆಯನ್ನು ಸ್ಥಾಪನೆ ಮಾಡಿದಾಗ ತಕ್ಷಣ ವಿಶ್ವವಿದ್ಯಾನಿಲಯ ಎಂಬ ಶಬ್ದವನ್ನು ಹಿಡಿದುಕೊಂಡು ಅದನ್ನು ಅಪ್ಪೈ ಮಾಡುವುದಕ್ಕೆ ಪ್ರಯತ್ನ ಮಾಡುತ್ತೇವೆ. ಅದೇ ತಪ್ಪನ್ನು ಇಲ್ಲೂ ಕೂಡ ಮಾಡುತ್ತಿದ್ದೇವೆಂದು ಭಾಸವಾಗುತ್ತಿದೆ. ಭಾಷೆ ಶಾಸ್ತ್ರದ ಮೇಲೆ ಸ್ಥಾಪನೆಯಾಗತಕ್ಕಂತಹ ಒಂದು ಸಂಸ್ಥೆ ಇದಾಗಿದೆ. ಉನ್ನತವಾದ ಈ ಶಾಸನ ಸಭೆಯಿಂದ ಮಂಜೂರಾತಿ ಪಡೆದ ಸಂಸ್ಥೆ ಇದಾದ ಮೇಲೆ ಪ್ರತಿಯೊಂದು ಶಬ್ಧದ ಬಗ್ಗೆ ಕೂಡ ಎಚ್ಚರಿಕೆ ವಹಿಸಬೇಕಾದದ್ದು ಬಹಳ ಅವಶ್ಯಕ. ವಿಶ್ವವಿದ್ಯಾನಿಲಯ ಎಂದರೆ ಅರ್ಥ ಏನು ವಿಶ್ವದಲ್ಲಿ ಇರತಕ್ಕಂತಹ ಎಲ್ಲಾ ವಿದ್ಯೆಗಳನ್ನು ವಿಶ್ವದಾದ್ಯಂತ ವಿದ್ಯಾರ್ಜನೆಗಾಗಿ ಅನುಕೂಲ ಮಾಡಿಕೊಡತಕ್ಕಂತಹ ಅವಕಾಶಗಳನ್ನು ಒದಗಿಸಿಕೊಡತಕ್ಕಂತಹ ಒಂದು ಸಂಸ್ಥೆಯಾಗಿರಬೇಕು. ಅದು ವಿಶ್ವವಿದ್ಯಾನಿಲಯ ಅದು ನಾನು ತಿಳಿದುಕೊಂಡಿರತಕ್ಕಂಥಾದ್ದು ಹಾಗೂ ನಮ್ಮ ಗುರುಗಳು ಕೊಟ್ಟಿರತಕ್ಕಂಥದ್ದು ಈ ಶಬ್ದವನ್ನು ಕನ್ನಡ ವಿಶ್ವವಿದ್ಯಾನಿಲಯಕ್ಕೆ ಅಪ್ಪೈ ಮಾಡಲಾಗಿದೆ.

ಶ್ರೀ ಎಂ. ವೀರಪ್ಪ ಮೊಯಿಲಿ : ಕನ್ನಡ ಭಾಷೆ, ಕನ್ನಡ ಸಾಹಿತ್ಯ. ಕನ್ನಡ ಸಂಸ್ಕೃತಿ ಅದು ವಿಶ್ವದ ವಿದ್ಯೆ ಅಲ್ಲವೇ? ತಾವು ಇನ್ನೂ ಸ್ವಲ್ಪ ವ್ಯಾಖ್ಯಾನ ಮಾಡಿದರೆ ಒಳ್ಳೆಯದು.

ಶ್ರೀ ವಾಟಾಳ್ ನಾಗರಾಜ್ : ಡಾಕ್ಟರವರೇ, ಸ್ವಲ್ಪ ಅರ್ಥವಾಗುವ ಹಾಗೆ ಹೇಳಿ.

ಶ್ರೀ ಎಂ. ವೀರಪ್ಪ ಮೊಯಿಲಿ : ಇಂಗ್ಲೀಷ್ ಗುಲಾಮರಾಗಿ ಅದನ್ನು ಕಲಿತಿದ್ದೇವೆ. ಕನ್ನಡ ಭಾಷೆ ಅದು ನಮ್ಮ ಭಾಷೆ.

ಡಾ. ಎ.ಬಿ. ಮಲಕರೆಡ್ಡಿ : ನನಗೆ ಅನುಮಾನವಾದದ್ದು ಅದು ಅಲ್ಲ, ನನಗೆ ತಿಳಿದದ್ದು ಏನು ಅಂದರೆ ಭಾಷೆಗಳು, ವಿಚಾರಗಳು, ವಿಷಯಗಳು ಯಾವುದೇ ಆಗಿರಬಹುದು. ಈ ಎಲ್ಲಾ ಸಮಗ್ರ ವಿಷಯಗಳನ್ನು ವಿಚಾರಗಳನ್ನು ವಿದ್ಯೆಗಳನ್ನು ಒದಗಿಸಿ ಕೊಡುತ್ತಿದ್ದರೆ ಕನ್ನಡ ಭಾಷೆಯಲ್ಲಿ ಕನ್ನಡ ವಿಶ್ವವಿದ್ಯಾನಿಲಯ ಆಗಬಹುದು. ಆದರೆ ಇದರ ಉದ್ದೇಶವೇನಿದೆ ಎಂದರೆ ಕೇವಲ ಕನ್ನಡ ಭಾಷೆಯನ್ನಷ್ಟೇ ಬಳಸಬೇಕೆಂದು ತಿಳಿದುಕೊಂಡು ಅದಕ್ಕೆ ಉಲ್ಲೇಖಿಸಿ....

ಶ್ರೀ ಎಂ. ವೀರಪ್ಪ ಮೊಯಿಲಿ : ಕನ್ನಡ ಅಂದರೆ ಅದು ಬರೀ ಕೇವಲ ಆಗುವುದಿಲ್ಲ. ಕನ್ನಡ ವಿಶ್ವದ ಭಾಷೆ. ಅದು ನಮ್ಮ ಮತ್ತು ನಿಮ್ಮ ಭಾಷೆ ಎಂದು ತಿಳಿದುಕೊಳ್ಳಬೇಡಿ. ಈ ಸಂಸ್ಕೃತಿಗೆ ಸೀಮೆ ಇಲ್ಲ. ಎಷ್ಟು ದೊಡ್ಡದಾಗಿ ಬೆಳೆದಿದೆ ಎಂದರೆ ನಾವು ದೂರದ ಬೆಟ್ಟ ನುಣ್ಣಗೆ ಎಂದು ಮಾಡಿದ್ದೇವೆ ಅಷ್ಟೆ. ಇದನ್ನು ನಾವು ಗುರುತಿಸಿಲ್ಲ. ಗುರುತಿಸಬೇಕೆಂದು ಇದನ್ನು ಮಾಡಿದ್ದುದು.

ಡಾ. ಎ.ಬಿ. ಮಲಕರೆಡ್ಡಿ : ಗುರುತಿಸುವ ಕೆಲಸ ನಡೆಯಲಿ. ಉತ್ತಮ ಉದ್ದೇಶ ಏನಿದೆ ಅಬ್ಜೆಕ್ಷನ್ ಏನಿದೆ ಅದನ್ನು ಮೆನ್ಷನ್ ಮಾಡಿದ್ದಾರೆ, ನಮೂದಿಸಿದ್ದಾರೆ. ಈ ಎಲ್ಲಾ ವಿಷಯಗಳನ್ನು ಈಗಿರುವ ಐದು ವಿಶ್ವವಿದ್ಯಾನಿಲಯಗಳಲ್ಲಿ ವಿಶ್ವವಿದ್ಯಾನಿಲಯಗಳು ಏನಿವೆ ಅಲ್ಲಿ ಇವು ಆಗುತ್ತಿಲ್ಲವೇನು? ಅಲ್ಲೂ ಕೂಡ ರೀಸರ್ಚ್ ನಡೆಯುತ್ತಿದೆ. ಕರ್ನಾಟಕ ವಿಶ್ವವಿದ್ಯಾನಿಲಯಕ್ಕೆ ಹೋದರೆ ಅಲ್ಲಿ ಕನ್ನಡ ಡಿಪಾರ್ಟ್‌ಮೆಂಟ್ ಇದೆ. ಅದು ಒಂದು ಸ್ವತಂತ್ರವಾದ ವಿಶ್ವವಿದ್ಯಾನಿಲಯವೆನ್ನುವ ರೂಪದಲ್ಲಿ ಅದು ಬೆಳೆದಿದೆ. ಅದೇ ರೀತಿಯಲ್ಲಿ ಮೈಸೂರಿಗೆ ಹೋದರೆ ಕನ್ನಡ ಭಾಷೆಯನ್ನು ಕಲಿಸತಕ್ಕ ಡಿಪಾರ್ಟ್‌ಮೆಂಟ್ ಇದೆ. ಅದು ಒಂದು ಸ್ವತಂತ್ರ ವಿಶ್ವವಿದ್ಯಾನಿಲಯದ ಪ್ರಮಾಣದಲ್ಲಿ ಬೆಳೆದು ನಿಂತಿದೆ. ತಾವೇನು ಅಬ್ಜೆಕ್ಷನ್ ನಮೂದು ಮಾಡಿದ್ದೀರಿ ಎಲ್ಲಾ ವಿಷಯಗಳ ಮೇಲೂ ಅಲ್ಲಿ ಸಂಶೋಧನೆ ನಡೆಯುತ್ತಿದೆ. ನಾನು ಏತಕ್ಕೆ ಹೇಳುತ್ತಿದ್ದೇನೆಂದರೆ ಭಾವನಾತ್ಮಕ ದೃಷ್ಟಿಯಿಂದ ನಮ್ಮದೇ ಆದ ಒಂದು ಕನ್ನಡ ವಿಶ್ವವಿದ್ಯಾನಿಲಯ ಬೇಕು, ಅದು ಜಗತ್ಪ್ರಸಿದ್ಧವಾದ ಇತಿಹಾಸವುಳ್ಳ ಹಂಪೆಯಲ್ಲಿ ಅಂತಹ ಸ್ಥಳದಲ್ಲಿ ಕನ್ನಡ ವಿಶ್ವವಿದ್ಯಾನಿಲಯವನ್ನು ಸ್ಥಾಪನೆ ಮಾಡುತ್ತೇವೆನ್ನುವ ಕಾರಣವೇ ವಿನಹ ಇರುವ ವಿಶ್ವವಿದ್ಯಾನಿಲಯಗಳಲ್ಲಿ ಏನು ಕೆಲಸ ನಡೆಯುತ್ತಿದೆ ಅದನ್ನೆ ತಾವು ಅಲ್ಲಿ ಮಾಡುತ್ತೀರಿ.

ಶ್ರೀ ವಾಟಾಳ್ ನಾಗರಾಜ್ : ಈಗಿರುವ ವಿಶ್ವವಿದ್ಯಾನಿಲಯಗಳಲ್ಲಿ ಕನ್ನಡದ ಒಂದು ವಿಭಾಗವಿರುತ್ತದೆ. ಇಲ್ಲಿ ಸಮಗ್ರ ಕನ್ನಡ. ಇಡೀ ಕನ್ನಡದ ಸಮಗ್ರ ಬೆಳವಣಿಗೆ. ಕರ್ನಾಟಕಶಾಸ್ತ್ರ ಕರ್ನಾಟಕದ ಸಮಗ್ರ ಚಿಂತನೆ ನಡೆಯತಕ್ಕದ್ದು. ಎಲ್ಲಾ ವಿಶ್ವವಿದ್ಯಾನಿಲಯಗಳಲ್ಲಿ ಅದೊಂದು ವಿಭಾಗ ಇದೆ. ಆದರೆ ಕನ್ನಡದ ಅಧ್ಯಯನ ಸಂಸ್ಥೆ ಪ್ರತಿಯೊಂದು ವಿಶ್ವವಿದ್ಯಾನಿಲಯದಲ್ಲೂ ಇರುತ್ತದೆ. ಕನ್ನಡವನ್ನು ನೀವು ಕಿತ್ತು ಕೊಳ್ಳುವುದಕ್ಕಾಗುವುದಿಲ್ಲ. ಕನ್ನಡವನ್ನು ಹಿಂದಕ್ಕೆ ಪಡೆಯುವುದಿಲ್ಲ. ಕರ್ನಾಟಕದ ಶಾಸ್ತ್ರ ಸಮಗ್ರ ಕರ್ನಾಟಕದ ಭವ್ಯಪರಂಪರೆಯನ್ನು ಎತ್ತಿ ಹಿಡಿಯತಕ್ಕದ್ದು ಸಾಮಾನ್ಯವಾದ ಮಾತಲ್ಲ. ಇದು ಕೇವಲ ಅಲ್ಲ, ಇದು ಸಾಮಾನ್ಯವಲ್ಲ, ವಿಶ್ವವಿದ್ಯಾನಿಲಯದ ಮೂಲೆಯಲ್ಲ. ಕನ್ನಡದ ಅರ್ಥಕ್ಕೆ ಕನ್ನಡ ಎನ್ನುವ ಪದಕ್ಕೆ ಮೇರುಸ್ಥಾನವನ್ನು ಕೊಡುತ್ತಿದ್ದೇವೆ ನಾವು.

ಡಾ. ಎ.ಬಿ. ಮಲಕರೆಡ್ಡಿ : ನಾನು ಏತಕ್ಕೆ ಹೇಳುತ್ತಿದ್ದೇನೆಂದರೆ, ಈಗಿರತಕ್ಕ ವಿಶ್ವವಿದ್ಯಾನಿಲಯಗಳಲ್ಲಿ ಯಾವ್ಯಾವ ವಿಷಯಗಳ ವಿಚಾರ ನಡೆಯುತ್ತಿದೆ, ಕನ್ನಡದ ಉದಾಹರಣೆಯನ್ನು ತೆಗೆದುಕೊಂಡು ಈ ಇಲಾಖೆಗಳ ಬೆಳವಣಿಗೆಗೆ ಸಾಕಷ್ಟು ಹಣವಿಲ್ಲ, ನಿಧಿಯಿಲ್ಲ, ಫಂಡ್ಸ್ ಇಲ್ಲ, ನಾನು ಹೇಳತಕ್ಕದ್ದು ಇಷ್ಟೆ. ಮತ್ತಷ್ಟು ಕೋಟಿ ರೂಪಾಯಿಗಳನ್ನು ತೆಗೆದುಕೊಂಡು ಲಕ್ಷಾಂತರ ರೂಪಾಯಿಗಳನ್ನು ತೆಗೆದುಕೊಂಡು ಅಲ್ಲಿ ನೀವು ಸಿಂಕ್ ಮಾಡುವುದಕ್ಕೆ ಬದಲು ಇನ್‌ಫ್ರಾಸ್ಟಕ್ಚರ್ ಬೇಕು, ಪೀಠೋಪಕರಣಗಳು

ಬೇಕು. ಈಗಿರತಕ್ಕ ಕನ್ನಡ ಇಲಾಖೆಗಳಿಗೆ ಪ್ರತಿಯೊಂದು ವಿಶ್ವವಿದ್ಯಾನಿಲಯದಲ್ಲೂ ಲಕ್ಷಾಂತರ ರೂಪಾಯಿ ಹಣ ವ್ಯಯವಾಗುತ್ತಿದೆ. ಇದಕ್ಕೆ ಬದಲು ಈಗಿರತಕ್ಕ ವಿಶ್ವವಿದ್ಯಾನಿಲಯಗಳ ಕನ್ನಡ ಇಲಾಖೆಗಳಿಗೆ ಹಣವನ್ನು ಹಂಚಿಕೊಟ್ಟರೆ ಇನ್ನು ಎಷ್ಟು ರೀಸರ್ಚ್ ಮಾಡಬಹುದು. ಕರ್ನಾಟಕದಲ್ಲಿ ಕನ್ನಡಾಲಜಿ ಆಗಬಹುದು. ವಿದ್ಯೆಯನ್ನು ಸಂಶೋಧನೆ ಮಾಡತಕ್ಕ ಮೇಧಾವಿಗಳಿಗೆ, ಕನ್ನಡ ಶಾಸ್ತ್ರಜ್ಞರಿಗೆ ಅಥವಾ ಯಾವ ರಾಜಕೀಯ ವ್ಯಕ್ತಿಗಳಿಗೆ ಈ ಸ್ಥಾನವನ್ನು ಕೊಡಬೇಕೆಂದು ಮಾಡಿದ್ದೀರಿ? ನಮ್ಮ ನಾಡಿನ ಒಳಗಿರಲಿ ಅಥವಾ ಹೊರಗಿರಲಿ ಪ್ರತಿಯೊಬ್ಬರಿಗೂ ಸ್ಥಾನಮಾನ ಇದ್ದೇ ಇದೆ. ಈಗ ಶಿವರಾಮಕಾರಂತರು ಇದ್ದಾರೆ ಅವರಿಗೆ ಯಾವ ವಿಶ್ವವಿದ್ಯಾನಿಲಯದಲ್ಲೂ ಸ್ಥಾನವಿಲ್ಲ. ಆದರೂ ಕೂಡ ಅವರು ಸ್ವತಂತ್ರವಾದ ಒಂದು ಗ್ರಂಥಾಲಯವನ್ನು ಬೆಳೆಸಿದ್ದಾರೆ. ಅವರು ಅಷ್ಟು ಮೇಧಾವಿಗಳು ಇದ್ದಾರೆ. ಅವರು ಬರಹಗಾರರಾಗಿದ್ದು ಸ್ವತಂತ್ರ ಸಾಹಿತ್ಯ ರಚನೆ ಮಾಡಿದ್ದಾರೆ. ವಿಜ್ಞಾನದಲ್ಲಿ ಸಾಹಿತ್ಯ ರಚನೆ ಮಾಡಿದ್ದಾರೆ. ಇಷ್ಟೆಲ್ಲಾ ಅನುಕೂಲತೆಗಳನ್ನು ಒಂದೇ ಸಂಸ್ಥೆಯಲ್ಲಿ ನೀವು ಗಳಿಸುವುದಕ್ಕೆ ಹೊರಟಿದ್ದೀರಿ. ಇಷ್ಟೆಲ್ಲಾ ಮಾಡಬೇಕಾದರೆ ಪೀಠೋಪಕರಣಗಳು ಬೇಕು ಕಟ್ಟಡಗಳು ಬೇಕು. ಇದಕ್ಕೆಲ್ಲಾ ಹಣ ಎಷ್ಟು ವ್ಯಯವಾಗುತ್ತದೆ?

ಶ್ರೀ ಎಂ. ವೀರಪ್ಪ ಮೊಯಿಲಿ : ಮಾನ್ಯ ಸದಸ್ಯರು ಶಿವರಾಮಕಾರಂತರ ವಿಚಾರ ಹೇಳಿದ್ದಾರೆ. ಅವರೂ ಕೂಡ ಶಿಕ್ಷಣ ಸಂಸ್ಥೆಗಳಲ್ಲಿ ಕೆಲಸ ಮಾಡಿದ್ದಾರೆ. ಇವರು ಶಿವರಾಮಕಾರಂತರನ್ನು ಪ್ರೊಫೆಸರ್ ಮಾಡುವುದಕ್ಕೆ ತಯಾರಾಗಿದ್ದಾರೆಯೇ? ಈಗಿರುವ ಯೂನಿವರ್ಸಿಟಿಗಳಲ್ಲಿ ಆ ರೀತಿ ಮಾಡುವುದಕ್ಕೆ ಸಾಧ್ಯವೇ? ಅದನ್ನು ನಾನು ಮಾಡುತ್ತೇನೆ. I can do it here. ಡಾ. ಸುಬ್ಬಲಕ್ಷ್ಮಿಯವರು ಇದ್ದಾರೆ ಅವರು ಸಂಗೀತದಲ್ಲಿ ದೇಶ ವಿದೇಶಗಳಲ್ಲಿ ಪ್ರಖ್ಯಾತಿಯೆನ್ನು ಹೊಂದಿದ್ದಾರೆ. ಅವರು ಯಾವುದೇ ಹೆಡ್ ಆಫ್ ಡಿಪಾರ್ಟ್‌ಮೆಂಟ್ ಆಗಿ ಡೀಲ್ ಮಾಡುತ್ತಾರೆಯೇ? ಐ ಕೆನ್ ಡು ಇಟ್. ವಾಧೀರಾಜ್‌ರವರು ಇದ್ದಾರೆ, ಅವರು ಯಾವುದೇ ವಿಶ್ವವಿದ್ಯಾನಿಲಯದಲ್ಲಿ ಆಗಲಿ ನಮ್ಮ ಕನ್ನಡ ಅಧ್ಯಯನ ಸಂಸ್ಥೆಗಳಲ್ಲಾಗಲೀ ಹೆಡ್ ಆಫ್ ಡಿಪಾರ್ಟ್‌ಮೆಂಟ್ ಆಗಿ ಡೀಲ್ ಮಾಡುತ್ತಾರೆಯೇ? ಐ ಕೆನ್ ಡು ಇಟ್ ಹಿಯರ್. ತಾವು ಕಾನ್ಸೆಪ್ಟ್‌ನ್ನು ಚಿಕ್ಕದು ಮಾಡುವುದು ಬೇಡ. ಅದಕ್ಕೆ ಬಹಳ ವಿಸ್ತಾರವಿದೆ.

ಶ್ರೀ ವಾಟಾಳ್ ನಾಗರಾಜ್ : ಇಡೀ ಸಮಗ್ರವಾಗಿ ಕನ್ನಡದ ಬರಹಗಾರರು ಬರೆದಿರತಕ್ಕಂಥ ಎಷ್ಟು ಪುಸ್ತಕಗಳು ಬಂದಿವೆ, ಅವೆಲ್ಲವನ್ನೂ ಒಂದೇ ಗ್ರಂಥಾಲಯದಲ್ಲಿ ಎಲ್ಲೂ ಇಟ್ಟಿಲ್ಲ ಸ್ವಾಮಿ. ಯಾವ ಒಂದು ಗ್ರಂಥಾಲಯದಲ್ಲೂ ಕನ್ನಡದ ಸಮಗ್ರ ಸಾಹಿತಿಗಳು, ಕನ್ನಡ ಕವಿಗಳು ಬರೆದಿರತಕ್ಕಂಥಾದ್ದು ಎಲ್ಲಿಯೂ ಇಲ್ಲ. ಆದ್ದರಿಂದ ಅಂತಹ ಒಂದು ಗ್ರಂಥಾಲಯ ಸಹಿತ ಇಲ್ಲಿ ಆಗಬೇಕಾಗಿದೆ. ನನಗನ್ನಿಸುತ್ತದೆ ವೆಟಿಕಾನ್ ಸಿಟಿಯಲ್ಲಿ ಪೋಪ್ ಏನಿದ್ದಾರೆ, ಅಷ್ಟು ಎತ್ತರದಲ್ಲಿ ಆ ಮಟ್ಟದಲ್ಲಿ ಇದು ಬೆಳೆಯಬೇಕಾಗುತ್ತದೆ.

ಡಾ. ಎ.ಬಿ. ಮಲಕರೆಡ್ಡಿ : ಸನ್ಮಾನ್ಯ ವಿದ್ಯಾಮಂತ್ರಿಗಳು ಹೇಳಿದ್ದನ್ನು ನಾನು ಸಂಪೂರ್ಣವಾಗಿ ಸ್ವಾಗತ ಮಾಡುತ್ತೇನೆ. ಫಾರ್ಮಲ್ ಡಿಗ್ರಿ ಇಲ್ಲದವರೂ ಕೂಡ ಸಾಹಿತ್ಯ ನಿರ್ಮಾಣ, ಸಂಶೋಧನೆ ಮಾಡತಕ್ಕಂಥ ಶಕ್ತಿಯನ್ನು ಹೊಂದಿದವರಿದ್ದಾರೆ. ನಮ್ಮಲ್ಲಿಯೂ ಕೂಡ, ಬೀದರ್ ನಲ್ಲಿ ಒಬ್ಬ ಸ್ವಾಮಿಗಳು ಇದ್ದಾರೆ. ಅವರು ಪ್ರೈಮರಿ ಸ್ಕೂಲ್ ಕೂಡ ಪಾಸಾಗಿಲ್ಲ. ಆದರೆ ಅವರು ವಚನಶಾಸ್ತ್ರವನ್ನು ಎಷ್ಟು ಚೆನ್ನಾಗಿ ಅಭ್ಯಾಸ ಮಾಡಿಕೊಂಡಿದ್ದಾರೆ ಎಂದರೆ ಯೂನಿವರ್ಸಿಟಿ ಪ್ರೊಫೆಸರ್‌ಗಳು ಕೂಡ ಅವರಿಂದ ವಿವರಣೆ ಪಡೆದು ಹೋಗುತ್ತಾರೆ.

ಶ್ರೀ ಎಂ. ವೀರಪ್ಪ ಮೊಯಿಲಿ : ಈಗ ಸಾಮಾನ್ಯ ರೈತ, ಬಹಳ ಪ್ರಗತಿದಾಯಕವಾದಂಥ ರೈತನನ್ನು ನಾನು ಡೀಪ್ ಆಗಿ ಅಲ್ಲಿ ಮಾಡ್ತೇನೆ. ಏಕೆಂದರೆ

ಇವತ್ತು ವಿಜ್ಞಾನ ಶಾಸ್ತ್ರಗಳು ಕೂಡ ಕನ್ನಡದಲ್ಲಿವೆ. ಆದರೆ ಅಂತಹವರು ಈಗಿರತಕ್ಕಂಥ ಸಾಂಪ್ರದಾಯಿಕ ವಿಶ್ವವಿದ್ಯಾನಿಲಯದ ಗೇಟನ್ನು ದಾಟಿ ಹೋಗಲಿಕ್ಕೆ ಆಗುವುದಿಲ್ಲ. ಇದೆಲ್ಲಾ ಕೆಲವು ಲಿಮೀಟೇಶನ್ಸ್ ಇವೆ.

ಡಾ. ಎ. ಬಿ. ಮಲಕರೆಡ್ಡಿ : ಹಾಗೇನಾದರೂ ತಾವು ಅನುಕೂಲ ಮಾಡುವುದಾದರೆ ಅದು ಸ್ವಾಗತಾರ್ಹ. ಇದು ಒಂದು ಹೊಸ ಯೋಜನೆಯೆಂದು ನಾವು ತಿಳಿದುಕೊಳ್ಳಬಹುದು. ಇನ್ನೊಂದು ವಿಷಯ, ಕೇವಲ ಮಾನವಿಕ ವಿಷಯಗಳಿಗೆ ಅಲ್ಲದೆ ತಾಂತ್ರಿಕ ವಿಷಯಗಳಿಗೆ ಕೂಡ

(ಮಾನ್ಯ ಉಪಾಧ್ಯಕ್ಷರಾದ ಶ್ರೀಮತಿ ನಾಗಮ್ಮ ಸಿ. ಕೇಶವಮೂರ್ತಿ ಅವರು ಅಧ್ಯಕ್ಷ ಸ್ಥಾನದಲ್ಲಿ ಉಪಸ್ಥಿತರಾದರು)

ವೈಜ್ಞಾನಿಕ ವಿಷಯಗಳಿಗೆ ಕೂಡ, ಗ್ರಂಥಗಳನ್ನು ಅಥವಾ ಭಾಷಾಂತರ ಮಾಡಿಸಿ ಕನ್ನಡ ಸಾಹಿತ್ಯವನ್ನು ಅಳವಡಿಸಲಿಕ್ಕೆ ಇದರಲ್ಲಿ ಉತ್ತಮವಾದ ವಿಷಯ ಇಟ್ಟುಕೊಂಡಿದ್ದೀರಿ. ಹಾಗಿದ್ದ ಪಕ್ಷದಲ್ಲಿ ಉಳಿದ ಶಾಸ್ತ್ರಗಳನ್ನು, ಭಾಷಾಂತರ ಶಬ್ದಗಳನ್ನು ಇದರಲ್ಲಿ ಅಳವಡಿಸಿಕೊಳ್ಳಬೇಕಾದರೆ ಅದು ಇಂಟರಾಕ್ಷನ್ ಬೇಕಾಗುತ್ತದೆ. ಜೈವಿಕ ಶಾಸ್ತ್ರ ಇರಬಹುದು, ವೈಜ್ಞಾನಿಕ ಶಾಸ್ತ್ರ ಇರಬಹುದು, ವೈಜ್ಞಾನಿಕ ಶಾಸ್ತ್ರದಲ್ಲಿ ಕೂಡ ಅನೇಕ ವಿಷಯಗಳಿವೆ. ಆದರೆ ಅವುಗಳ ಪರಿಚಯವಾಗಬೇಕಾದರೆ ವ್ಯವಸ್ಥೆ ಬೇಕು. ಪಂಡಿತರು ಎಲ್ಲಿ ಸಿಗುತ್ತಾರೆ? ಈಗಿರತಕ್ಕಂಥ ವಿಶ್ವವಿದ್ಯಾನಿಲಯಗಳಲ್ಲಿ ಪಂಡಿತರು ಸಿಗುತ್ತಾರೆ, ಗ್ರಂಥಗಳು ಸಿಗುತ್ತವೆ, ಗ್ರಂಥಾಲಯಗಳು ಸಿಗುತ್ತವೆ. ಅವರೂ ಕೂಡ ಕನ್ನಡ ಕಲಿಸತಕ್ಕವರು ಇದ್ದಾರೆ. ಅವರೊಂದಿಗೆ ಇಂಟರಾಕ್ಷನ್ ಮಾಡಿ ಅವರ ವಿದ್ಯೆ, ಅನುಭವದ ಲಾಭ ಪಡೆದು ಆಯಾಯ ವಿಶ್ವವಿದ್ಯಾನಿಲಯಗಳಲ್ಲೇ, ಕನ್ನಡ ಡಿಪಾರ್ಟ್‌ಮೆಂಟಿನಲ್ಲೇ ನೀವು ಹಣವನ್ನೂ ಒದಗಿಸಿ ಅವುಗಳನ್ನು ಬೆಳೆಸುವುದರಿಂದ ಬಹಳ ಉಪಯುಕ್ತತೆ ಇದೆಯೆಂದು ನಾನು ತಿಳಿದುಕೊಂಡಿದ್ದೇನೆ. ನಾನು ಹೇಳುವ ಉದ್ದೇಶ ಇಷ್ಟೆ. ನಾನು ಇದನ್ನು ಸ್ವಾಗತ ಮಾಡುತ್ತೇನೆ ಎಂದು ಕೂಡ ಹೇಳಿದ್ದೇನೆ. ಆದರೆ ಅದರ ಜೊತೆಗೆ ಇನ್ನೂ ಸ್ವಲ್ಪ ಹಣ ಒದಗಿಸಿದರೆ ಉಳಿದ ಭಾಷೆಗಳನ್ನೂ ಬೆಳೆಸುವುದರ ಜೊತೆಗೆ ಭಾರತ ದೇಶದಲ್ಲಿ ಅನೇಕ ಭಾಷೆಗಳಿವೆ.....

ಶ್ರೀ ವಾಟಾಳ್ ನಾಗರಾಜ್ : ಇಲ್ಲಿ ಒಂದು ವಿಷಯವನ್ನು ಮಾನ್ಯ ಮಂತ್ರಿಗಳ ಗಮನಕ್ಕೆ ತರುತ್ತೇನೆ. ಇಂಗ್ಲೀಷ್ ಕನ್ನಡ ವೈದ್ಯ ಪದಕೋಶವನ್ನು, ಭಾರತೀಯ ಭಾಷೆಯಲ್ಲಿ ಪ್ರಪ್ರಥಮವಾಗಿ ಮುದ್ರಣವಾಗಿ ಬಂದಿದೆ. ಶಿವಪ್ಪ ಎಂದು ಹೇಳಿ ಹಿಂದುಳಿದ ವರ್ಗದ ಮಹಾಪಂಡಿತರೊಬ್ಬರು ಇದನ್ನು ಬರೆದಿರತಕ್ಕದ್ದು. ಈಗ ಇದರ ಎರಡನೇ ಮುದ್ರಣವಾಗಿದೆ, ಇದು ಐದು ಸಾವಿರ, ಮೂರು ಸಾವಿರ ಪ್ರತಿಗಳು. ಇದನ್ನು ಸರಿಯಾಗಿ ಮಾಡುವುದಾದರೆ ಹತ್ತಾರು ಸಾವಿರ ಮುದ್ರಣ ಮಾಡಿ ಇದನ್ನು ಪ್ರತಿಯೊಂದು ಕಡೆ ಹಂಚಬೇಕು. ನಿಜಕ್ಕೂ ಇದೊಂದು ಪವಾಡ. ಆದಿಚುಂಚನಗಿರಿ ವೈದ್ಯಕೀಯ ಕಾಲೇಜಿನಲ್ಲಿ ಅವರು ಇದ್ದಾರೆ. ಇಂತಹ ಪ್ರಕಟಣೆಗಳು ವಿಜ್ಞಾನಶಾಸ್ತ್ರದಲ್ಲಿ ಹೆಚ್ಚು ಹೆಚ್ಚಾಗಿ ಬರಬೇಕು. ಈಗಾಗಲೇ ಬಹಳ ಅಮೂಲ್ಯವಾದ ವೈದ್ಯ ಪದಕೋಶ ಬಂದಿದೆ.

ಡಾ. ಎ.ಬಿ. ಮಲಕರೆಡ್ಡಿ : ವಿದ್ಯಾ ದಾನ ಆಗಬೇಕಾದರೆ ಭಾಷೆಯ ಮೂಲಕವೇ ಆಗಬೇಕು. ಅದನ್ನು ನಾನು ಒಪ್ಪುತ್ತೇನೆ. ಕನ್ನಡ ವಿಶ್ವವಿದ್ಯಾನಿಲಯ ಎಂದರೆ ಕೇವಲ ಕನ್ನಡ ಭಾಷೆಯ ಬೆಳವಣಿಗೆಯಲ್ಲದೆ, ಸಾಹಿತ್ಯದ ಬೆಳವಣಿಗೆ, ಸಂಗೀತದ ಬೆಳವಣಿಗೆ ಅಲ್ಲದೇ, ಮಾನವನ ಸಮಗ್ರ ಅನುಕೂಲವಾಗಬೇಕೆಂಬ ದೃಷ್ಟಿಯಿಂದ ನಾನು ಮಾತನಾಡತಕ್ಕದ್ದು ಇದೆ. ಯೂನಿವರ್ಸಿಟಿ ಎಂದರೆ ಜಗತ್ತಿನಲ್ಲಿರತಕ್ಕಂಥ ಎಲ್ಲಾ ವಿದ್ಯೆಗಳಿಗೆ ಅನುಕೂಲ ಮಾಡತಕ್ಕ ಕೇಂದ್ರ ಇದು ಆಗಬೇಕು. ಅದು ನನ್ನ ಉದ್ದೇಶ. ಈಗ ವಿಜ್ಞಾನ ಶಾಸ್ತ್ರದಲ್ಲಿ ಕೂಡ ಪಾಂಡಿತ್ಯ ಸಂಪಾದನೆ ಮಾಡತಕ್ಕಂಥ,

ಕನ್ನಡ ಭಾಷೆಯಲ್ಲಿ ಪಾಂಡಿತ್ಯ ಸಂಪಾದನೆ ಮಾಡತಕ್ಕಂಥ ಒಬ್ಬ ಜಿಜ್ಞಾಸು ಇದ್ದ ವಿದ್ಯಾರ್ಥಿಗಳೂ ಇದ್ದರು. ಅಂದರೆ ಉಳಿದ ವಿಜ್ಞಾನ ಶಾಸ್ತ್ರದಲ್ಲಿ ವಿದ್ಯೆ ಸಂಪಾದನೆ ಮಾಡಲಿಕ್ಕೆ ಅನುಕೂಲ ಆಗಬೇಕೆಂಬ ದೃಷ್ಟಿಯಿಂದ ನಾನು ಮಾತನಾಡುತ್ತಿದ್ದೇನೆ.

ಇಷ್ಟನ್ನು ಹೇಳಿದೆ. ಕನ್ನಡ ವಿಶ್ವವಿದ್ಯಾನಿಲಯ ವಿಧೇಯಕದ ಮಂಡನೆಯನ್ನು ನಾನು ಸ್ವಾಗತ ಮಾಡುತ್ತೇನೆ. ಆದರೆ, ನಾನು ಏನು ಕೆಲವು ವಿಚಾರಗಳನ್ನು ಹೇಳಿದ್ದೇನೆ, ಅವುಗಳನ್ನು ಅಳವಡಿಸಿಕೊಂಡು ತರುವುದಾದರೆ, ಕನ್ನಡ ವಿಶ್ವವಿದ್ಯಾನಿಲಯ ನಿಜವಾದ ವಿಶ್ವವಿದ್ಯಾನಿಲಯ ಎನಿಸಿಕೊಂಡು, ಬೆಳೆಯುವುದಕ್ಕೆ ಸಾಧ್ಯವಾಗುತ್ತದೆ ಎಂದು ಹೇಳಿ ನನ್ನ ಮಾತುಗಳನ್ನು . ಮುಗಿಸುತ್ತೇನೆ.

ಶ್ರೀ ವಾಟಾಳ್ ನಾಗರಾಜ್ : ಕನ್ನಡ ಬೆರಳಚ್ಚು, ಶೀಘ್ರಲಿಪಿ ಅಭಿವೃದ್ಧಿ ಸಂಶೋಧನಾ ವಿಭಾಗ, ಕನ್ನಡ ಬೆರಳಚ್ಚು ನಿಘಂಟು ಆಗಬೇಕು. ಶೀಘ್ರಲಿಪಿ ಬಗ್ಗೆಯೂ ಒಂದು ನಿಘಂಟು ಆಗಬೇಕು, ಶೀಘ್ರಲಿಪಿ ಪಠ್ಯಪುಸ್ತಕಗಳು ಬೇಕು, ಇದು ಪ್ರಮುಖವಾದುದು. ನಿಮಗೆ ಉತ್ತರ ಕೊಡುವಾಗ ಸಹಾಯವಾಗಲಿ ಎಂದು ಈ ಮಾತನ್ನು ಹೇಳುತ್ತಿದ್ದೇನೆ. ತಮ್ಮ ಉತ್ತರದಲ್ಲಿ ಇದು ಬರದಿದ್ದರೆ, ಮತ್ತೊಂದು ಸಾರಿ ತಮಗೆ ಜ್ಞಾಪಿಸಬೇಕಾಗುತ್ತದೆ.

ಶ್ರೀ ಎಂ. ವೀರಪ್ಪ ಮೊಯಿಲಿ : ಸನ್ಮಾನ್ಯ ಉಪಾಧ್ಯಕ್ಷಿಣಿಯವರೇ, ಇವತ್ತು ಇಲ್ಲಿ ಶ್ರೇಷ್ಠ ಮಟ್ಟದ ಚರ್ಚೆ ನಡೆದಿದೆ. ಸನ್ಮಾನ್ಯ ವಾಟಾಳ್ ನಾಗರಾಜ್‌ರವರು ಉತ್ತಮವಾದ ಸಲಹೆಗಳನ್ನು ಕೊಟ್ಟಿದ್ದಾರೆ. ಜಾನಪದ ನಿಘಂಟು, ಕನ್ನಡ ಅಭಿವೃದ್ಧಿ, ಉನ್ನತ ಶೈಕ್ಷಣಿಕ ಮತ್ತು ಸಂಸ್ಕೃತ ಕೇಂದ್ರವನ್ನಾಗಿ ಈ ಸಂಸ್ಥೆಯನ್ನು ಪರಿವರ್ತನೆ ಮಾಡುವುದಕ್ಕೆ ಸಾಕಷ್ಟು ಒಳ್ಳೆಯ ಸಲಹೆಗಳನ್ನು ಕೊಟ್ಟಿದ್ದಾರೆ. ಮತ್ತು ಇದಕ್ಕೆ ಪೂರಕವಾದ ಕೆಲವು ಸಲಹೆಗಳನ್ನೂ ಕೊಟ್ಟಿದ್ದಾರೆ. ಮತ್ತೆ ಡಾ. ಮಲಕರೆಡ್ಡಿಯವರೂ ಕೂಡ ಕೆಲವು ಸಲಹೆಗಳನ್ನು ಕೊಟ್ಟಿದ್ದಾರೆ. ಕ್ಲಾಸ್ 4ರಲ್ಲಿ ಉದ್ದೇಶ ಬಹಳ ಸ್ಪಷ್ಟ ಇದೆ. ಇಲ್ಲಿ ಕನ್ನಡ ಭಾಷೆ ಮುಖ್ಯವಲ್ಲ, inter action ಇರಬಹುದು, ಪ್ರಕ್ರಿಯೆ ಇರಬಹುದು ಹೊರ ಜಗತ್ತಿಗೆ. ಭಾಷೆ ವೈಜ್ಞಾನಿಕವಾಗಿ ಬೆಳೆದಾಗ ಮಾತ್ರ ಬಾಷೆ ಬೆಳೆಯುತ್ತದೆ. ಇಲ್ಲಿ ಕನ್ನಡ ಭಾಷೆ ಮೂರನೆಯದು. ಕನ್ನಡ ಬಾಷೆ ಮತ್ತು ಸಾಹಿತ್ಯವನ್ನು ಆಧರಿಸಿ ಬೆಳೆದ ಕಲೆ, ಸಂಸ್ಕೃತಿ, ಸಂಗೀತ, ರಂಗನಾಟಕಗಳು, ಜಾನಪದ ಕಲೆ, ವರ್ಣಚಿತ್ರ, ಶಿಲ್ಪಶಾಸ್ತ್ರ, ವಾಸ್ತುಶಿಲ್ಪ, ಸಾಹಿತ್ಯ, ವ್ಯಾಕರಣ ಶಾಸ್ತ್ರ, ಮಣ್ಣಿನ ವಿಜ್ಞಾನ, ಭಾಷಾ ಶಾಸ್ತ್ರ, ಇತಿಹಾಸ, ಧರ್ಮ, ತತ್ವಶಾಸ್ತ್ರ, ಭೂಗೋಳ ಶಾಸ್ತ್ರ, ಖಗೋಳ ಶಾಸ್ತ್ರ ನೌಕಾಗತಿ ಮತ್ತು ನೌಕಾ ಶಾಸ್ತ್ರ ಜ್ಯೋತಿಶಾಸ್ತ್ರ, ಸಿದ್ಧವೈದ್ಯ, ಇಂಜಿನಿಯರಿಂಗ್ ವಿಜ್ಞಾನ ಮತ್ತು ....

Dr. A.B. Malakareddy :...... that have developed on the basis of Kannada language.......

ಅಲ್ಲಿಯೇ ದೋಷ ಇರುವುದು.

ಶ್ರೀ ಎಂ. ವೀರಪ್ಪ ಮೊಯಿಲಿ : ತಾವು ಕನ್ನಡದ ಪ್ರತಿ ಓದಿದರೆ ಒಳ್ಳೆಯದು. "ಕರಕುಶಲ ಕಲೆಯಂಥ ಕ್ಷೇತ್ರಗಳಲ್ಲಿ ಉಚ್ಚ ಶಿಕ್ಷಣ ಮತ್ತು ಸಂಶೋಧನೆಗೆ ಅನುಕೂಲ ಕಲ್ಪಿಸುವುದು ಮತ್ತು ಕ್ರಮಬದ್ಧಗೊಳಿಸುವುದು. ಯಾವಾಗ ನಮ್ಮ ಕನ್ನಡ ಬೆಳೆದಿದೆ ಎಂದು ಹೇಳುವುದೆಂದರೆ, ರಷ್ಯಾ ಭಾಷೆ, ಜಪಾನ್ ಭಾಷೆಯಲ್ಲಿ ಯಾವ ರೀತಿಯಲ್ಲಿ ವಿಜ್ಞಾನಿಗಳನ್ನು ತಯಾರು ಮಾಡುತ್ತಾರೆ, ವಿಜ್ಞಾನ ಕಲಿಸುತ್ತಾರೆ, ಕೃಷಿ ವಿಜ್ಞಾನ ಕಲಿಸುತ್ತಾರೆ ಅಥವಾ ಇಂಜಿನಿಯರಿಂಗ್ ವಿಜ್ಞಾನ ಕಲಿಸುತ್ತಾರೆ ಎಂದು ನೋಡಬೇಕು. ತಾವು ಕನ್ನಡದ ಪ್ರತಿ ಓದಿದರೆ ತಮಗೆ ತಪ್ಪು ಕಲ್ಪನೆ ಬರುವುದಿಲ್ಲ, ಇದು ಕನ್ನಡ ವಿಶ್ವವಿದ್ಯಾನಿಲಯದ ಮಸೂದೆ, ಆದ್ದರಿಂದ ತಾವು ಕನ್ನಡದ ಪ್ರತಿ ಓದಿ.

ಈ ವಿಶ್ವವಿದ್ಯಾನಿಲಯದ ಅಂತಿಮ ಕಲ್ಪನೆ ಏನಿರಬೇಕೆಂದರೆ, ವಿಶ್ವವಿಖ್ಯಾತ ವಿಜ್ಞಾನಿಗಳನ್ನು, ವಿಶ್ವವಿಖ್ಯಾತ ತತ್ವಜ್ಞರನ್ನು, ವಿಶ್ವವಿಖ್ಯಾತ ವೈದ್ಯರನ್ನು ಈ ಕನ್ನಡದ ನೆಲದಲ್ಲಿ ಉತ್ಪಾದನೆ ಆಗತಕ್ಕ ಶಕ್ತಿ ಸಂಪನ್ನತೆ ಈ ವಿಶ್ವವಿದ್ಯಾನಿಲಯದ ಪ್ರಯತ್ನ ಆಗಬೇಕು. ಜಪಾನ್ ಭಾಷೆಯಲ್ಲಿ ಆಗುವುದಿದ್ದರೆ, ಇವತ್ತು ರಷ್ಯಾ ಭಾಷೆಯಲ್ಲಿ....

ಶ್ರೀ ಡಿ.ಬಿ. ಚಂದ್ರೇಗೌಡ : ಅವರು ಇಂಗ್ಲೀಷ್ ವಿಸ್ಕಿ ಕುಡಿದಿದ್ದಾರೆ, ಅವರಿಗೆ ಕನ್ನಡದ ಕಾಪಿ ಕೊಡಿ...

5.25 ಪಿ.ಎಂ.

ಡಾ. ಎ.ಬಿ. ಮಲಕರೆಡ್ಡಿ : ದಯವಿಟ್ಟು ಕೇಳಿರಿ, ತಪ್ಪಿದ್ದರೆ ತಿದ್ದಿಕೊಳ್ಳೋಣ.

ಶ್ರೀ ಎಂ. ವೀರಪ್ಪ ಮೊಯಿಲಿ : ನಾನು ಮಾತನಾಡುತ್ತೇನೆ. ಆಮೇಲೆ ಪೂರಕವಾದ ಪ್ರಶ್ನೆ ಕೇಳಿರಿ. ಈಗ ಕೊನೆಯ ಉದ್ದೇಶ ಇರುವುದು, ಇದು ಕಲ್ಪನೆ ಅಲ್ಲ, ವಾಸ್ತವವಾಗಿ ಎಂಜಿನಿಯರಿಂಗ್ ಶಿಕ್ಷಣ, ಕನ್ನಡ ಮಾಧ್ಯಮದಲ್ಲಿ ಮಾಡಬೇಕೆಂದು ನಾವು ಇಚ್ಛೆ ಪಡುತ್ತಿದ್ದೇವೆ. ಏನು ಭಾಷಾ ಸಂಪನ್ನತೆ ಇದೆ? ಎಷ್ಟು ಬೆಳೆಸಿದ್ದೀರಿ ತಾವು? ಕನ್ನಡ ಅಧ್ಯಯನ ಕೇಂದ್ರಗಳು ಇಂತಹದನ್ನು ಬೆಳೆಸುವುದಕ್ಕೆ ಸಾಧ್ಯ ಇದೆಯೇ? ಎಂದು ಕೇಳುತ್ತಿದ್ದೇನೆ. ಸ್ವಾತಂತ್ರ್ಯ ಪಡೆದು 40 ವರ್ಷಗಳಾಯಿತು. ಇವತ್ತಿಗೂ ಕೂಡಾ ಕನ್ನಡ ನಿಘಂಟು ಆಗಿಲ್ಲ. ಪ್ರೊಫೆಸರ್ ನಂಜುಂಡಸ್ವಾಮಿ ಯವರು ಹೇಳಿದ ಹಾಗೆ, ಪರಿಪೂರ್ಣವಾದ ಸಮಗ್ರವಾದ ನಿಘಂಟನ್ನು 52ನೇ ಇಸವಿಯಿಂದ ನಾವು ಏನು ತಯಾರು ಮಾಡುವುದಕ್ಕೆ ಹೊರಟಿದ್ದೇವೆ, ಅದನ್ನೂ ಕೊನೆಯಹಂತಕ್ಕೆ ಇವತ್ತಿಗೂ ಕೂಡಾ ಮುಟ್ಟಿಲ್ಲ. ಅವರು ಹೇಳತಕ್ಕದ್ದು ವಾಸ್ತವಿಕವಾದ ಪರಿಸ್ಥಿತಿ. ಇವತ್ತು ಕನ್ನಡ ಸಾಹಿತ್ಯದ ಇತಿಹಾಸ ಪುಟಗಳನ್ನು ತಾವು ದಯವಿಟ್ಟು ಯಾವ ಲೈಬ್ರರಿಯಲ್ಲಾದರೂ ನೋಡಿರಿ. ಸರಿಯಾದ ಕನ್ನಡದ ಇತಿಹಾಸ ಇವತ್ತಿಗೂ ಸೃಷ್ಟಿಯಾಗಿದೆಯೇ ಇಲ್ಲವೇ ಎಂಬುದನ್ನು ತಾವು ಹೇಳಿರಿ. ಸನ್ಮಾನ್ಯ ವಾಟಾಳ್ ನಾಗರಾಜ್ ರವರು ಅನೇಕ ತಾಳೆಗರಿಯ ಉದ್ಗ್ರಂಥಗಳು ಇವೆ ಎಂದು ಹೇಳಿದರು. ಆ ಉದ್ಗ್ರಂಥಗಳಿಂದ ನೂರಕ್ಕೆ ಒಂದು ಅಂಶವನ್ನಾದರೂ ಕೂಡಾ ಸಾರಸ್ವತ ಲೋಕಕ್ಕೆ ಕೊಡತಕ್ಕಂಥ ಶಕ್ತಿ ಕನ್ನಡ ಸಾರಸ್ವತ ಲೋಕಕ್ಕೆ ಉತ್ಪಾದನೆಯಾಗಿಲ್ಲ ಎಂದು ಹೇಳಿದರೆ ನಮ್ಮ ಸಾಹಿತ್ಯ ಎಷ್ಟು ಬಡವಾಗಿದೆ ಎಂದು ತಾವು ಆಲೋಚನೆ ಮಾಡಬೇಕು. ಇದು ಬರೀ ಹಣದ ವಿಚಾರ ಅಲ್ಲ ಡಾ. ಮಲಕರೆಡ್ಡಿಯವರೇ, ಇದು ಮನಸ್ಸಿನಲ್ಲಿ ಕೇಂದ್ರಿಕೃತವಾಗಿರಬೇಕಾಗುತ್ತದೆ. ಆ ರೀತಿಯಲ್ಲಿ ವ್ಯವಸಾಯ ಆಗಿರಬೇಕಾಗುತ್ತದೆ. ಕನ್ನಡಕ್ಕೆ ಹಣ ಏನೂ ಕಡಿಮೆ ಇರಲಿಲ್ಲ, ಇದರ ಬಗ್ಗೆ ಚರ್ಚೆ ಮಾಡುವುದು ಇದ್ದರೆ ಮಾಡಿರಿ, ನಮ್ಮದೇನೂ ಅಭ್ಯಂತರ ಇಲ್ಲ. ಆದರೆ ಇವತ್ತು ಕನ್ನಡ ವಿಶ್ವವಿದ್ಯಾನಿಲಯದ ವ್ಯಾಪ್ತಿ ಏನಿದೆ, ಗಾಂಭೀರ್ಯತೆ ಏನಿದೆ ಅದನ್ನು ತಿಳಿದುಕೊಳ್ಳಬೇಕು. ಒಂದನ್ನು ಸ್ಪಷ್ಟವಾಗಿ ಹೇಳುತ್ತಿದ್ದೇನೆ, ಕನ್ನಡ ಅಧ್ಯಯನ ಕೇಂದರಗಳು ಬೇರೆ ಬೇರೆ ವಿಶ್ವವಿದ್ಯಾನಿಲಯಗಳಲ್ಲಿ ಏನು ಕೆಲಸ ಮಾಡುತ್ತಿವೆ, ಅದರ ಒಂದು ಅಂಶವನ್ನು ಡೂಪ್ಲಿಕೇಟ್ ಮಾಡತಕ್ಕಂಥ ಒಂದು ಪ್ರತಿಕ್ರಿಯೆ ಈ ವಿಶ್ವವಿದ್ಯಾನಿಲಯ ಮಾಡುವುದಿಲ್ಲ. That is not the purpose. This will have its own. ಸ್ವಂತವಾದಂಥ ಮೂಲಭೂತವಾದಂಥ ಕರ್ತವ್ಯಗಳನ್ನು ಇದು ಮಾಡುತ್ತದೆ. 1986 ರಲ್ಲಿ ಹಂಪಿ ರಿಸರೆಕ್ಷನ್ ಪ್ರಾಜೆಕ್ಟ್ ಮಾಡಿದೆವು. ಅದರಲ್ಲಿ 100ಕ್ಕೆ ಒಂದು ಅಂಶವನ್ನೂ ಕೂಡ ಇವತ್ತಿಗೂ ಸಾಧನೆ ಮಾಡುವುದಕ್ಕೆ ಆಗಲಿಲ್ಲ. ಹಂಪಿ ರಿಸರೆಕ್ಷನ್ ಪ್ರಾಜೆಕ್ಟ್‌ನಲ್ಲಿ ನೆಲ ಅಗೆದರೆ ನಮ್ಮ ನಾಗರೀಕತೆಯ ಗಣಿ ಅಲ್ಲಿ ಉತ್ಪಾದನೆ ಆಗುತ್ತದೆ. ಹಂಪಿಯಲ್ಲಿ ಇವತ್ತಿಗೂ ಕೂಡ ನೂರರಲ್ಲಿ ಒಂದು, ಅಂಶವನ್ನೂ ಸಂಶೋಧನೆ ಮಾಡುವುದಕ್ಕೆ ಆಗಲಿಲ್ಲ. ಯಾವಾಗ ಮಾಡುತ್ತೀರಿ? ಒಂದು ಸಾವಿರ ವರ್ಷ ಆದ ಮೇಲೆ ಮಾಡುತ್ತೀರಾ? ಒಂದು ಶತಮಾನದ ಮೇಲೆ ಮಾಡುತ್ತೀರಾ? ಇಂತಹ ನಾಗರೀಕತೆಯ ದೊಡ್ಡ ಗಣಿ ಅಲ್ಲಿ

ಅವಿತಿರುವಾಗ ಅದನ್ನು ಹೊರಕ್ಕೆ ತರತಕ್ಕಂಥ, ವಿಶ್ವಕ್ಕೆ ಪರಿಚಯ ಮಾಡಿಕೊಡತಕ್ಕಂಥ ಶಕ್ತಿ ಕನ್ನಡಿಗರಿಗೆ ಇಲ್ಲದೇ ಹೋದರೆ ಇದಕ್ಕಿಂತ ದಾರಿದ್ರ್ಯ ಸಂಸ್ಕೃತಿಯಲ್ಲಿ ಮತ್ತೊಂದು ಇಲ್ಲ. ಇದನ್ನು ಇವತ್ತು ಹೊರತರಬೇಕಾಗಿದೆ.

ಕನ್ನಡ ನೆಲದಲ್ಲಿ ದೊಡ್ಡ ದೊಡ್ಡ ಸಾಮ್ರಾಜ್ಯಗಳು ಆಗಿಹೋದವು. ದೊಡ್ಡ ದೊಡ್ಡ ಕವಿಗಳು ಆಗಿ ಹೋದರು. ಪಂಪ ರನ್ನ ನಮ್ಮ ಎದುರಿಗೆ ಬರುತ್ತಾರೆ. ನನಗನ್ನಿಸುತ್ತದೆ, ಸರಿಯಾದ ಸಂಶೋಧನೆ ಕನ್ನಡ ಸಂಸ್ಕೃತಿಯ ಬಗ್ಗೆ ಸಾಹಿತ್ಯದ ಬಗ್ಗೆ ಮಾಡಿದ್ದೇ ಆದರೆ ಇಂತಹ ನೂರಾರು ಪಂಪ ರನ್ನರು ಇತಿಹಾಸ ಗರ್ಭದಲ್ಲಿ ಏನು ಅಡಗಿ ಹೋಗಿದ್ದಾರೆ. ಅವರು ಹೊರಬರುತ್ತದೆ. ಅಂತಹ ತಾಳೆ ಗರಿಗಳು ಇವೆ. ಇದನ್ನು ನಾವು ಸಂಶೋಧನೆ ಮಾಡಬೇಕಾಗಿದೆ. ಯಾರೋ ಒಬ್ಬರು ಡಾ. ಗುರುರಾಜಭಟ್ಟರಂತಹವರು ಅಂತಹ ಕೆಲವು ಇತಿಹಾಸಕಾರರು, ತಮ್ಮ ಸ್ವಂತ ಖರ್ಚಿನಲ್ಲಿ ಕೆಲಸ ಮಾಡಿದ್ದಾರೆ. ಅವರು ಕಡೆಗೆ ಉಪವಾಸ ಸತ್ತುಹೋದರು. ಆತ್ಮಹತ್ಯೆ ಮಾಡಿಕೊಳ್ಳುವ ಪರಿಸ್ಥಿತಿ ಕನ್ನಡದಲ್ಲಿ ಬಂದಿದೆ. ಹಣ ಹೋಗುತ್ತದೆ. ಎಲ್ಲಿ ಹೋಗುತ್ತದೆ ಗೊತ್ತಾಗುವುದಿಲ್ಲ. ಎಲ್ಲಿ ಕೆಲಸ ಮಾಡಬೇಕು ಅಲ್ಲಿ ಮಾಡುವುದಿಲ್ಲ. ನೂರು ಕೋಟಿ ಕೊಟ್ಟರೂ ಇಂತಹ ಸಾಧನೆಯನ್ನು ನೂರು ವರ್ಷದಲ್ಲಿ ಮಾಡುತ್ತೀರಾ? ಬೇರೆ ಬೇರೆ ಕ್ಷೇತ್ರದಲ್ಲಿ ಆಗುವುದಿಲ್ಲ. ಇದಕ್ಕೆ ಕಾರ್ಯವ್ಯಾಪ್ತಿ ಇದೆ, ಇದಕ್ಕೆ ಸಂಶೋಧನಾ ಮನೋವೃತ್ತಿ ಬೇಕಾಗಿದೆ, ಒಂದು ಅಧ್ಯಯನ ಬೇಕಾಗಿದೆ. ತಾವು ಇದ್ದಿರೋ ಇಲ್ಲವೋ ಗೊತ್ತಾಗಲಿಲ್ಲ, ನಾನು ಪ್ರಾಸ್ತಾವಿಕವಾಗಿ ಮಾತನಾಡುವಾಗ ಒಂದು ವಿಷಯ ಹೇಳಿದೆ. ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಸೈನ್ಸ್ ವಿಚಾರ ಹೇಳಿದೆ. ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಸೈನ್ಸ್ ಏತಕ್ಕೆ ಬೇಕು ವಿಜ್ಞಾನ ವಿಭಾಗಗಳು ಎಲ್ಲಾ ವಿಶ್ವವಿದ್ಯಾನಿಲಯಗಳಲ್ಲೂ ಇರುವಾಗ ಅದಕ್ಕೆ ಹಣ ಕೊಟ್ಟಿದ್ದರೆ, ವಿಜ್ಞಾನ ಬಹಳವಾಗಿ ಬೆಳೆಯುತ್ತಿತ್ತು ಅಲ್ಲವೇ ಎಂಬ ವಾದವನ್ನು ಸುಲಭವಾಗಿ ಹೇಳಬಹುದು. ಬೆಳೆಯಲು ಸಾಧ್ಯವೇ?

ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಸೈನ್ಸ್ ದೊಡ್ಡ ಗಾತ್ರದಲ್ಲಿ ಜಗತ್ತಿಗೆ ಶ್ರೇಷ್ಠ ವಿಜ್ಞಾನಿಗಳನ್ನು ಕೊಡತಕ್ಕ ಶಕ್ತಿ ಕಂಪಾರಿಟೀವ್ ಆಗಿ ಯಾರಿಗೆ ಬಂದಿದೆ? ಇವತ್ತು ಅಂತಹದ್ದನ್ನು ಆಲೋಚನೆ ಮಾಡಬೇಕಾಗಿದೆ. ಈಗ ಮುಂದೆ ಬರತಕ್ಕಂಥವರು ಯಾರು? ಯಾರನ್ನು ಉಪಕುಲಪತಿಗಳನ್ನಾಗಿ ಮಾಡುತ್ತೀರಿ? ಉನ್ನತ ತಜ್ಞರನ್ನು ಕರ್ನಾಟಕದ ನೆಲದಲ್ಲಿ ಇದ್ದವರನ್ನು ಅವರ ಶಿಫಾರಸ್ಸಿಗೆ ಒಳಪಟ್ಟು ನಾವು ನೇಮಕ ಮಾಡುತ್ತೇವೆ. ಇದು ರಾಜಕೀಯ ನಿರ್ಣಯವಾಗುವುದಿಲ್ಲ. ಆದ್ದರಿಂದ ಈ ದಿಸೆಯಲ್ಲಿ ಎಲ್ಲಾ ಶಾಸಕ ಮಿತ್ರರಾದ ಪ್ರೊ ನಂಜುಂಡಸ್ವಾಮಿಯವರು ವೃತ್ತಿ ಪದಕೋಶ ಮಾಡಬೇಕೆಂದು ಅವರು ಉತ್ತಮವಾದ ಮಾತು ಹೇಳಿದರು ಅಂತಹ ಕೆಲಸ ಇವತ್ತು ನಡೆಯಬೇಕು. ಬರೀ ಕನ್ನಡ ಭಾಷೆ ಕನ್ನಡ ಸಂಸ್ಕೃತಿ ಭಾವನೆಯಲ್ಲಿರುವ ಪ್ರಶ್ನೆ ಅಲ್ಲ ಭಾವನೆಗಳ ಲಹರಿಗಳಲ್ಲಿ ನಮ್ಮನ್ನು ತೇಲಿಸಿಕೊಂಡು ಹೋಗತಕ್ಕಂಥ ಭಾಷೆ ಕನ್ನಡ ಭಾಷೆ ಅಲ್ಲ. ಕನ್ನಡ ಜೀವಂತವಾಗಿ ಜ್ವಲಂತವಾಗಿ ಮುಂದಿನ ನಾಗರೀಕರ ಜನಜೀವನದಲ್ಲಿ ಮೊದಲ ಪಂಕ್ತಿಯಾಗಿ ಕೊಂಡೊಯ್ಯತಕ್ಕಂಥ ಶಕ್ತಿ ಕನ್ನಡ ಭಾಷೆಯಲ್ಲಿದೆ. ಕನ್ನಡ ಸಂಸ್ಕೃತಿಯಲ್ಲಿದೆ. ಆದರೆ ಇದನ್ನು ಎಲ್ಲಿಯವರೆಗೆ ತೆಗೆದುಕೊಂಡು ಹೋಗಿದ್ದೇವೆಂದರೆ ನಮಗೆ ಕೀಳರಿಮೆ ಇರಬಾರದು. ನಮ್ಮಲ್ಲಿ ಉದಾತ್ತವಾದ ಭಾವನೆ ಇರಬೇಕು ಒಂದು ಉನ್ನತ ಸಾಧನೆ ಮಾಡತಕ್ಕಂಥ ಶಕ್ತಿ ಖಂಡಿತವಾಗಿ ನಮ್ಮಲ್ಲಿರಬೇಕು. ನಮ್ಮ ಮಾನ್ಯ ಸಿಂಧ್ಯಾರವರು ಹೇಳಿದ ಹಾಗೆ ಕನ್ನಡ ಭಾಷೆ ಉನ್ನತ ಪರಂಪರೆಯನ್ನು ಪಡೆದಿದೆ. ಯಾರಾದರೂ ಮಂತ್ರಿಯೊಬ್ಬರು ಇಂಗ್ಲೀಷ್‌ನಲ್ಲಿ ಕಡತದ ಮೇಲೆ ಬರೆದರೆ ಇಂಗ್ಲೀಷ್‌ನಲ್ಲಿ ನೋಟ್ ಬರೆದರೆ ಅವರು ದಕ್ಷ ಮಂತ್ರಿಯಾಗುವುದಿಲ್ಲ. ಈಗ ನಾನು ಕನ್ನಡದಲ್ಲಿಯೇ ಬರೆಯುತ್ತೇನೆ. ನನ್ನನ್ನು ಯಾರಾದರೂ ಅದಕ್ಷ ಎಂದು ಹೇಳುತ್ತಾರೇನು? ತಾವೀಗ ಒಂದು ಅರ್ಜಿ ಕೊಟ್ಟರೆ ನಾನು ಕನ್ನಡದಲ್ಲಿಯೇ ಬರೆಯುತ್ತೇನೆ. ನನ್ನ ಎಲ್ಲಾ

ಕಡತಗಳಲ್ಲಿ ಬರೆಯತಕ್ಕಂಥಾದ್ದು ನನ್ನ ಎಲ್ಲಾ ಟಿಪ್ಪಣಿಗಳನ್ನು ಕನ್ನಡದಲ್ಲಿಯೇ ಬರೆಯುತ್ತೇನೆ. ಅದು ಬಹಳ ಸ್ಪಷ್ಟವಾಗಿ ಅರ್ಥವಾಗುತ್ತದೆ.

ಶ್ರೀ ಎಚ್. ಏಕಾಂತಯ್ಯ : ದಕ್ಷತೆ ಭಾಷೆಯ ಮೇಲೆ ನಿಂತಿಲ್ಲ.

ಶ್ರೀ ಎಂ. ವೀರಪ್ಪ ಮೊಯಿಲಿ : ನಿಂತಿಲ್ಲ. ಕೆಲವರ ತಲೆಯಲ್ಲಿ ಇಂಗ್ಲೀಷ್ ಮಾತನಾಡಿದರೆ ಸರಿ ಎನ್ನುವ ಭಾವನೆ ಇದೆ. ಇಂಗ್ಲೀಷ್ ಭಾಷೆ ಇರಬೇಕು ಒಳ್ಳೆಯದು, ಭಾಷೆ ಇರಬೇಕು. ಇಂಗ್ಲೀಷ್‌ನಲ್ಲಿ ನನಗೂ ಕೂಡ ಪಾಂಡಿತ್ಯ ಇದೆ. ಪಾಂಡಿತ್ಯ ಇಲ್ಲ ಎಂದು ಅಲ್ಲ. ಆದರೆ ನಾನು ನನ್ನ ಅಧಿಕಾರಿಗಳಿಗೆ ಕನ್ನಡದಲ್ಲಿ ನನ್ನ ಸಂದೇಶ ನನ್ನ ಅಭಿಪ್ರಾಯವನ್ನು ಕಳುಹಿಸುತ್ತೇನೆ. ಅದು ಅಷ್ಟು ಪರಿಪಕ್ವವಾಗಿ ಪರಿಪೂರ್ಣರಾಗಿ ಆಂಗ್ಲ ಭಾಷೆಯಲ್ಲಿ ಇರುವುದಕ್ಕಾಗುವುದಿಲ್ಲ. ಅದನ್ನು ನಮ್ಮ ಅಧಿಕಾರಿಗಳೇ ಹೇಳುತ್ತಾರೆ. ಈಗ ನೀವು ಒಂದು ಅರ್ಜಿ ಕೊಟ್ಟರೆ please consider ಎಂದರೆ you can consider to reject or you consider it to adopt ಏನಾದರೂ ಮಾಡಬಹುದು. ಇಲ್ಲಾ ಅದನ್ನೇ ಕನ್ನಡದಲ್ಲಿ ಆದರೆ ಅದನ್ನು ಮಾಡಿ ಒಂದು ಬರೆದರೆ ಅಥವಾ ವರ್ಗಾವಣೆ ಮಾಡಿ, ವರ್ಗಾವಣೆ ಬಗ್ಗೆ ಪರಿಗಣಿಸಿ ಎಂದು ಬರೆದರೆ, ಅದನ್ನು ರಿಜೆಕ್ಟ್ ಮಾಡುವುದಕ್ಕೆ ಆಗುವುದಿಲ್ಲ. ಅದೇ ವರ್ಗ ಮಾಡಿ ಎಂದು ಹೇಳಿದರೆ ಅದನ್ನು ಹೇಗೆ ರಿಜೆಕ್ಟ್ ಮಾಡುತ್ತಾರೆ? ಕನ್ನಡ ಬಹಳ ಸಂಪದ್ಭರಿತವಾದ ಭಾಷೆ. ಅದಕ್ಕೆ ಎಲ್ಲರೂ ಕನ್ನಡದಲ್ಲಿ ಬರೆಯಬೇಕು. ಕನ್ನಡ ಕಲಿಯಬೇಕು. ಕನ್ನಡದಲ್ಲಿ ಚಿಂತನೆ ಮಾಡಬಾರದೆಂದು ಅಲ್ಲ ಕನ್ನಡ ವೈಜ್ಞಾನಿಕವಾಗಿ ಪರಿಪೂರ್ಣವಾದ ಭಾಷೆಯಾಗಿ ಇರುವಾಗ ಅದನ್ನು ಚೆನ್ನಾಗಿ ಏತಕ್ಕೆ ಬಳಸಬಾರದು? ಮಾನ್ಯ ಸಿಂಧ್ಯಾರವರು ಬಹಳ ಚೆನ್ನಾಗಿ ಹೇಳಿದರು. ನಾವು ಹೆಚ್ಚು ಹೆಚ್ಚು ಪ್ರಾರಂಭದಲ್ಲಿ ಕನ್ನಡ ಬಳಸುವಾಗ ಅಂಜಿಕೆ ಇರಬಹುದು ಅನುಮಾನ ಇರಬಹುದು ಆದರೆ ಕೆಲವು ತಿಂಗಳುಗಳು ಹೋದ ಮೇಲೆ ಇದು ಸರಳವಾಗುತ್ತದೆ. ಮಾನ್ಯ ಅಧ್ಯಕ್ಷರೇ ಮಾನ್ಯ ಬೈರೇಗೌಡರು ಕನ್ನಡ ಶಾಲೆಗಳನ್ನು ಮತ್ತಷ್ಟು ಆಕರ್ಷಣೀಯವಾಗಿ ಮಾಡಬೇಕೆನ್ನುವ ಮಾತನ್ನು ಹೇಳಿದ್ದಾರೆ. ಉರ್ದು ಶಾಲೆಗಳಲ್ಲಿ ಮತ್ತು ಕನ್ನಡೇತರ ಶಾಲೆಗಳಲ್ಲಿಯೂ ಕೂಡ ಕನ್ನಡದ ಬೇಡಿಕೆ ಇದೆ. ಮಾನ್ಯ ಖಮರುಲ್ ಇಸ್ಲಾಮ್‌ರವರು ಮತ್ತು ಅಜೀಜ್ ಸೇಠ್‌ರವರು ಹೇಳುತ್ತಾರೆ, ಉರ್ದು ಶಾಲೆಗಳಲ್ಲಿ ಕನ್ನಡದ ಅಧ್ಯಾಪಕರನ್ನು ನೇಮಕ ಮಾಡದಿದ್ದರೆ ಅವರು ಕನ್ನಡ ಹೇಗೆ ಕಲಿಯಬೇಕು? ಈ ಪ್ರಕ್ರಿಯೆಯನ್ನು ನಾವು ಪ್ರಾರಂಭದಲ್ಲಿ ಮಾಡುತ್ತೇವೆ. ಅದೇ ರೀತಿ ಶ್ರೀಮತಿ ಮೋಟಮ್ಮನವರು, ಶ್ರೀ ಎಂ.ಎಸ್. ಪಾಟೀಲ್‌ರವರು ಕೂಡ ಹೇಳಿದ್ದಾರೆ. ಇದರ ಬಗ್ಗೆ ಡಾಕ್ಟರ್ ಮಲಕಾರೆಡ್ಡಿಯವರು ಕೂಡ ಹೇಳಿದ್ದಾರೆ. ಇದಕ್ಕೆ ಅವರ ವಿರೋಧ ಇಲ್ಲ ಅವರು ಇದರ ವ್ಯಾಪ್ತಿ ಏನು? ಆ ವ್ಯಾಪ್ತಿಯಲ್ಲಿ ಇದನ್ನು ಮಾಡಲಿಕ್ಕೆ ಸಾಧ್ಯವೇ ಎನ್ನುವ ಅನುಮಾನ ಅವರಿಗೆ ಇದೆ. ಆ ಅನುಮಾನ ಬೇಕಾಗಿಲ್ಲ. ಇದರ ವ್ಯಾಪ್ತಿ ದೊಡ್ಡದಾಗಿದೆ. ಬಹಳ ಉದಾರವಾಗಿದೆ. ಯಾವ ರೀತಿಯಲ್ಲಿ ಡೆಲ್ಲಿಯಲ್ಲಿ ನಿಮ್ಹ ಹೆಲ್ತ್ ಇನ್‌ಸ್ಟಿಟ್ಯೂಟ್ ಇದೆ ಅದೇ ಪ್ರಕಾರದಲ್ಲಿ ಒಂದು ವಿಶಿಷ್ಟವಾದ ಉನ್ನತೆಯನ್ನು ಸಾಧನೆ ಮಾಡತಕ್ಕಂಥ ಶಕ್ತಿ ಇದೆ. ಯಾವ ಒಂದು ಸಂಸ್ಥೆ ಇರಲಿ ಅದರ ಪ್ರಗತಿ ಅದನ್ನು ನಡೆಸತಕ್ಕಂಥ ಜನಗಳನ್ನು ಹೊಂದಿಕೊಂಡು ಇರುತ್ತದೆ. ಅದನ್ನು ನಾವು ಚೆನ್ನಾಗಿ ಪ್ರಾರಂಭ ಮಾಡುತ್ತೇವೆ. ತಮ್ಮೆಲ್ಲರ ಸಹಾಯ ಸೌಹಾರ್ದತೆಯಿಂದ ಈ ಸಂಸ್ಥೆಯನ್ನು ಕಟ್ಟಲಿಕ್ಕೆ ಬೇಕಾಗುತ್ತದೆ. ಒಂದು ಉತ್ತಮವಾದ ಸಂಸ್ಥೆಯನ್ನು ಕಟ್ಟಲಿಕ್ಕೆ ನಾವೆಲ್ಲರೂ ಪ್ರಯತ್ನ ಮಾಡೋಣ ಎಂದು ಹೇಳಿ ತಮ್ಮೆಲ್ಲರ ಸಹಕಾರ ಸಹಾಯಕ್ಕೆ ನಾನು ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಪಿ.ಜಿ.ಆರ್. ಸಿಂಧ್ಯ : ಮಾನ್ಯ ಅಧ್ಯಕ್ಷರೇ ಬೇರೆ ರಾಜ್ಯಗಳಲ್ಲಿ ಕನ್ನಡ ಶಾಲೆಗಳನ್ನು ಕಟ್ಟಲಿಕ್ಕೆ ಕಟ್ಟಡಗಳಿಗೆ ಮತ್ತು ಬೇರೆಯದಕ್ಕೆ ಆ ರಾಜ್ಯ ಸರ್ಕಾರಗಳು

ಸಹಾಯ ಮಾಡುವುದಿಲ್ಲ. ಈ ಮಾತನ್ನು ನಾನು ತಮಗೆ ಹೇಳಿದೆ. ರಾಜ್ಯಪಾಲರ ಭಾಷಣದಲ್ಲಿ ಸಹ ಹೇಳಿದ್ದೆ. ಆಮೇಲೆ ತಮಿಳುನಾಡಿನಲ್ಲಿ ನಮ್ಮ ಪಕ್ಕದ ಬೌಂಡ್ರಿಯಲ್ಲಿ ಬೇಕಾದಷ್ಟು ಜನರು ಕನ್ನಡ ಶಾಲೆಗಳನ್ನು ನಡೆಸುತ್ತಿದ್ದಾರೆ. ಮಹಾರಾಷ್ಟ್ರದಲ್ಲಿವೆ, ಆಂಧ್ರಪ್ರದೇಶದಲ್ಲಿವೆ. ದಯವಿಟ್ಟು ಕನ್ನಡ ಶಾಲೆಗಳನ್ನು ಅವರು ನಡೆಸುತ್ತಿದ್ದಾರೆ ಅವರಿಗೆ ಸ್ವಲ್ಪ ಹಣ ಕೊಡಲಿಕ್ಕೆ ಕಾರ್ಯಕ್ರಮ ತೆಗೆದುಕೊಳ್ಳಬೇಕೆಂದು ಹೇಳುತ್ತೇನೆ. ಮಹಾರಾಷ್ಟ್ರ ಸಂಘದವರು ಬಂದರೆ ಒಂದು 20 ಸಾವಿರ ಅಥವಾ ಒಂದು ಲಕ್ಷ ಕೊಡಲಿಕ್ಕೆ ನಮಗೆ ಅವಕಾಶ ಇದೆ. ಅದನ್ನು ಸ್ವಲ್ಪ ಹೆಚ್ಚು ಕೊಡತಕ್ಕಂಥದ್ದಕ್ಕೆ ಆಶ್ವಾಸನೆ ಕೊಡಬೇಕೆಂದು ನಾನು ಕೇಳುತ್ತೇನೆ.

ಶ್ರೀ ಎಂ. ವೀರಪ್ಪ ಮೊಯಿಲಿ : ಈ ವಿಶ್ವವಿದ್ಯಾನಿಲಯ ಬರುವ ಅಕಾಡೆಮಿಕ್ 1991-92ರ ವರ್ಷದಲ್ಲೇ ಪ್ರಾರಂಭವಾಗುತ್ತದೆ. ತಮಗೆ ಹೇಳುವುದೇನೆಂದರೆ, ಯಾವಾಗಲೂ ಕನ್ನಡದ ಜ್ಞಾನಕ್ಕೆ ಈ ಕೇಂದ್ರವಿರುತ್ತದೆ. ಆ ಜ್ಞಾನಕ್ಕೆ ಗಡಿ ಇರುವುದಿಲ್ಲ. ಕೇಂದ್ರ ಎಂದ ತಕ್ಷಣ ಎಲ್ಲಾ ಇಲ್ಲೇ ಸೀಮಿತ ಇರುತ್ತದೆಂದು ತಿಳಿದುಕೊಳ್ಳುವುದು ಬೇಡ. ಪ್ರಕ್ರಿಯೇ ಇರುತ್ತದೆ. ಅದು ವಿಶ್ವವ್ಯಾಪ್ತಿಯಾಗಿರುತ್ತದೆ. ಶಾಲೆಗಳಿಗೆ ದುಡ್ಡು ಕೊಡತಕ್ಕಂಥದ್ದರ ಬಗ್ಗೆ ತಾವು ಹೇಳುವುದು ಕರೆಕ್ಟ್. ಮದ್ರಾಸ್ ನಲ್ಲಿ ಇರುವುದಕ್ಕೆ ಕೊಡುತ್ತೇವೆ. ಬೊಂಬಾಯಿಯಲ್ಲಿ ಇರುವುದಕ್ಕೆ ಕೊಡುತ್ತೇವೆ. ಬಾರ್ಡರ್ ಏರಿಯಾದಲ್ಲೂ ಕೊಡಬೇಕು. ನಿಜವಾಗಿ ಹೇಳುವುದಾದರೆ ಇದಕ್ಕಾಗಿ ಆಯವ್ಯಯದಲ್ಲಿ ಹಣ ಇದೆ. ಆದ್ದರಿಂದ ತಾವು ಏನು ಸೂಚನೆ ಕೊಟ್ಟಿದ್ದೀರಿ ಅದಕ್ಕೆ ಪ್ರತ್ಯೇಕವಾಗಿ ಬಜೆಟಿನಲ್ಲಿ ಹಣ ಕೊಟ್ಟಿದ್ದೇವೆ.

ಶ್ರೀ ವಾಟಾಳ್ ನಾಗರಾಜ್ : ಇದರ ಜೊತೆಗೆ ನಾನು ಒಂದೆರಡು ಮಾತನ್ನು ಹೇಳುತ್ತೇನೆ. ತಾವು ಉತ್ತರ ಕೊಡುವಾಗ ಇದನ್ನೂ ಹೇಳಬೇಕು. ಕನ್ನಡ ಶೀಘ್ರಲಿಪಿ ಬಗ್ಗೆ ಹೇಳಿದ್ದೇನೆ. ಅದರ ಬಗ್ಗೆ ಸಂಶೋಧನೆ, ಗ್ರಂಥ ರಚನೆ, ನಿಘಂಟು ಆಗಬೇಕಾದ್ದು, ಒಂದು ಪಠ್ಯ ಪುಸ್ತಕವಾಗಬೇಕಾದ್ದು ಅವೆಲ್ಲಾ ಸೇರಬೇಕಾಗುತ್ತದೆ. ಆಮೇಲೆ ಇಂಗ್ಲೀಷ್ ನಿಂದ ಕನ್ನಡಕ್ಕೆ ತರ್ಜುಮೆ ಆದಾಗ ಕೆಲವು ಸಂದರ್ಭದಲ್ಲಿ ಇದು ಕನ್ನಡ ಹೌದೋ ಅಲ್ಲವೋ ಎನ್ನುವ ಅಪನಂಬಿಕೆಯಾಗುತ್ತದೆ. ಅದನ್ನು ಕನ್ನಡದಲ್ಲಿ ಓದಿ ಅರ್ಥ ಮಾಡಿಕೊಳ್ಳಬೇಕಾಗಿದೆ. ಇಂಗ್ಲೀಷ್ ಪದಕ್ಕೆ ಮತ್ತೆ ಹೋಗಬೇಕಾಗುತ್ತದೆ. ಆ ಪರಿಸ್ಥಿತಿ ಉದ್ಭವವಾಗಿದೆ. ಯಾರು ಇದನ್ನು ತರ್ಜುಮೆ ಮಾಡುತ್ತಾರೋ ಗೊತ್ತಿಲ್ಲ. ನನಗೆ ಒಂದು ಬಂದಿದೆ. ಕ್ಯಾನ್ಕರ್ಡ್ ಗ್ರ್ಯಾಂಟಲಿಂಗ್, ಅರ್ಥೋಪಾಯ ಅಗ್ರಮಾನಪಾದ ಮುಂಗಡ, ಹಿಂಗದ್ರೆ ನಮಗೆ ಅರ್ಥವೇ ಆಗುವುದಿಲ್ಲ. ಕ್ಯಾನ್ಕರ್ಡ್ ಬ್ಯಾಂಕ್ ಅದೆಲ್ಲಿದೆಯೋ.

ಶ್ರೀ ಹೆಚ್. ಏಕಾಂತಯ್ಯ : ಕ್ಯಾನ್ಕಾರ್ಡ್ ಬ್ಯಾಂಕ್ ಅಂದರೆ, ಅದು ಕೆನರಾ ಬ್ಯಾಂಕ್.

ಶ್ರೀ ವಾಟಾಳ್ ನಾಗರಾಜ್ : ಕ್ಯಾನ್ಕಾರ್ಡ್, ಅರ್ಥೋಪಾಯ, ಅಗ್ರಮಾನ, ಮಂಥನ ಏಕೆಂದರೆ ಇತ್ತೀಚೆಗೆ ಈ ಪದಗಳಿವೆಯಲ್ಲಾ, ಇಂಗ್ಲೀಷ್ ಕನ್ನಡಕ್ಕೆ ತರ್ಜುಮೆಯಾಗುತ್ತಿಲ್ಲ. ಇನ್ನಾವುದೋ ಪದಕ್ಕೆ ತರ್ಜುಮೆಯಾಗುತ್ತಿದೆ. ಆದ್ದರಿಂದ ಕನ್ನಡದ ಶಬ್ದಕೋಶ ಅಚ್ಚ ಕನ್ನಡದಲ್ಲಿರಬೇಕು. ಈ ಎಲ್ಲಾ ಕೆಲಸವನ್ನು ಈ ಒಂದು ವಿಶ್ವವಿದ್ಯಾನಿಲಯ ಮಾಡಬೇಕು. ಮತ್ತೆ ಇದಕ್ಕೆ ವರ್ಷಕ್ಕೆ ಒಂದೊಂದು ಕೋಟಿ ಎಂದು ಹೇಳುತ್ತೀರಿ. ನಿಮ್ಮ ಉದ್ದೇಶ ಮತ್ತು ಮಸೂದೆಯಲ್ಲಿ ನಮೂದಿಸಿರುವ ಅಪಾರವಾದಂಥ ಕೆಲಸ ಕಾರ್ಯಗಳನ್ನು ಮಾಡುತ್ತೇವೆಂದು ಹೇಳಿದ್ದೀರಿ. ಇವೆಲ್ಲಾ ಮಾಡುವುದಕ್ಕೆ ನೀವು ಕೊಡುವ 5 ಕೋಟಿ ರೂಪಾಯಿ ಬಕಾಸುರನ ಹೊಟ್ಟೆಗೆ ಒಂದು ಕಾಸಿನ ಮಜ್ಜಿಗೆ ಕೊಟ್ಟ ಹಾಗೆ ಆಗುತ್ತಿದೆ. ಆದ್ದರಿಂದ ಇದೆಲ್ಲಾ ಕನಿಷ್ಠ ನಿಮ್ಮ ಚಿಂತನೆ, ನಿಮ್ಮ ಕಲ್ಪನೆ, ನಿಮ್ಮ ಕನಸು ನನಸಾಗಬೇಕಾದರೆ ಈ 5 ಕೋಟಿ

ರೂಪಾಯಿಗಳಲ್ಲಿ ಮುಗಿಯುವಂಥಾದ್ದಲ್ಲ. ಕನಿಷ್ಟ 50 ಕೋಟಿ ರೂಪಾಯಿಗಳನ್ನಾದರೂ ನೀವು ಮಾಡಬೇಕಾಗುತ್ತದೆ. ಕಾರಣವೇನೆಂದರೆ, ನೀವು ಅಷ್ಟು ವೈಭವವಾಗಿ ತೆಗೆದುಕೊಂಡು ಹೋಗಬೇಕಾದರೆ ಇಷ್ಟು ಹಣ ಬೇಕು. ಇಲ್ಲವೆಂದರೆ ಹಂಪೆಯಲ್ಲಿ ಕಸ ಹೊಡೆಯುವುದಕ್ಕೆ ಸಾಕಾಗುವುದಿಲ್ಲ ಈ ದುಡ್ಡು.. ಅಲ್ಲಿ ಕಸ ಹೊಡೆಯುವುದಕ್ಕೆ ಕಸ ಪೊರಕೆ ತೆಗೆದುಕೊಳ್ಳುವುದಕ್ಕೆ ಈ ದುಡ್ಡು ಸಾಕಾಗುವುದಿಲ್ಲ.

ಶ್ರೀ ಎಂ. ವೀರಪ್ಪ ಮೊಯಿಲಿ : ತಮಗೆ ನಾನು ಹೇಳಬೇಕಾದರೆ ವಿಶ್ವವಿದ್ಯಾನಿಲಯಗಳ ಕಟ್ಟಡಗಳಿಗೆ ನಾವು ಸುಮಾರು ಏಳೂವರೆ ಕೋಟಿ ರೂಪಾಯಿಗಳನ್ನು ಅಂದಾಜು ಮಾಡಿಟ್ಟಿದ್ದೇವೆ. ಮತ್ತು ಈ ಐದು ವರ್ಷಗಳಲ್ಲಿ ಆವರ್ತಕ ವೆಚ್ಚ ಎಂದು ಏನಿದೆ ರೆಕರಿಂಗ್ ಎಕ್ಸ್‌ಪೆನ್ಸಸ್, ಅದು 6 ಕೋಟಿ ರೂಪಾಯಿ ಇಟ್ಟಿದ್ದೇವೆ. ಹಣ ಹೆಚ್ಚು ಬೇಕಾದರೆ ನಾವು ಒದಗಿಸೋಣ. ಈಗ ಅದನ್ನು ಪ್ರಾರಂಭ ಮಾಡೋಣ.

ಶ್ರೀ ಎಂ.ಎಸ್. ಪಾಟೀಲ್ : ಮಾನ್ಯ ಅಧ್ಯಕ್ಷರೇ, ನಾನೊಂದು ಕ್ಲಾರಿಫಿಕೇಷನ್ ಕೇಳುತ್ತಿದ್ದೇನೆ. ಕರ್ನಾಟಕ ವಿಧಾನ ಸಭೆಯ ಮತ್ತು ವಿಧಾನ ಪರಿಷತ್ತಿನ ಒಬ್ಬೊಬ್ಬರು ಸದಸ್ಯರೆಂದು ಇದರಲ್ಲಿ ಹಾಕಿದ್ದೀರಿ. ಕೊನೆಯ ಪಕ್ಷ ಅದನ್ನು ಎರಡೆರಡು ಸದಸ್ಯರೆಂದು ಮಾಡಬೇಕೆಂದು ನಾನು ಕೇಳುತ್ತೇನೆ. ಅದು ಮಾಡುವುದು ಒಳ್ಳೆಯದೆಂದು ನನ್ನ ಅಭಿಪ್ರಾಯ. ಆಮೇಲೆ, ಕನ್ನಡದ ವಿಶ್ವವಿದ್ಯಾನಿಲಯಕ್ಕೆ, ಮೂಲಭೂತವಾದಂಥ ಆಧಾರಸ್ಥಂಬವಾಗಿದ್ದ ವಿಜಯನಗರ ಸಾಮ್ರಾಜ್ಯದ ಅರಸರ ಹೆಸರನ್ನು ಅದಕ್ಕೆ ಇಡಬೇಕೆಂದು ನಾನು ಅಭಿಪ್ರಾಯವನ್ನು ವ್ಯಕ್ತ ಮಾಡಿದ್ದೆ. ಅದರ ಬಗ್ಗೆ ತಾವು ಹೇಳಬೇಕು.

ಶ್ರೀ ಎಂ. ವೀರಪ್ಪ ಮೊಯಿಲಿ : ಬೇಕಾದರೆ ತಿದ್ದುಪಡಿ ಮಾಡಲಿಕ್ಕೆ ಆಲೋಚನೆ ಮಾಡುತ್ತೇನೆ.

ಶ್ರೀ ಎಂ.ಎಸ್. ಪಾಟೀಲ್ : ಇಬ್ಬಿಬ್ಬರು ಸದಸ್ಯರೆಂದು ಇದರಲ್ಲೇ ಮಾಡಬೇಕು.

1991ರ ಕನ್ನಡ ವಿಶ್ವವಿದ್ಯಾನಿಲಯ ವಿಧೇಯ

ಪರ್ಯಾಲೋಚನಾ ಪ್ರಸ್ತಾವ

ಶ್ರೀ ಎಂ. ವೀರಪ್ಪ ಮೊಯಿಲಿ (ಶಿಕ್ಷಣ ಮತ್ತು ಸಂಸದೀಯ ವ್ಯವಹಾರಗಳ ಸಚಿವರು) : ಮಾನ್ಯ ಅಧ್ಯಕ್ಷರೇ "1991ನೇ ಕನ್ನಡ ವಿಶ್ವವಿದ್ಯಾನಿಲಯ ವಿಧೇಯಕವನ್ನು ಪರ್ಯಾಲೋಚಿಸಬೇಕೆಂದು ಕೋರುತ್ತೇನೆ."

ಪ್ರಸ್ತಾವವನ್ನು ಮಂಡಿಸಲಾಯಿತು.

ಅಧ್ಯಕ್ಷರು : ಪ್ರಸ್ತಾವ ಏನೆಂದರೆ 1991ರ ಕನ್ನಡ ವಿಶ್ವವಿದ್ಯಾನಿಲಯ ವಿಧೇಯಕವನ್ನು ಪರ್ಯಾಲೋಚಿಸುವುದು.

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು.

ಖಂಡ ಖಂಡವಾಗಿ ವಿಧೇಯಕವನ್ನು ಪರ್ಯಾಲೋಚಿಸುವುದು

ಖಂಡ 2ರಿಂದ 10ರವರೆಗೆ

ಉಪಾಧ್ಯಕ್ಷರು : 'ಖಂಡ 2ರಿಂದ 10ರವರೆಗೆ ಎರಡೂ ಸೇರಿದಂತೆ ಈ ವಿಧೇಯಕದ ಅಂಗವಾಗಿರುತ್ತದೆ'

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು.

(ಖಂಡ 2ರಿಂದ 10ರವರೆಗೆ ಎರಡೂ ಸೇರಿದಂತೆ ಈ ವಿಧೇಯಕಕ್ಕೆ ಸೇರಿಸಲ್ಪಟ್ಟಿತು)

ಖಂಡ 11 :

ಉಪಾಧ್ಯಕ್ಷರು : ಖಂಡ 11ಕ್ಕೆ ಮಾನ್ಯ ಶಿಕ್ಷಣ ಹಾಗೂ ಸಂಸದೀಯ ವ್ಯವಹಾರಗಳ ಸಚಿವರು ತಿದ್ದುಪಡಿಯನ್ನು ಸೂಚಿಸಬೇಕು.

ಶ್ರೀ ಎಂ.ವೀರಪ್ಪ ಮೊಯಿಲಿ (ಶಿಕ್ಷಣ ಹಾಗೂ ಸಂಸದೀಯ ವ್ಯವಹಾರಗಳ ಸಚಿವರು) : ಮಾನ್ಯ ಉಪಾಧ್ಯಕ್ಷಿಣಿಯವರೇ, ಈಗ 11ನೇ ಖಂಡಕ್ಕೆ ಒಂದು ತಿದ್ದುಪಡಿ ಮಾಡಬೇಕು.

'11ನೇ ಖಂಡದ (1)ನೇ ಉಪ-ಖಂಡದಲ್ಲಿ, "ರಾಜ್ಯಪಾಲರು" ಎಂಬ ಪದಗಳಿಗೆ, "ಮುಖ್ಯ ಮಂತ್ರಿಯವರು" ಎಂಬ ಪದಗಳನ್ನು ಪ್ರತಿಸ್ಥಾಪಿಸತಕ್ಕದ್ದು"

ಉಪಾಧ್ಯಕ್ಷರು : ಈಗ ಪ್ರಸ್ತಾವ 'ಏನೆಂದರೆ '11ನೇ ಖಂಡದ (1) ನೇ ಉಪಖಂಡದಲ್ಲಿ "ರಾಜ್ಯಪಾಲರು" ಎಂಬ ಪದಗಳಿಗೆ "ಮುಖ್ಯ ಮಂತ್ರಿಯವರು" ಎಂಬ ಪದಗಳನ್ನು ಪ್ರತಿಸ್ಥಾಪಿಸತಕ್ಕದ್ದು" ಎಂಬ ವಿಷಯ ಸಭೆಯ ಮುಂದೆ ಇದೆ.'

(ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ತಿದ್ದುಪಡಿಗೆ ಅನುಮೋದನೆ ನೀಡಲಾಯಿತು) ಹಾಗೂ 11ನೇ ಖಂಡ ತಿದ್ದುಪಡಿಯಾದಂತೆ ವಿಧೇಯಕಕ್ಕೆ ಸೇರಿಸಲ್ಪಟ್ಟಿತು)

ಖಂಡ 12 ರಿಂದ 18ರವರೆಗೆ :

ಉಪಾಧ್ಯಕ್ಷರು : 'ಖಂಡ 12ರಿಂದ 18ರವರೆಗೆ ಎರಡೂ ಸೇರಿದಂತೆ ಈ ವಿಧೇಯಕದ ಭಾಗವಾಗಿರುತ್ತದೆ.'

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

(ಖಂಡ 12ರಿಂದ 18ರವರೆಗೆ ಎರಡೂ ಸೇರಿದಂತೆ ಈ ವಿಧೇಯಕಕ್ಕೆ ಸೇರಿಸಲ್ಪಟ್ಟಿತು)

ಖಂಡ 19 :

ಉಪಾಧ್ಯಕ್ಷರು : ಖಂಡ 19ಕ್ಕೆ ಮಾನ್ಯ ಶಿಕ್ಷಣ ಹಾಗೂ ಸಂಸದೀಯ ವ್ಯವಹಾರಗಳ ಸಚಿವರು ತಿದ್ದುಪಡಿಯನ್ನು ಸೂಚಿಸಬೇಕು.

ಶ್ರೀ ಎಂ. ವೀರಪ್ಪ ಮೊಯಿಲಿ (ಮಾನ್ಯ ಶಿಕ್ಷಣ ಹಾಗೂ ಸಂಸದೀಯ ವ್ಯವಹಾರಗಳ ಸಚಿವರು) : ಮಾನ್ಯ ಉಪಾಧ್ಯಕ್ಷಿಣಿಯವರೇ, ಈಗ 19ನೇ ಖಂಡಕ್ಕೆ ಒಂದು ತಿದ್ದುಪಡಿ ಮಾಡಬೇಕು.

19ನೇ ಖಂಡದ (1)ನೇ ಉಪ ಖಂಡದಲ್ಲಿ, (ಎಂ) ಬಾಬಿಗೆ ಈ ಮುಂದಿನದನ್ನು ಪ್ರತಿಸ್ಥಾಪಿಸತಕ್ಕುದು, ಎಂದರೆ :

"(ಎಂ) ಸರ್ಕಾರದಿಂದ ನಾಮ ನಿರ್ದೇಶಿತರಾದ ಎಂಟು ಮಂದಿ ಸದಸ್ಯರು ಅವರ ಪೈಕಿ ಒಬ್ಬರು ಅನುಸೂಚಿತ ಜಾತಿಗಳಿಗೆ ಸೇರಿದವರಾಗಿರತಕ್ಕದ್ದು, ಒಬ್ಬರು ಅನುಸೂಚಿತ ಬುಡಕಟ್ಟುಗಳಿಗೆ ಸೇರಿದವರಾಗಿರತಕ್ಕದ್ದು, ಒಬ್ಬರು ಮಹಿಳೆಯಾಗಿರತಕ್ಕುದು, ಒಬ್ಬರು ಧರ್ಮದ ಆಧಾರದ ಮೇಲೆ ಅಲ್ಪ ಸಂಖ್ಯಾತ ವರ್ಗಕ್ಕೆ ಸೇರಿದವರಾಗಿರತಕ್ಕುದು ಮತ್ತು ಒಬ್ಬರು ಸರ್ಕಾರದಿಂದ ನಿರ್ದಿಷ್ಟ ಪಡಿಸಲಾದ ಹಿಂದುಳಿದ ವರ್ಗಗಳಿಗೆ ಸೇರಿದವರಾಗಿರತಕ್ಕುದು."

ಉಪಾಧ್ಯಕ್ಷರು : ಈಗ ಪ್ರಸ್ತಾವ 'ಏನೆಂದರೆ '19ನೇ ಖಂಡದ (1) ನೇ ಉಪಖಂಡದಲ್ಲಿ (ಎಂ) ಬಾಬಿಗೆ ಈ ಮುಂದಿನದನ್ನು ಪ್ರತಿಸ್ಥಾಪಿಸತಕ್ಕುದು, ಎಂದರೆ: (ಎಂ) ಸರ್ಕಾರದಿಂದ ನಾಮ ನಿರ್ದೇಶಿತರಾದ ಎಂಟು ಮಂದಿ ಸದಸ್ಯರು ಅವರ ಪೈಕಿ ಒಬ್ಬರು ಅನುಸೂಚಿತ ಜಾತಿಗಳಿಗೆ ಸೇರಿದವರಾಗಿರತಕ್ಕುದು, ಒಬ್ಬರು ಅನುಸೂಚಿತ ಬುಡಕಟ್ಟುಗಳಿಗೆ ಸೇರಿದವರಾಗಿರತಕ್ಕುದು, ಒಬ್ಬರು ಮಹಿಳೆಯಾಗಿರತಕ್ಕುದು, ಒಬ್ಬರು ಧರ್ಮದ ಆಧಾರದ ಮೇಲೆ ಅಲ್ಪ ಸಂಖ್ಯಾತ ವರ್ಗಕ್ಕೆ ಸೇರಿದವರಾಗಿರತಕ್ಕುದು

ಮತ್ತು ಒಬ್ಬರು ಸರ್ಕಾರದಿಂದ ನಿರ್ಧಿಷ್ಟಪಡಿಸಲಾದ ಹಿಂದುಳಿದ ವರ್ಗಗಳಿಗೆ ಸೇರಿದವರಾಗಿರತಕ್ಕುದು."

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ತಿದ್ದುಪಡಿಗೆ ಅನುಮೋದನೆ ನೀಡಲಾಯಿತು ಹಾಗೂ 19ನೇ ಖಂಡ ತಿದ್ದುಪಡಿಯಾದಂತೆ ವಿಧೇಯಕಕ್ಕೆ ಸೇರಿಸಲ್ಪಟ್ಟಿತು)

ಖಂಡ 20 ರಿಂದ 21ರವರೆಗೆ :

ಉಪಾಧ್ಯಕ್ಷರು : 'ಖಂಡ 20ರಿಂದ 21ರವರೆಗೆ ಎರಡೂ ಸೇರಿದಂತೆ ಈ ವಿಧೇಯಕದ ಭಾಗವಾಗಿರುತ್ತದೆ.'

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

(ಖಂಡ 20ರಿಂದ 21ರವರೆಗೆ ಎರಡೂ ಸೇರಿದಂತೆ ಈ ವಿಧೇಯಕಕ್ಕೆ ಸೇರಿಸಲ್ಪಟ್ಟಿತು)

ಶ್ರೀ ಎಂ. ವೀರಪ್ಪ ಮೊಯಿಲಿ (ಶಿಕ್ಷಣ ಸಚಿವರು): (22ನೇ ಖಂಡದಲ್ಲಿ (ಬಿ) ಬಾಬಿನಲ್ಲಿ ಒಂದು ತಿದ್ದುಪಡಿ ಇದೆ.

I) "ನಾಲ್ವರು" ಎಂಬ ಪದಕ್ಕೆ, "ಎಂಟು ಮಂದಿ" ಎಂಬ ಪದವನ್ನು ಪ್ರತಿಷ್ಠಾಪಿಸತಕ್ಕುದು.

II) "ಒಬ್ಬರು ಅನುಸೂಚಿತ ಜಾತಿಗಳಿಗೆ ಸೇರಿದವರಾಗಿರಬೇಕು ಮತ್ತು ಇನ್ನೊಬ್ಬರು ಬುಡಕಟ್ಟುಗಳಿಗೆ ಸೇರಿದವರಾಗಿರಬೇಕು" ಎಂಬ ಪದಗಳಿಗೆ, "ಅವರ ಪೈಕಿ ಒಬ್ಬರು ಅನುಸೂಚಿತ ಜಾತಿಗಳಿಗೆ ಸೇರಿದವರಾಗಿರತಕ್ಕದ್ದು, ಒಬ್ಬರು ಅನುಸೂಚಿತ ಬುಡಕಟ್ಟುಗಳಿಗೆ ಸೇರಿದವರಾಗಿರತಕ್ಕುದು, ಒಬ್ಬರು ಮಹಿಳೆಯಾಗಿರತಕ್ಕುದು, ಒಬ್ಬರು ಧರ್ಮದ ಆಧಾರದಮೇಲೆ ಅಲ್ಪ ಸಂಖ್ಯಾತ ವರ್ಗಕ್ಕೆ ಸೇರಿದವರಾಗಿರತಕ್ಕುದು ಮತ್ತು ಒಬ್ಬರು ಸರ್ಕಾರದಿಂದ ನಿರ್ದಿಷ್ಟ ಪಡಿಸಲಾದ ಹಿಂದುಳಿದ ವರ್ಗಗಳಿಗೆ ಸೇರಿದವರಾಗಿರತಕ್ಕುದು" ಎಂಬ ಪದಗಳನ್ನು ಪ್ರತಿಷ್ಠಾಪಿಸತಕ್ಕುದು.

ಉಪಾಧ್ಯಕ್ಷಿಣಿಯವರು: ಪ್ರಸ್ತಾಪವೇನೆಂದರೆ,

i) 22ನೇ ಖಂಡ (ಬಿ) ಬಾಬಿನಲ್ಲಿ 'ನಾಲ್ವರು' ಎನ್ನುವ ಪದಕ್ಕೆ 'ಎಂಟು' ಮಂದಿ ಎನ್ನುವ ಪದವನ್ನು ಪ್ರತಿಷ್ಠಾಪಿಸತಕ್ಕದ್ದು.

ii) ಒಬ್ಬರು ಅನುಸೂಚಿತ ಜಾತಿಗಳಿಗೆ ಸೇರಿದವರಾಗಿರಬೇಕು, ಇನ್ನೊಬ್ಬರು ಬುಡಕಟ್ಟುಗಳಿಗೆ ಸೇರಿರಬೇಕು ಎಂಬ ಪದಗಳಿಗೆ, ಅವರ ಪೈಕಿ ಒಬ್ಬರು ಅನುಸೂಚಿತ ಜಾತಿಗಳಿಗೆ ಸೇರಿದವರಾಗಿರತಕ್ಕದ್ದು, ಒಬ್ಬರು ಬುಡಕಟ್ಟುಗಳಿಗೆ ಸೇರಿದವರಾಗಿರತಕ್ಕದ್ದು, ಒಬ್ಬರು ಮಹಿಳೆಯಾಗಿರತಕ್ಕದ್ದು, ಒಬ್ಬರು ಧರ್ಮದ ಆಧಾರದಮೇಲೆ ಅಲ್ಪಸಂಖ್ಯಾತ ವರ್ಗಕ್ಕೂ ಸೇರಿದವರಾಗಿರತಕ್ಕದ್ದು ಮತ್ತು ಒಬ್ಬರು ಸರ್ಕಾರದಿಂದ ನಿರ್ದಿಷ್ಟಪಡಿಸಲಾದ ಹಿಂದುಳಿದ ವರ್ಗಗಳಿಗೆ ಸೇರಿದವರಾಗಿರತಕ್ಕದ್ದು ಎಂಬ ಪದಗಳನ್ನು ಪ್ರತಿಷ್ಠಾಪಿಸತಕ್ಕದ್ದು.

ಪ್ರಸ್ತಾಪವು ಅಂಗೀಕರಿಸಲ್ಪಟ್ಟಿತು ಮತ್ತು ತಿದ್ದುಪಡಿಗೆ ಅನುಮೋದನೆ ನೀಡಲಾಯಿತು ಹಾಗೂ ಖಂಡ 22, ತಿದ್ದುಪಡಿಯಾದಂತೆ ವಿಧೇಯಕಕ್ಕೆ ಸೇರಿಸಲ್ಪಟ್ಟಿತು.

ಖಂಡ 23ರಿಂದ 50ರವರೆಗೆ

ಉಪಾಧ್ಯಕ್ಷಿಣಿಯವರು: "ಖಂಡ 23ರಿಂದ 50ರವರೆಗೆ ಎರಡೂ ಸೇರಿದಂತೆ ಈ ವಿಧೇಯಕದ ಅಂಗವಾಗಿರುತ್ತದೆ.

ಪ್ರಸ್ತಾಪ ಅಂಗೀಕರಿಸಲ್ಪಟ್ಟಿತು.

(ಖಂಡ 23ರಿಂದ 50ರವರೆಗೆ ಎರಡೂ ಸೇರಿದಂತೆ ಈ ವಿಧೇಯಕಕ್ಕೆ ಸೇರಿಸಲ್ಪಟ್ಟಿತು)

ಖಂಡ 1 ಇತ್ಯಾದಿ

ಉಪಾಧ್ಯಕ್ಷಿಣಿಯವರು: "ಪ್ರಸ್ತಾಪ ಏನೆಂದರೆ, "ಮೊದಲನೇ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆ ವಿಧೇಯಕದ ಭಾಗವಾಗಿರುತ್ತದೆ".

ಪ್ರಸ್ತಾವವನ್ನು ಅಂಗೀಕರಿಸಲಾಯಿತು.

(ಮೊದಲನೇ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆಗಳನ್ನು ಈ ವಿಧೇಯಕಕ್ಕೆ ಸೇರಿಸಲಾಯಿತು.)

ಪ್ರಸ್ತಾವದ ಅಂಗೀಕಾರ

ಶ್ರೀ ಎಂ. ವೀರಪ್ಪ ಮೊಯಿಲಿ (ಶಿಕ್ಷಣ ಸಚಿವರು): ಮಾನ್ಯ ಸಭಾಧ್ಯಕ್ಷಿಣಿಯವರೆ, 1991ನೇ ಸಾಲಿನ ಕನ್ನಡ ವಿಶ್ವವಿದ್ಯಾನಿಲಯ ವಿಧೇಯಕವನ್ನು ಅಂಗೀಕರಿಸಬೇಕೆಂದು ಕೇಳಿಕೊಳ್ಳುತ್ತೇನೆ.

ಉಪಾಧ್ಯಕ್ಷಿಣಿಯವರು: ಪ್ರಸ್ತಾಪ ಏನೆಂದರೆ, "1991ನೇ ಸಾಲಿನ ಕನ್ನಡ ವಿಶ್ವವಿದ್ಯಾನಿಲಯ ವಿಧೇಯಕವನ್ನು ತಿದ್ದುಪಡಿ ಮಾಡಿರುವಂತೆ ಅಂಗೀಕರಿಸುವುದು"

ಪ್ರಸ್ತಾಪವು ಅಂಗೀಕರಿಸಲ್ಪಟ್ಟಿತು ಮತ್ತು ವಿಧೇಯಕಕ್ಕೆ ಸರ್ವಾನುಮತದ ಮತ್ತು ಅವಿರೋಧದ ಅನುಮೋದನೆಯು ದೊರೆತಿದೆ.

ಶ್ರೀ ವಾಟಾಳ್ ನಾಗರಾಜ್: ಕನ್ನಡಕ್ಕೆ ಜಯವಾಗಲಿ, ಕನ್ನಡಿಗರಿಗೆ ಜಯವಾಗಲಿ ....

(ಭಾವಿಯಲ್ಲಿ ಧರಣಿ ಕುಳಿತಿದ್ದ ಮಾನ್ಯ ಬಿ.ಜೆ.ಪಿ.ಯ ಸದಸ್ಯರುಗಳು "ರೈತರ ಸಾಲ ಮನ್ನಾ ಮಾಡದ ಸರಕಾರಕ್ಕೆ ಧಿಕ್ಕಾರ" ಎಂದು ಘೋಷಣೆ ಕೂಗುತ್ತಿದ್ದರು)

ಶಾಸನಾತ್ಮಕ ನಿರ್ಣಯ

ಉಪಾಧ್ಯಕ್ಷಿಣಿಯವರು: ಈಗ ಶಾಸನಾತ್ಮಕ ನಿರ್ಣಯಗಳು

ಶ್ರೀ ಎಂ. ವೀರಪ್ಪ ಮೊಯಿಲಿ (ಮಾನ್ಯ ಮುಖ್ಯಮಂತ್ರಿಗಳ ಪರವಾಗಿ): ಸನ್ಮಾನ್ಯ ಉಪಾಧ್ಯಕ್ಷಿಣಿಯವರೆ, ಸನ್ಮಾನ್ಯ ಮುಖ್ಯಮಂತ್ರಿಗಳ ಪರವಾಗಿ ಈ ಶಾಸನಾತ್ಮಕ ನಿರ್ಣಯಗಳನ್ನು ಸಭೆಯ ಗಮನಕ್ಕೆ ತರುತ್ತೇನೆ.

"1948ನೇ ಇಸವಿಯ ವಿದ್ಯುಚ್ಛಕ್ತಿ (ಪೂರೈಕೆ) ಅಧಿನಿಯಮದ (1948ರ ಕೇಂದ್ರದ ಅಧಿನಿಯಮ 54) 65ನೇ ಕಲಮಿನ 1ನೇ ಉಪಕಲಮಿನ ಮೇರೆಗೆ ಕರ್ನಾಟಕ ವಿದ್ಯುಚ್ಛಕ್ತಿ ಮಂಡಲಿ ಯಾವುದೇ ಸಮಯದಲ್ಲಿ ಪಡೆಯಬಹುದಾದ ಸಾಲದ ಮೊತ್ತವನ್ನು ರೂ. 10 ಕೋಟಿಗೂ ಹೆಚ್ಚಿನ ಗರಿಷ್ಠ ಮಿತಿಗೆ ನಿಗದಿಪಡಿಸಲು ಸದರಿ ಕಲಮಿನ 3ನೇ ಉಪಕಲಮಿನ ಮೇರೆಗೆ ರಾಜ್ಯ ವಿಧಾನಸಭೆಯ ಅನುಮೋದನೆ ಬೇಕಾಗಿರುತ್ತದೆ.

ಹಾಗೂ ಈ ಕಾರಣದಿಂದ ದಿನಾಂಕ 27ನೇ ಆಗಸ್ಟ್ 1974ರಂದು ಕರ್ನಾಟಕ ವಿಧಾನಸಭೆಯು ಒಂದು ನಿರ್ಣಯವನ್ನು ಅಂಗೀಕರಿಸುವ ಮೂಲಕ ಕರ್ನಾಟಕ ವಿದ್ಯುಚ್ಛಕ್ತಿ ಮಂಡಲಿಯು ಯಾವುದೇ ಸಮಯದಲ್ಲಿ ಪಡೆಯಬಹುದಾದ ಸಾಲದ ಗರಿಷ್ಠ ಮೊತ್ತವನ್ನು ರೂ.150 ಕೋಟಿ ಎಂದು ನಿಗದಿಪಡಿಸಿರುವ ಸರ್ಕಾರದ ಪ್ರಸ್ತಾವನೆಗೆ ಅನುಮತಿ ನೀಡಿರುತ್ತದೆ.